ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿ ದಲಿತ ಸಂವೇದನೆ

(2000ದಿಂದ 2014ರ ವರೆಗಿನ ದಲಿತ ಮತ್ತು ದಲಿತೇತರ ಕವಿಗಳ ಪ್ರಾತಿನಿಧಿಕ ಕವಿತೆಗಳನ್ನು ಅನುಲಕ್ಷಿಸಿ)

ಕನ್ನಡ ಎಂ.ಫಿಲ್. ಪದವಿಗಾಗಿ ಕಾವ್ಯಮಂಡಲದ ವತಿಯಿಂದ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಮಾರ್ಗದರ್ಶಕರು
ಡಾ. ಚಂದ್ರಣ್ಣ ಗೌಡ ಕೆ.ವಿ.
ಪ್ರಾಂಶುಪಾಲರು
ವಿ.ವಿ.ಪುರಂ ಕಾಲೇಜು
ಬೆಂಗಳೂರು

ಸಂಶೋಧನಾ ವಿದ್ಯಾರ್ಥಿ
ಆನಂದ ವಿ
ನೋಂ. ಸಂಖ್ಯೆ: KVMBKS-00678

ಕಾವ್ಯಮಂಡಲ
ಬೆಂಗಳೂರು
2014

1136

ದೃಢೀಕರಣ ಪತ್ರ

ಆನಂದ ವಿ ರವರು ಎಂ.ಫಿಲ್. ಪದವಿಗಾಗಿ ಬರೆದು ಸಿದ್ಧಪಡಿಸಿರುವ **ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿ ದಲಿತ ಸಂವೇದನೆ** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಕಾವ್ಯ ಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಚಂದ್ರಣ್ಣ ಗೌಡ ಕೆ.ವಿ.
ಪ್ರಾಂಶುಪಾಲರು
ವಿ.ವಿ.ಪುರಂ ಕಾಲೇಜು
ಬಸವನಗುಡಿ
ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 19–07–2014

ಪ್ರಮಾಣ ಪತ್ರ

ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿ ದಲಿತ ಸಂವೇದನೆ ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು **ಡಾ. ಚಂದ್ರಣ್ಣಗೌಡ ಕೆ.ವಿ.** ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಧನ್ಯವಾದಗಳೊಂದಿಗೆ,

ಆನಂದ ವಿ
ಸಂಶೋಧನಾ ವಿದ್ಯಾರ್ಥಿ
ನೋಂ. ಸಂಖ್ಯೆ: KVMBKS-00678

ಸ್ಥಳ: ಬೆಂಗಳೂರು
ದಿನಾಂಕ: 19–07–2014

ಪರಿವಿಡಿ

ಅಧ್ಯಾಯ–1

ಅಧ್ಯಯನದ ಉದ್ದೇಶ–ವ್ಯಾಪ್ತಿ–ಸ್ವರೂಪ

ಅ. ದಲಿತ ಕಾವ್ಯದ ಹಿನ್ನೆಲೆ:

ಕ್ರಿ.ಶಕ.1970ರ ಆರಂಭದಲ್ಲಿ ನವ್ಯ ಸಾಹಿತ್ಯ ಕಾಲ ಘಟ್ಟದ ನಂತರ ಕಂಡು ಬಂದುದು ದಲಿತ–ಬಂಡಾಯ ಸಾಹಿತ್ಯ. ನಾಡಿನ ಎಲ್ಲ ಅವಮಾನಿತರನ್ನು, ಅಸಹಾಯಕರನ್ನು, ದಮನಿತರನ್ನು ಒಳಗೊಳ್ಳುವ, ಅವರ ಬಗೆಗಿನ ಶೋಷಣೆಯ ವಿರುದ್ಧ, ರಕ್ತರಹಿತವಾಗಿ, ಪ್ರಜಾಸತ್ತಾತ್ಮಕವಾಗಿ ನ್ಯಾಯವನ್ನು ಆಗ್ರಹಿಸುವ ಮತ್ತು ಹೋರಾಟ ಸಹಿತದ (ರಕ್ತ–ರಹಿತ)ಕಾವ್ಯವನ್ನು ದಲಿತ–ಬಂಡಾಯ ಕಾವ್ಯ ಎನ್ನುತ್ತೇವೆ. ಬಸವಣ್ಣ, ಅಂಬೇಡ್ಕರ್, ನೆಲ್ಸನ್ ಮಂಡೇಲಾ ಮುಂತಾದವರ ಮಾನವತಾ ವಾದದ ನೆಲೆಯಲ್ಲಿ ರಚಿತವಾದ ಅಂದಿನ ಸಾಹಿತ್ಯ ದಮನಿತರ ಸಮುದಾಯಕ್ಕೆ ಅತ್ಯಗತ್ಯವಾಗಿದ್ದ ಕಾಲ.

ನೊಂದ ಮನುಷ್ಯನ ದುಃಖವನ್ನು ಇನ್ನಿಲ್ಲದಂತೆ ಮಾಡುವುದೇ ಸಾಮಾಜಿಕ ಜೀವನದ ಸಾಹಿತ್ಯ ರಚನಾಕಾರನ ಪ್ರಮುಖ ಜವಾಬ್ದಾರಿ. ಮಾನವ ಕೇಂದ್ರಿತವಾದ ಜೀವಸಾಹಿತ್ಯಕ್ಕಾಗಿ ಆರಂಭಗೊಂಡಿದುದೇ ದಲಿತ–ಬಂಡಾಯ ಸಾಹಿತ್ಯ. ಅಕ್ಷರ ಲೋಕದಿಂದ ಹೊಸ ಬದುಕಿನ ದಿಕ್ಕನ್ನು ದರ್ಶಿಸಿಕೊಂಡು ಕಾವ್ಯಗಳನ್ನು ಕೊಟ್ಟವರ ಮುಖ್ಯ ಆಗ್ರಹ ಸಮಾನತೆ. ಈ ನಿಟ್ಟಿನಲ್ಲಿ ದಲಿತರು, ದಲಿತೇತರರು ಮೇಲಿನವರ ಶತಮಾನದ ವಿನಾಕಾರಣ ದಮನ ಪ್ರವೃತ್ತಿಯನ್ನು ಪ್ರತಿಭಟಿಸಲು ಸೃಜಿಸಿದ ಕಾವ್ಯ 'ದಲಿತ–ಬಂಡಾಯ ಸಾಹಿತ್ಯ'. ಹೀಗಿರುವಾಗ, ಆರಂಭದಲ್ಲಿ ದಲಿತರು ದಲಿತೇತರರು ಒಂದೇ ಮನಸ್ಥಿತಿಯಿಂದ ಆರಂಭಿಸಿದ ಸಾಹಿತ್ಯದ ಹೋರಾಟವು ಚಳವಳಿಯ ಉತ್ತುಂಗತೆಯನ್ನು ಮುಟ್ಟಲು ಪ್ರಯತ್ನಿಸಿತ್ತೇನೋ ನಿಜ.

ಆದರೆ, ಕಾಲಕ್ರಮೇಣ ತನ್ನ ಹೋರಾಟ ಹಾಗೂ ಸಾಹಿತ್ಯ ಕೃಷಿಯ ಒಟ್ಟು ಪ್ರತಿಫಲ ಕೇವಲ ತನ್ನ ಮೂಲ ಸಮುದಾಯದವರ ಪರವಾಗಿರಬೇಕು ಎಂಬಂತಾಯಿತು. ಅಂದರೆ ದಲಿತರು ದಲಿತರ ಪರವಾಗಿ, ದಲಿತೇತರರು ದಲಿತೇತರರ ಪರವಾಗಿ ಮಾತ್ರ ಅಲೋಚಿಸಲು ಮುಂದಾದರು. ಅದು "ಅಂದಿನ ಪರಿಸ್ಥಿತಿ" ಎನ್ನುವುದಕ್ಕಿಂತ ಇಂದಿಗೂ ತಮ್ಮ ಮೂಲ ಉದ್ದೇಶ ಈಡೇರದೆ ಯಥಾಸ್ಥಿತಿಯಲ್ಲಿ ಇರಿಸಿರುವುದು ಪ್ರಶ್ನಾರ್ಹ ಮತ್ತು ಚರ್ಚಾರ್ಹ. ಆದಾಗ್ಯೂ, ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ಪ್ರಕಾರ 'ಆಧುನಿಕ ಕನ್ನಡ ಕಾವ್ಯ'. ಇದಕ್ಕೆ ಒಂದು ಶತಮಾನವೇ ತುಂಬಿಹೋದದ್ದು ದುರಂತವೂ ಗಮನಾರ್ಹವೂ ಆದ ಸಂಗತಿ. ಈ ಅವಧಿಯಲ್ಲಿಯ ಕಾವ್ಯ ತನ್ನ ವೈಶಿಷ್ಟ್ಯತೆಯ ಗರಿ ಬಿಚ್ಚಿಕೊಳ್ಳುತ್ತಲೇ ಸಾಗಿ ಬಂದದ್ದು ವಿಶೇಷ. ಕಾವ್ಯ ಬೆಳೆದಂತೆ ಕಾಲಕಾಲಕ್ಕೆ ತಕ್ಕ ಬದಲಾವಣೆಯನ್ನು ಬಯಸುತ್ತ ಹೋಯಿತು. ಆದ್ದರಿಂದಲೇ ನವೋದಯದ ಕುವೆಂಪು, ಬೇಂದ್ರೆ ಕಾವ್ಯದಂತೆ ನವ್ಯದ ಅಡಿಗರ, ರಾಮಚಂದ್ರಶರ್ಮ, ಚನ್ನಯ್ಯ ಅವರುಗಳ ಕಾವ್ಯವಿಲ್ಲ. ಇವರುಗಳ ಕಾವ್ಯದಂತೆ ಬಂಡಾಯದ ಬರುಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರರ ಕಾವ್ಯವಿಲ್ಲ'[1] ಎಂಬ ವಿಮರ್ಶಕ ಕುಶಾಲರ ಅಭಿಪ್ರಾಯ ಮೇಲಿನ ನನ್ನ ಅಭಿಪ್ರಾಯಗಳನ್ನು ಸಮರ್ಥಿಸುತ್ತದೆ.

ಇವರೆಲ್ಲರಿಗಿಂತಲೂ ಭಿನ್ನವಾದ ಕಾವ್ಯ ಪ್ರಯೋಗವನ್ನು ದಲಿತ ಕವಿಗಳಾದ ಸಿದ್ದಲಿಂಗಯ್ಯ, ದೇವನೂರು ಮಹದೇವ, ಅರವಿಂದ ಮಾಲಗತ್ತಿ, ಎಲ್. ಹನುಮಂತಯ್ಯ, ಕೆ.ಬಿ. ಸಿದ್ದಯ್ಯ, ಮೊಗಳ್ಳಿ ಗಣೇಶ್, ಗಂಗಾರಾಂ ಚಾಂಡಾಳ್, ಸುಬ್ಬು ಹೊಲೆಯಾರ್, ಮೂಡ್ನಾಕೂಡು ಚಿನ್ನಸ್ವಾಮಿ ಹಾಗೂ ಇವರನ್ನು ಅನುಸರಿಸಿ ಬಂದ ಯುವಕರಲ್ಲಿ ಕಾಣಬಹುದು. ಆದರೆ ಇಪ್ಪತ್ತನೇ ಶತಮಾನದ ಕೊನೆಯ ದಶಕಗಳಂತೂ ಸಾಹಿತ್ಯದಲ್ಲಿ ಉಸಿರುಗಟ್ಟಿಸುವ ವಾತಾವರಣವೇ ನಿರ್ಮಾಣ ಮಾಡಿತ್ತು. ಸಾಮಾಜಿಕವಾಗಿ ಮೇಲಿನ ಸ್ಥರದಲ್ಲಿರುವವರು ಬಂಡವಾಳ, ಉತ್ಪಾದನೆಯನ್ನೇ ಗುರಿಯಾಗಿಸಿಕೊಂಡಿರುವ; ಕೇವಲ ಲಾಭದ ದೃಷ್ಟಿಯೇ ಹೆಚ್ಚಿರುವ ವ್ಯವಸ್ಥೆಯಿಂದ ಸಾಮಾಜಿಕವಾದ ಸಮಾಜಮುಖಿ ಸಾಹಿತ್ಯ, ಸಮಾಜ ಸಾಧ್ಯವಿಲ್ಲ ಎಂಬ ಸಂದರ್ಭ ನಿರ್ಮಾಣವಾಗಿತ್ತು. ದಲಿತರೆನ್ನುವ ಸಂಕುಚಿತ ಮನಸ್ಥಿತಿಯಿಂದ ಹೊರಬರಲು, ಆತ್ಮಾಭಿಮಾನದ ಕೂಗು ಹೆಚ್ಚಾಗಿಸುವಷ್ಟು; ಸಾಮಾಜಿಕವಾಗಿ ಸಾಹಿತ್ಯಕವಾಗಿ ಸಂಘರ್ಷಕ್ಕಿಳಿದು ಹೊರಾಡಲೇ ಬೇಕಾದ ಅನಿವಾರ್ಯತೆ ಒದಗಿ ಬಂತು. ಈ ಸಂಕುಚಿತ ವಾತಾವರಣದ ಕಾಲಘಟ್ಟವನ್ನು ಅನುಭವಿಸುತ್ತಲೇ ದಲಿತ–ಬಂಡಾಯ ಸಾಹಿತ್ಯ ಸರಿ ಸುಮಾರು ಎರಡು–ಮೂರು ದಶಕಗಳ ಕಾಲ ಪೂರೈಸಿಯೇ ಬಿಟ್ಟಿತು. ಇದರ ಜೊತೆಗೆ 'ದಲಿತ' ಪದದ ಮಧ್ಯೆ ಒಂದು ಚಿಕ್ಕ ಅಡ್ಡ ಗೆರೆಯೆಂಬ ಅರೆಮನಸಿನ, ಬಂಡಾಯ ಸಾಹಿತ್ಯ ಬಾಲ್ಯದಿಂದ ಯೌವ್ವನಕ್ಕೆ ಕಾಲಿಡುವ ಹೊತ್ತಿಗೆ ಜೊತೆಗಿದ್ದೂ ಇಲ್ಲದಂತಹ ಅತೃಪ್ತ ಜೀವನಾಡಿಗಳಂತಾದವು. ಈ ಬೆಳವಣಿಗೆಯಿಂದ ಕೆಲವು ಬರಹಗಾರರು ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ಪದವೀಧರರಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೂ ದಲಿತಲೋಕದ ಆರಂಭದ ಕವಿ ಮತ್ತು ಸಾಹಿತಿಗಳನ್ನು ವಿಮರ್ಶಿಸುವುದರಲ್ಲಿಯೇ ಹೆಚ್ಚುಕಾಲ ಕಳೆದರು. ಈ ವಿಮರ್ಶಾ ನೆಲೆಯಲ್ಲೇ ಕೆಲವರು ತಮ್ಮ ಕವಿತ್ವವನ್ನು, ಹೋರಾಟದ ಮನೋಭಾವವನ್ನು, ಬಹಿರಂಗವಾಗಿ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವ ಧೈರ್ಯವನ್ನು ಕಂಡುಕೊಂಡರು. ಇದರಿಂದ ಅಂಬೇಡ್ಕರ್ ಬಗೆಗೆ ಆನಂತರ ಬುದ್ಧನ ಬಗೆಗೆ ಹೆಚ್ಚುಹೆಚ್ಚು ಆಳವಾಗಿ ಅಧ್ಯಯನ ಮಾಡಲು ಯುವ ಮನಸುಗಳು ಮುಂದಾದದ್ದು ಅಂದಿನ ವಿಶೇಷಗಳಲ್ಲಿ ಒಂದು ಹಾಗೂ ಇಂದಿನ ಆಧುನಿಕೋತ್ತರ ಕಾವ್ಯದ ಹೊಸ ಪರಿಕಲ್ಪನೆಗೆ ನಾಂದಿಯಾಯಿತು.

2000ದಿಂದ 2014ರ ಇಸವಿವರೆಗೆ ಬರಹದ ನೆಲೆಯಲ್ಲಿ ಹೋರಾಟದ ಕೃಷಿ ಮಾಡುತ್ತಿರುವವರನ್ನು ಅಧ್ಯಯನದ ಅಡಿಯಲ್ಲಿ ತರುವ ಅಗತ್ಯವಿದೆ. ದಲಿತ–ಬಂಡಾಯ ಸಾಹಿತ್ಯ ಕಾಲಘಟ್ಟದ ನಂತರದಲ್ಲಿ ಹೊಸ ಬಗೆಯ ಆಲೋಚನೆ, ಹೊಸ ಹುಡುಕಾಟದಲ್ಲಿರುವ ಯುವ ಬರಹಗಾರರನ್ನು ಬೆಂಬಲಿಸುತ್ತಿರುವ ನಾಡಿನ ಹಿರಿಯ ದಲಿತ ಕವಿಗಳು, ಸಾಹಿತಿಗಳು 'ಆಧುನಿಕೋತ್ತರ' ಕಾಲಘಟ್ಟದ ಪರಿವರ್ತನಾ ಸಾಹಿತ್ಯವನ್ನು ಹೊಸದಿಕ್ಕಿನೆಡೆಗೆ ಕೊಂಡೊಯ್ಯುವ ಎಲ್ಲಾ ಲಕ್ಷಣ, ಭರವಸೆಗಳನ್ನು ಕಾಣಿಸುತ್ತಿರುವ ಬಗೆಗೆ ನನ್ನ ಅಧ್ಯಯನ ಪರಿಶೀಲಿಸುತ್ತದೆ. ಇದರ ಪರಿಣಾಮವಾಗಿ ಬುದ್ಧನ ಜೀವತತ್ವದ ಹಿನ್ನೆಲೆಯಲ್ಲಿ ಹನಸೋಗೆ ಸೋಮಶೇಖರ್, ಲಕ್ಕೂರು ಆನಂದ, ಸುರೇಶ್ ಗೌತಮ್ ಮತ್ತು ಇವರನ್ನು ಅನುಸರಿಸುತ್ತಾ ಹೊಸದಾಗಿ ಚಿಂತಿಸುವ ಅನೇಕ ಕವಿಗಳು ತಮ್ಮ ಅಭಿವ್ಯಕ್ತಿಯನ್ನು ಸಮಾಜಮುಖಿಯಾಗಿಸುವುದರಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಆದರೆ, ದಮನಿತರ ಪರವಾದ ಕವಿಗಳು ಇಂದಿನ ಕಾಲಘಟ್ಟದಲ್ಲಿ ಬರೆಯುತ್ತಿದ್ದರೂ ತಾವು ವಿಮರ್ಶಿಸಿದ ಕಾಲಘಟ್ಟದಲ್ಲಿ ತಮ್ಮನ್ನು ಗುರುತಿಸಿಕೊಳ್ಳದೆ ಇಪ್ಪತ್ತೊಂದನೆ ಶತಮಾನದ ಕವಿಗಳು 'ಹೊಸ ಗನ್ನಡ ಸಾಹಿತ್ಯ'ದ ನಂತರ ತಮ್ಮನ್ನು "ಆಧುನಿಕೋತ್ತರ ಕನ್ನಡ ಕವಿಗಳಾಗಿ" ಗುರುತಿಸಿಕೊಳ್ಳುವ ಆಸಕ್ತಿಯನ್ನು ತೋರುತ್ತಿರುವುದು ಗಮನಿಸಬಹುದಾಗಿದೆ.

ಆ. ಆಧುನಿಕೋತ್ತರ ಕನ್ನಡ ಕವಿಗಳ ಸಮಾನತಾ ಕಾಳಜಿಯ ವೇಗಕ್ಕೆ ಕಾರಣ:

ನೂರಾರು ವರ್ಷಗಳಿಂದ ನಡೆಸಿದ ಸಂಘರ್ಷ, ಸಂಘಟನೆಗಳ ತಪಸ್ಸು, ತಾಳ್ಮೆ ವಹಿಸಿದ ಕಾಲ, ಸಮಸ್ಯೆಯ ಅರಿವು, ಪಟ್ಟಭದ್ರರು ತಡೆಸಿದ ತಂತ್ರಗಾರಿಕೆ, ಶಿಕ್ಷಣದಿಂದ ದೂರವಿರಿಸಿದ್ದ ವ್ಯವಸ್ಥೆ, ನೀತಿ ರಹಿತ ಪೌರೋಹಿತ್ಯ–ಅಸಮಾನತೆಯನ್ನೇ ಹೊದ್ದು ಮಲಗಿದ್ದ ಧರ್ಮದ ವಂಚನೆ ಇಂದಿನ ಹೊಸ ಶಿಕ್ಷಣ ಅರಿವಿಗೆ ತರಿಸಿತು. ಇವೆಲ್ಲವನ್ನೂ ಕೀರಲು ಧ್ವನಿಯಿಂದ ಸಮಾನತೆಯನ್ನು ಬೇಡುವ ಪರಿ, ಇನ್ನೂ ಅದೆಷ್ಟೋ ಅಮಾನವೀಯ ಕರ್ಮಾಚರಣೆಗಳು, ಫಲಕಾಣದ ದಮನಿತರ ನಿರಾಶೆ–ವಿಷಾಧವನ್ನು ದಮನಿತರೇ ತೊಡೆದುಹಾಕಬೇಕೆಂಬ ಧೋರಣೆ ದಲಿತರಲ್ಲಿ ಛಲವಾಯಿತು. ಈ ಪರಿಣಾಮದ ಹಿಂದೆ ಹೊಸ ತಲೆಮಾರಿನ ಅಂಬೇಡ್ಕರ್ ವಾದ, ಅವರ ಬದುಕು–ಬರಹಗಳನ್ನು ಆಳವಾಗಿ ಅಧ್ಯಯನ ಮಾಡಿದ ಬಹುಜನ ಸಮಾಜದ ವಿದ್ಯಾರ್ಥಿ ಸಮುದಾಯ, ಕವಿಗಳು, ಲೇಖಕರು, ಕಲಾವಿದರು, ಸಂಶೋಧಕರು, ನಟರು ಮತ್ತು ಜೀವತತ್ವದ ಮೇಲೆ ನಂಬಿಕೆಯಿರಿಸಿಕೊಂಡ ಎಲ್ಲಾ ಯುವ ಮನಸುಗಳು ವರ್ತಮಾನದ ಈ ಎಲ್ಲಾ ಸಮಸ್ಯೆಗಳಿಗೆ ಈಗಿರುವ ಪ್ರಭಲ ಅಸ್ತ್ರಗಳಲ್ಲಿ ಅಕ್ಷರ ಮಾಧ್ಯಮ ಮುಖ್ಯವಾದುದು ಎಂದು ಖಚಿತ ಪಡಿಸಿಕೊಂಡರು. ಇದರ ಪರಿಣಾಮವೇ 'ಆಧುನಿಕೋತ್ತರ ಕನ್ನಡ ಕಾವ್ಯವೆಂಬ ಪ್ರಧಾನ ಧಾರೆ'. ಈ ಮೂಲಕ ಹೊಸ ಆಲೋಚನೆಯನ್ನು, ಸಮಸ್ಯೆಯನ್ನೂ ಅದಕ್ಕೆ ಪರಿಹಾರವನ್ನೂ ಕಂಡುಕೊಳ್ಳಲು ಕಾವ್ಯವನ್ನು ಅಸ್ತ್ರವಾಗಿಸಿಕೊಂಡಿದೆ. ಇದು ಅಂಬೇಡ್ಕರ್ ಹಾಕಿ ಕೊಟ್ಟ ರಕ್ತರಹಿತ, ಪ್ರಜಾಸತ್ತಾತ್ಮಕ, ಪ್ರಜಾಪ್ರಭುತ್ವವಾದದಲ್ಲಿ ನಂಬಿಕೆಯನ್ನು ಹೊಂದಿರುವ ಸಮಸ್ತ ಭಾರತದ ಶೋಷಿತರ ಮುಖವಾಣಿಯೇ ಆಗಿದೆ ಎಂಬುದು ಸ್ಪಷ್ಟಪಡಿಸುತ್ತದೆ. ಇದಕ್ಕೆ ಈ ಕ್ಷಣದವರೆವಿಗೂ ಶಾಂತಿಪ್ರಿಯರಾಗಿರುವ ಸಮಸ್ತ ಭಾರತದ ದಮನಿತ ಸಮುದಾಯದ ನಡವಳಿಕೆಯೇ ಸಾಕ್ಷಿ ಎಂಬುದನ್ನು ಘೋಷಿಸುತ್ತದೆ.

ಭಾವುಕರಾಗಿ ಬುದ್ಧಿಪೂರ್ಣರಾದವರ ಮೂಲಭೂತ ಸಾಹಿತ್ಯವನ್ನು, ಶೋಷಣೆಯನ್ನು ಏಕಕಾಲದಲ್ಲಿ ಪ್ರಶ್ನಿಸುವ ನಿಟ್ಟಿನಲ್ಲಿ ತಮ್ಮ ಬದುಕನ್ನೇ ಚಳುವಳಿಯನ್ನಾಗಿಸಿ ಹೋರಾಟಕ್ಕೆ ದೊಡ್ಡ ಹೆಜ್ಜೆಯನ್ನೇ ಕೊಟ್ಟವರು ದಲಿತ–ಬಂಡಾಯ ಸಾಹಿತಿಗಳು. ಆದರೆ, ಬರಬರುತ್ತಾ ಕವಲಾದುದು ರಾಜಕೀಯ ಅಪೇಕ್ಷೆಯೇ–ಸ್ವಸಮುದಾಯದ ಅಸ್ಥಿತ್ವದ ಪ್ರಶ್ನೆಯೇ–ಮೀಸಲಾತಿಯೇ ಪ್ರಮುಖ ಪ್ರಶ್ನೆಯಾಯಿತು. ಅದನ್ನು ಅಷ್ಟು ಬೇಗ ಋಣಾತ್ಮಕವಾಗಿ ಅರ್ಥೈಸಿದ–ಅರ್ಥೈಸುವ ವಿಷವರ್ತುಲದಲ್ಲಿ ಮತ್ತೆ ದಮನಿತರನ್ನು ಸುಣ್ಣವಾಗಿಸುವ ಬ್ರಾಹ್ಮಣ್ಯ ಮನಸ್ಥಿತಿ 80ರ ದಶಕದ ಆಸುಪಾಸಿನಲ್ಲಿ ವಿಜೃಂಭಿಸಿತು. ಸರ್ವರನ್ನು ಒಳಗೊಳ್ಳುವ, ಸುಲಭವಾಗಿ ನಾಲಗೆಯಲ್ಲಿ ಹರಿದಾಡುವ ಇನ್ನೂ ಮಲಗಿರುವವರ ಬಗೆಗಿನ ಸಾಹಿತ್ಯ ಬೇಕು; ಅದು ಹೀಗಿದೆ! ಎನ್ನುವಷ್ಟರಲ್ಲೇ ಚರ್ಚೆ, ವಿಮರ್ಶೆ, ಪ್ರೋತ್ಸಾಹವಿಲ್ಲದೆ ಬ್ರಾಹ್ಮಣ್ಯದ ಕೈಗೆ ಸಿಕ್ಕಿ ನರಳುವಂತಾದುದು ದುರಂತ. ಅದನ್ನು ಅರ್ಥೈಸಿಕೊಳ್ಳದ ದಲಿತ ದಲಿತೇತರರು (ಸ್ವಾರ್ಥ) ಕಪೋಲ ಕಲ್ಪಿತ ಸಾಹಿತ್ಯದ ಜಾಡು ಹಿಡಿದದ್ದು ಇನ್ನೂ ದುರಂತ. ಆದಾಗ್ಯೂ ದಲಿತರು ದಲಿತೇತರರ, ಅಲ್ಪ ಸಂಖ್ಯಾತರ, ಮಹಿಳೆ–ಮಕ್ಕಳ ಬಗೆಗೂ; ದಲಿತೇತರರು ದಲಿತರ, ಹಿಂದುಳಿದವರ, ಅನ್ಯ ಜಾತಿಯವರ ಬಗಗೆ ಸಾಹಿತ್ಯವನ್ನು ಹೊರಗಿನಿಂದಲೇ ಅಭಿವ್ಯಕ್ತಿಸಿದ್ದುದು ಸಾಹಿತಿಯ ಮನಸ್ಸಿನ ಮಾನವತೆಯೇ ಕಾರಣ. ಇದು ನಿಜವೆನ್ನುವಂತೆ ಸಮಾನತೆಗಾಗಿ ತುಡಿವ ದಲಿತ–ಬಂಡಾಯ ಸಮನ್ವಯ ಕವಿಗಳನ್ನು ನೆನಪಿಸಿಕೊಳ್ಳುವುದಾದರೆ:

ದೇವನೂರ ಮಹಾದೇವ, ಎನ್.ಎಸ್.ಶಂಕರ್, ಕಾಳೇಗೌಡ ನಾಗವಾರ, ಬಂಜಗೆರೆ ಜಯಪ್ರಕಾಶ, ಬಿಸ್ಲಳ್ಳಿ ಪುಟ್ಟರಾಜು, ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ, ನಂಜುಂಡ ಸ್ವಾಮಿ, ಜಿ.ಎಸ್.ಸಿದ್ಧಲಿಂಗಯ್ಯ, ರಹಮತ್ ತರೀಕೆರೆ, ನಟರಾಜ್ ಹುಳಿಯಾರ್, ಕೆ.ಎಸ್. ಭಗವಾನ್, ಬೆಸಗರಹಳ್ಳಿ ರಾಮಣ್ಣ, ಸಿ.ನಾಗಣ್ಣ, ಎಚ್.ಎಲ್.ಕೇಶವಮೂರ್ತಿ, ಹಿ.ಸಿ. ರಾಮಚಂದ್ರಗೌಡ, ಕಿ.ರಂ. ನಾಗರಾಜ, ಕುರುವ ಬಸವರಾಜು, ಮರುಳ ಸಿದ್ದಪ್ಪ, ಕೆ.ವೈ. ನಾರಾಯಣಸ್ವಾಮಿ, ರಾಮಲಿಂಗಪ್ಪ ಟಿ. ಬೇಗೂರು, ಜಯಶಂಕರ ಹಲಗೂರು, ಲಕ್ಷ್ಮೀಪತಿ ಕೋಲಾರ, ಪ್ರೊ.ಬಿ.ಕೃಷ್ಣಪ್ಪ, ಎಲ್. ಹನುಮಂತಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಸುಬ್ಬು ಹೊಲೆಯಾರ್, ಕುಂ.ವೀ, ಗಂಗಾರಾಂ ಚಾಂಡಾಳ್, ಎಲ್.ಸುರೇಶ್, ಅರವಿಂದ ಮಾಲಗತ್ತಿ, ಧರಣಿ ದೇವಿ ಮಾಲಗತ್ತಿ, ಮಾನಜ, ಅಪ್ಪಗೆರೆ ಸೋಮಶೇಖರ್, ನರೇಂದ್ರ ಕುಮಾರ್, ಬಿ.ಯು. ಸುಮ, ಬಿ.ಟಿ. ಜಾಹ್ನವಿ, ಪ್ರತಿಭಾ ನಂದಕುಮಾರ್, ಕೆ.ಬಿ. ಸಿದ್ಧಯ್ಯ, ಲಕ್ಕೂರು ಆನಂದ್, ಅನಿಕೇತನ, ಅಣ್ಣಯ್ಯ, ಸಿ. ಬಸವಲಿಂಗಯ್ಯ, ಜನ್ನಿ, ದು. ಸರಸ್ವತಿ, ಪುಟ್ಟರಾಜು ಚಾಮರಾಜನಗರ, ಚಂದ್ರಣ್ಣಗೌಡ ಕೆ.ವಿ., ವೆಂಕಟೇಶ್‌ಮೂರ್ತಿ, ಟಿ. ಯಲ್ಲಪ್ಪ, ಎಲ್.ಸಿ. ರಾಜು, ಲಂಕೇಶ ಅಪ್ಪಗೆರೆ, ಅನಸೋಗೆ ಸೋಮಶೇಖರ್, ಪ್ರಸಾದ್ ಕುಂದೂರು, ಕೃಷ್ಣ ಜನಮನ, ಕೃಷ್ಣಮೂರ್ತಿ(ಚಮರಂ), ಸೋಮಸುಂದರ(ಹಂಸ), ಮೊಗಳ್ಳಿಗಣೇಶ್, ಷಹಪುರ, ಶಂಕನಪುರಮಹದೇವ, ಎಂ.ಎಸ್.ಶೇಖರ್, ಮರಿಯಪ್ಪ ನಾಟೇಕರ್, ಅನಸೂಯ ಕಾಂಮ್ಳೆ, ವೀರಣ್ಣ ಮಡಿವಾಳ್, ಎಚ್.ಎಲ್. ಪುಷ್ಪ, ಶಿವಕುಮಾರ್ ಕಂಪ್ಲಿ, ಚಂದ್ರ ಕಿರಣ್, ಮಂಜುನಾಥ ಲತಾ, ಆನಂದ. ವಿ ಇನ್ನೂ ಮುಂತಾದ ಇತ್ತೀಚಿನವರ ಬಹಳಷ್ಟು ಆಧುನಿಕೋತ್ತರ ಜೀವತತ್ವದ ಕಾವ್ಯಗಳು ಜೀವಸಾಹಿತ್ಯ ಪರ ಕಾವ್ಯ–ಸಂವೇದನೆಯಲ್ಲಿ ಮಾನವೀಯ ಕಾಳಜಿಯನ್ನು ಪ್ರಕಟಿಸಿವೆ. ಈ ದಲಿತ–ಬಂಡಾಯವೆನ್ನೋ ಎರೆಡೂ ತೊರೆಗಳು ಮತ್ತೆ ಒಂದಾಗಿ ಮತ್ತಷ್ಟು ಹತ್ತು ಹಲವು ಕಿರಿದೊರೆಗಳನ್ನು ಒಟ್ಟಾಗಿಸಿ ಸಾಗಲಿ, ಸಾಗುವ ಮುಖೇನ ಅವಮಾನಿತರ, ಅಸಂಘಟಿತರ ಹಸಿದವರ ಹಪಾಹಪಿಯನ್ನು ಕಡಿಮೆಗೊಳಿಸುವ ಬಗೆಗೆ ತುಡಿತವನ್ನು ಹೆಚ್ಚಿಸಿಕೊಳ್ಳಲಿ ಎನ್ನುವುದರ ಮೂಲಕ ಜಾತ್ಯತೀತ ಸಮಾನತಾ ಮನಸುಗಳಿಗೆ ಪ್ರೇರಣೆಯನ್ನು ಒದಗಿಸಬೇಕೆಂಬುದೇ ಅಧ್ಯಯನದ ಉದ್ದೇಶವಾಗಿದೆ.

ಇ. ಅಧ್ಯಯನದ ವ್ಯಾಪ್ತಿ:

ನಾಲ್ಕು ಜನ ದಲಿತ ಕವಿಗಳು ಹಾಗೂ ಇಬ್ಬರು ದಲಿತೇತರರ ಕವಿಗಳು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. ಪ್ರಸ್ತುತ ಅಧ್ಯಯನವು ಕವಿಗಳಾದ: **ಸುರೇಶ್ ಗೌತಮ್, ಲಕ್ಕೂರು ಆನಂದ, ಹನಸೋಗೆ ಸೋಮಶೇಖರ್ ಮತ್ತು ಅರವಿಂದ ಮಾಲಗತ್ತಿ ಅವರ 2000ದಿಂದ 2014ರ ವರೆಗೆ** ಬರೆದ ಕಾವ್ಯಗಳನ್ನು ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ. ಮತ್ತು ಇದೇ ಮನಸ್ಥಿತಿಯಲ್ಲಿ ಇರುವ ನಮ್ಮ ನಡುವಿನ ದಲಿತೇತರ ಕವಿಗಳು ಪ್ರಬಂಧಕಾರರು, ಮನೋವೈಜ್ಞಾನಿಕ ನೆಲೆಯಲ್ಲಿ ಚಿಂತಿಸುತ್ತಿರುವ ಲೇಖಕರಾದ ಸಿಪಿಲೆ ಸತೀಶ್ ಹಾಗೂ ಸಂಶೋಧಕರು, ತಳಸಮುದಾಯದ ಸಂಸ್ಕೃತಿ ಬಗೆಗೆ ಆಳವಾಗಿ ಅಧ್ಯಯನ ಮಾಡಿರುವ; ಮಾಡುತ್ತಿರುವ ಚಿಂತಕರು, ಕಪಿಗಳಾದ ಬಂಜಗೆರೆ ಜಯಪ್ರಕಾಶರ 'ಮಹೂವಾ' ಕಾವ್ಯದ ಕೆಲವು ತಾತ್ವಿಕ ಕವಿತೆಗಳನ್ನು ಸಾಂದರ್ಭಿಕವಾಗಿ ಅಧ್ಯಯನ ವ್ಯಾಪ್ತಿಯ ಚೌಕಟ್ಟಿನಲ್ಲಿ ವಿವರಿಸಿ ವಿಶ್ಲೇಷಿಸುವುದಾಗಿದೆ.

ಅಂದು ಸಮಾನತೆಗಾಗಿ ದಲಿತತ್ವ 'ಚಳವಳಿಯ' ರೂಪ ಪಡೆದುಕೊಂಡಿತು. ಅ ಮೂಲಕ ಆಂದೋಲನವನ್ನು ಸಾರ್ವತ್ರಿಕವಾಗಿ ಕೊಂಡೊಯ್ಯಲು ಕಾವ್ಯವನ್ನು ಪ್ರಧಾನ ಅಸ್ತ್ರವಾಗಿಸಿಕೊಳ್ಳಲಾಯಿತು. ಕಾವ್ಯ ಬರೆಯುವ ಮೂಲಕ 'ಸಾಹಿತ್ಯ ಚಳುವಳಿ'ಯೂ ಆರಂಭಿಸಲಾಯಿತು; ಸಾಮಾಜಿಕ ಬಹಿಷ್ಕಾರಗಳಿಂದಾಗಿ ಸಾಮಾಜಿಕ ಸಮಾನತೆಗಾಗಿ 'ಸಾಮಾಜಿಕ ಚಳವಳಿ'ಯೂ ಆಗ ಆಗಿತ್ತು. ಅದೇ ಸಮಯದಲ್ಲಿ ಅದು ರಾಜಕೀಯ ಚಳವಳಿಯಾಗಬೇಕಾಗಿತ್ತು. ಆಗಲ್ಲಿಲ್ಲ. ಹಾಗೆಯೇ ಇಂದೂ ಸಹ ದಲಿತ ಚಳವಳಿಯನ್ನು ಕಾವ್ಯ ಚಳವಳಿಯನ್ನಾಗಿ ನೋಡುವ ಬಹು ಸಾಧ್ಯತೆಗಳಿದ್ದರೂ ಅದು ಸಾಧ್ಯವಾಗುತ್ತಿಲ್ಲ. ಈಗ ಸಾಹಿತ್ಯತ್ವದ ನೆಪದಲ್ಲಿ ಬೇರೆಬೇರೆ ರೂಪ ಪಡೆದು ಕವಲುಗಳಾಗುತ್ತಿವೆ. ದಲಿತ ಚಳವಳಿ ಕಾವ್ಯ ಚಳವಳಿಯಾಗಿ ಪರಿವರ್ತನೆಯಾಗಬೇಕೆಂಬ ಅಭಿಪ್ರಾಯದ ಅರಿವಿದ್ದರೂ **'ಉದ್ದೇಶ' 'ಗುರಿ'** ಮರೆತು ಹೋಗುತ್ತಿವೆ.

ಎಷ್ಟೋ ವಿಮರ್ಶಕರ ಕೈಲಿ ಈವರೆಗೂ ಉಳ್ಳವರ, ಮೇಲ್ವರ್ಗದವರ ಕೃತಿಗಳು ಮಾತ್ರ ಚರ್ಚೆಗೆ ಒಳಗಾಗಿವೆ. ಆದರೆ ಮುಖ್ಯವೂ ಪ್ರಧಾನವೂ, ನೇರವೂ, ಸಮಾಜಮುಖಿಯೂ, ಮಾನವರ ಪರವಾದ ಅದೆಷ್ಟೋ ದಮನಿತರ ಬಗೆಗಿನ ಕಾವ್ಯ–ಕೃತಿಗಳು ಅವಜ್ಞೆಗೆ ಒಳಗಾಗಿವೆ. ಈ ನೆಲೆಯಲ್ಲಿ ಕನ್ನಡ ಕಾವ್ಯ ವಿಮರ್ಶೆ ಪುನರ್ ಪರಿಶೀಲನೆಗೆ ಒಳಪಡಿಸಬೇಕೆಂಬುದರಲ್ಲಿ ಎರೆಡು ಮಾತಿಲ್ಲ. ಅಂತೆಯೇ ಉತ್ತರ ಕನ್ನಡದ ಕವಿ ಮತ್ತು ದಕ್ಷಿಣ ಕನ್ನಡದ ಕವಿಯೆಂಬ ತಾರತಮ್ಯವನ್ನೂ ಹಾಗೆಯೇ ಬಲಗೈ ಕವಿ ಮತ್ತು ಎಡಗೈ ಕವಿ ಎಂಬ ತರತಮ ಭಾವ ಸಾಹಿತ್ಯವಲಯದಲ್ಲಿ ಇಂದು ಹೆಚ್ಚಾಗಿದ್ದು ಅದು ಇನ್ನಾದರೂ ತಪ್ಪಬೇಕಾಗಿದೆ. ಸಾಹಿತ್ಯ ಲೋಕದಲ್ಲಿ ಕುವೆಂಪುರವರಿಗೂ ಮೊದಲು ಸಾಹಿತ್ಯ ಕೃಷಿಮಾಡಿದ 'ಸೋಸಲೆ ಸಿದ್ದಪ್ಪ', 'ಗೋವಿಂದ ದಾಸ', 'ವೆಂಕಟಯ್ಯ' ಮತ್ತು 'ಎನ್. ನರಸಿಂಹಯ್ಯ'ನವರು ದಲಿತ ಲೋಕದಲ್ಲಿ ಪ್ರಮುಖರಾಗಿದ್ದಾರೆ. ಈಗಾಗಲೇ ಅವರ ಬಗೆಗಿನ ಅಧ್ಯಯನಗಳಾಗಿದ್ದು ಅವರು ಅಂದಿನ ವ್ಯವಸ್ಥೆಯೊಂದಿಗೆ ನಡೆಸಿದ ಮುಖಾಮುಖಿಯನ್ನು; ಸಂವೇದನೆಯನ್ನು ಇಂದಿನ ಆಧುನಿಕೋತ್ತರ ಕನ್ನಡ ದಲಿತ ಕವಿಗಳು ಮುಖ್ಯವೆಂದೇ ಭಾವಿಸಿದ್ದಾರೆ. ಸಿದ್ಧಲಿಂಗಯ್ಯರಿಗೂ ಮೊದಲು ಮೂಡಿದ ಅಂಬೇಡ್ಕರ್ ಸಮಕಾಲೀನ ದಲಿತ ಸಾಹಿತ್ಯಲೋಕದ ಆದಿಮನಸುಗಳನ್ನು ಆಧುನಿಕೋತ್ತರ ಕನ್ನಡ ಕಾವ್ಯಕ್ಕೆ ಮಾದರಿಯೆಂದು ಒಪ್ಪಿದೆ. ಅರ್ಥಾತ್ ಹಳೆಯದರೊಂದಿಗೆ ಇದೂವರೆಗಿನ ಹೊಸದನ್ನೂ ಮಹತ್ತನ್ನು ಪಡೆಯಲು ಸಾಧ್ಯ ಮತ್ತು ಅದನ್ನು ಸಮಾಜ ಗಟ್ಟಿಯಾಗಿ ಅಪ್ಪಿಕೊಳ್ಳುತ್ತದೆಯೆಂಬ ವಿಶ್ವಾಸ ಇದೂವರೆಗಿನ **ದಲಿತ ಆದಿ ಕವಿ–ಸಾಹಿತಿಗಳ ವಿಶೇಷ ಅಧ್ಯಯನ** ಸಾಕ್ಷೀಕರಿಸಿದೆ.

ಅಂತೆಯೇ ದಲಿತ ಸಮುದಾಯದ ಹೋರಾಟಗಾರರಿಗೆ ಅಂಬೇಡ್ಕರರ ತತ್ವದ ಗುರಿಯೇನೆಂಬುದು ಕೆಲವರಲ್ಲಿಯೇ ಗಿರಿಕಿಹೊಡೆದಿದೆಯೆ ಹೊರತು ಅದನ್ನು ಪ್ರಸರಿಸಿಲ್ಲ. ಈ ಮೊದಲು ನಿಜವಾಗಿ ಅಂಬೇಡ್ಕರಿಸಂ ಸರಿಯಾಗಿ ಅರ್ಥವಾಗಿರಲಿಲ್ಲ. ಯಾರೋ ಹೇಳಿಕೊಟ್ಟಿದ್ದು; ಬರೆದುಕೊಟ್ಟಿದ್ದು ಬಿಟ್ಟರೆ ನಿಜಾಂಶದ ಬಗ್ಗೆ ಅನುಮಾನಗಳಿದ್ದವು. ಆದರೆ ಇಂದು ಸ್ಪಷ್ಟವಾಗಿ ಒರಿಜಿನಲ್ ಅಂಬೇಡ್ಕರ್ ವಿಚಾರ; ಚಿಂತನೆ ದಲಿತ ಚಳವಳಿಯವರಿಗೆ ನೇರವಾಗಿ ದಕ್ಕಿ ಅರ್ಥವಾಗಿಸಿದೆ. ತಾವೇ ಓದಿಕೊಳ್ಳುವ ಅರ್ಥೈಸಿಕೊಳ್ಳುವಷ್ಟು ಜಾಣ ಅರಿವು ದಲಿತರಲ್ಲಿ ಮೂಡಿದೆ. ಈ ನಿಟ್ಟಿನಲ್ಲಿ ಇಂದು ಯುವ ಪೀಳಿಗೆ, ಬಹುಜನ ವಿದ್ಯಾರ್ಥಿ ಸಮುದಾಯಗಳು ದಲಿತ ಚಳವಳಿಗೆ ಒಂದು ವೈಚಾರಿಕೆಯನ್ನು ಗಟ್ಟಿಗೊಳಿಸಿದೆ. ಇದೇ ದಾರಿಯಲ್ಲಿ ಹೆಚ್ಚುಹೆಚ್ಚು ಅಂಬೇಡ್ಕರರನ್ನು ಓದಿಕೊಳ್ಳುವ ಮನಸುಗಳು ಹುಟ್ಟಿಕೊಳ್ಳುತ್ತಿವೆ. ಇಂದು ನೇರವಾದ ಅಂಬೇಡ್ಕರರ ಚಿಂತನೆ ಸಾಧ್ಯವಾಗಿದೆ. ಅಂದು ದಲಿತ ಚಳುವಳಿಯೊಂದಿಗೆ ಶೂದ್ರ ಮನಸ್ಸುಗಳೂ ಕೂಡಿಕೊಂಡಿದ್ದವು.

ನೇರವಾಗಿ ನಿಮ್ನ ವರ್ಗದವರು ಪಾಲ್ಗೊಳ್ಳಲು ಸಾಧ್ಯವಾಗದಂತಹ ವಾತಾವರಣ ನಿರ್ಮಾಣವಾಗಿತ್ತು. ಆ ಕಾರಣಕ್ಕಾಗಿಯೇ ಕ್ರಮೇಣ ಕವಲುಗಳಾಗಿ ಹೊಡೆದುಕೊಂಡದ್ದು ಗೊತ್ತಿರುವ ದುರಂತ ಇತಿಹಾಸ. ಆಧುನಿಕೋತ್ತರ ಕನ್ನಡ ಕಾವ್ಯ ಸಂದರ್ಭದಲ್ಲಿ ಇಂದು ದಲಿತರದ್ದೇ ಆದ ಚಿಂತನೆ ದಕ್ಕಿದೆ. ನೇರ ಸ್ಪಷ್ಟ ಗುರಿಯೆಡೆಗೆ ಚಳವಳಿ ಹೊರಡಲು ಸಿದ್ಧವಾಗಿದೆ. ದಲಿತ ಪರವಾದ ಯಾವುದೇ ಬಗೆಯ ಹೋರಾಟಕ್ಕೆ ಸಶಕ್ತವಾಗಿದೆ. ಆದರೆ ಹಿಂದಿನ ದಲಿತ ಮನಸುಗಳು ಇಂದು ಜಡ್ಡು ಹಿಡಿದು ರೋಸಿಹೋಗಿವೆ. ವಾಸ್ತವವಾಗಿ ಹೊಸತನ ಬಯಸುತ್ತಿರುವ ಇಬ್ಬರೂ ಪರಸ್ಪರ ಮೂದಲಿಸಿಕೊಳ್ಳುವ ಬದಲು ಮಾನಸಿಕವಾಗಿ ದೈಹಿಕವಾಗಿ ಒಂದೆಡೆ ಸೇರುವ; ಸಮಾನ ಮನಸುಗಳನ್ನು ಕೂಡಿಸುವ; ಪ್ರಭಲ ಸಶಕ್ತ ಪಡೆಯನ್ನಾಗಿಸುವ ಮೂಲಕ ಮುಖ್ಯ ಜನಪರ ಚಳವಳಿಯನ್ನಾಗಿಸುವ ತುರ್ತಿದೆ. ಹಿರಿಯ ಮನಸುಗಳು, ಯುವ ಚಿಂತಕರು ಒಂದೆಡೆ ಸೇರುವ ಸಂದರ್ಭ ಬಂದಾಗ ನಿಜವಾದ ದಲಿತ ಮಾರ್ಗ ಅಂತ ಏನು ಹೇಳುತ್ತೇವೆಯೋ ಅದು ಸಾಕಾರಗೊಳ್ಳುತ್ತದೆ. ಆಗ ಮಾತ್ರ ಅದು ಕೇವಲ ದಲಿತ ಮಾರ್ಗವಾಗದೇ ಬೌದ್ಧಮಾರ್ಗವೂ ಆಗುತ್ತದೆ. ಆ ಮೂಲಕ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕವಾದ ಮತ್ತು ಸಾಹಿತ್ಯಕವಾದ ಬಹುಮಾರ್ಗದ ಆಯಾಮವನ್ನು ತನ್ನಂತಾನೇ ವಿಸ್ತರಿಸಿಕೊಳ್ಳುತ್ತದೆ. ಎಲ್ಲವೂ ತನ್ನಕಡೆಗೆ ಸೆಳೆದುಕೊಂಡು ಶತಮಾನದ ಶೋಷಿತರ ಬಹುಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಫಲಪ್ರದವಾದ ನೂರಾರು ಬಾಗಿಲುಗಳು ಸಂದರ್ಭಕ್ಕನುಗುಣವಾಗಿ ತೆರೆದುಕೊಳ್ಳುತ್ತವೆ.

ಈ ಹಿಂದೆ ಇಂತಹ ಮುಕ್ತತೆ ಇಷ್ಟು ಪ್ರಮಾಣದಲ್ಲಿ ಸಾಧ್ಯವಾಗಿರಲಿಲ್ಲ. ಮೇಲ್ವರ್ಗದವರು, ಶೂದ್ರರೂ ಬೌದ್ಧಿಕವಾಗಿ ಸಾಮಾಜಿಕವಾಗಿ ಹೊರಟಿದ್ದ ಮಾರ್ಗವನ್ನು ಹಿಂಬಾಲಿಸಿದ್ದ ದಲಿತ ಚಳವಳಿಗೆ ದಲಿತರದ್ದೇ ಆದ ತಾತ್ವಿಕತೆಯ ಕೊರತೆಯಿತ್ತು. ಆದರೆ ತಮ್ಮದೇ ಆದ ಚಿಂತನೆ, ಜ್ಞಾನ, ನಾಯಕತ್ವ ಹೀಗೆ ಎಲ್ಲಾ ಬಗೆಯ ವ್ಯಕ್ತಿತ್ವ-ಸಿದ್ಧಾಂತಗಳು ಸಿಕ್ಕಿದೆ. ಅದು ಹಿಂದೆ ದಕ್ಕದೆ ಇದ್ದುದರಿಂದ ಗೊಂದಲಕ್ಕೊಳಗಾದ ದಲಿತ ಚಳವಳಿ ನಿರಂತರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗಲಿಲ್ಲ. ಈ ಇಪ್ಪತ್ತೊಂದನೆ ಶತಮಾನದ ಕಾಲದಲ್ಲಿ ಎಲ್ಲಾ ವರ್ಗ; ಜಾತಿ; ಕೋಮಿನ ಮನಸುಗಳನ್ನು ಒಂದೇ ಬಗೆಯ ದಿಕ್ಕಿಗೆ ಕರೆದುಕೊಂಡು ಹೋಗುವ ನಾಯಕತ್ವದ ಅಗತ್ಯವಿದೆ. ಈ ಅರಿವನ್ನು ಈ ಕಾಲದ ನವ-ಯುವ ತರುಣರೆದೆಗೆ ಅರ್ಥಮಾಡಿಸುವ ಅಗತ್ಯ ಆಧುನಿಕೋತ್ತರ ಕನ್ನಡ ದಲಿತ ಕವಿಗಳ ಸವಾಲಾಗಿದೆ. ಅದು ಈ ಕಾಲದ ತಂತ್ರವಾಗಬೇಕು. ಆಗ ಸಾಹಿತ್ಯವೂ, ಕಾವ್ಯವೂ, ಚಳವಳಿಯೂ, ಸಾಮಾಜಿಕ ಸಮಸ್ಯೆಗಳೂ ಮುಖ್ಯವಾಗುತ್ತವೆ. ಉದ್ದೇಶಿತ ಹೊಸ ಸಮಾಜ ನಿರ್ಮಾಣದ ಕನಸು ನನಸಾಗುತ್ತದೆ.

ಈ ನಿಟ್ಟಿನಲ್ಲಿ ಕವಿ ಅರವಿಂದ ಮಾಲಗತ್ತಿಯವರೇ ನಿರ್ದೇಶಿಸುವಂತೆ ಬಹುಜನರ ಆದಿ ಕವಿಯೆನಿಸಿರುವ ಹನಸೋಗೆ ಸೋಮಶೇಖರ್‌ರವರನ್ನು "ಈ ಶತಮಾನದ ದಲಿತ ಜನಾಂಗದವರನ್ನು ಹಿಂದೆಂದಿಗಿಂತಲೂ ಹೆಚ್ಚಾಗಿ ಜಾಗೃತಿ ಮೂಡಿಸುವ ಮೂಲಕ ದಲಿತ ಚಳವಳಿಗೆ ಒಂದು ತಿರುವನ್ನು ಕೊಟ್ಟಂತಹ ಬಹುಮುಖ್ಯ ಲೇಖಕರು: ಅಂದು ದಲಿತ ಚಳವಳಿಗೆ ಸಿದ್ಧಲಿಂಗಯ್ಯ ಎಷ್ಟು ಮುಖ್ಯವೋ ಇಂದು ಹನಸೋಗೆ ಅಷ್ಟೇ ಪ್ರಧಾನ ಚಿಂತಕರಾಗಿ ಮುಖ್ಯರಾಗುತ್ತಾರೆ" ಎಂದಿರುವುದು ಹನಸೋಗೆಯವರ ಮಹತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಇದರ ಜೊತೆಗೆ ಕೆಲವು ಬರಹಗಾರರು ತೀರಾ ಆವೇಶಪರರಾಗಿ ದಲಿತರ ಆಕ್ರೋಶವನ್ನು ಹೊರಗೆಡಹುವ ಮೂಲಕ ದಲಿತೇತರರನ್ನು ಕಿಚಾಯಿಸುವ; ಅನವಶ್ಯಕವಾಗಿ ತಪ್ಪಾಗಿ ಅರ್ಥೈಸುವ ಬಾಲಿಷತನದಿಂದ ತಮ್ಮ ಹೋರಾಟದ ಪ್ರತಿಧ್ವನಿಗಳನ್ನೇ ಕಳೆದುಕೊಂಡಿದ್ದಾರೆ. ಅರೆ ಹೊಟ್ಟೆಯೂ ತಿನ್ನಲೂ ಸಾಧ್ಯವಾಗದೆ

ಇರುವಾಗಲೇ ಕಾವ್ಯದಲ್ಲಿ ನೈಜತೆಯನ್ನು ಕಾಯ್ದುಕೊಂಡಿದ್ದವರು ಈಗ ಅರೆ ಹೊಟ್ಟೆ ತಿನ್ನುವವರಾಗಿಯೂ ಪೂರ್ಣ ತಣ್ಣಗಾಗಿದ್ದಾರೆ. ಇನ್ನು ರಾಜಕೀಯ ಸ್ಥಾನಮಾನದ ಸೋಂಕಿಗೆ ಒಳಗಾದವರಿಂದ ಸಮುದಾಯ ಏನನ್ನೂ ಬಯಸುವಂತಿಲ್ಲ. ಇಂಥ ಸಂದರ್ಭದಲ್ಲಿ 'ಮನುವಾದಿಗಳಿಗಿಂತಲೂ ದಲಿತರೇ ಹೆಚ್ಚು ಅಪಾಯಕಾರಿ' ಎನ್ನುವಂತಾಗುತ್ತದೆ. ಇನ್ನೂ ಕೆಲವು ದಲಿತ ಬರಹಗಾರರು ಅಂಬೇಡ್ಕರರನ್ನು ಬಂಡವಾಳ ಮಾಡಿಕೊಂಡವರಂತೆ ಆಕ್ರೋಶಭರಿತವಾದ ಪದಗಳಲ್ಲಿ ಮೇಲ್ವರ್ಗದವರನ್ನು ಇಡೀಯಾಗಿ ವಿರೋಧಿಸುವಲ್ಲಿಯೇ ಕಾಲ ಕಳೆದಿದ್ದಾರೆ. ದಲಿತಪರವಾದ ಮನಸುಗಳನ್ನು, ದಮನಿತರ ಪರವಾಗಿ ಆಸ್ಥೆ ವಹಿಸುತ್ತಿರುವವರನ್ನು ಸಿಟ್ಟಿಗೇಳಿಸುವ ಇರಿಸುಮುರಿಸು ಉಂಟುಮಾಡುವಂತಹ ವಾತಾವರಣವನ್ನು ನಿರ್ಮಾಣ ಮಾಡುತ್ತಿರುವುದು ದುರಂತವೇ ಸರಿ. ವ್ಯವಸ್ಥೆಯಲ್ಲಿ ಸುಧಾರಣೆ ತರುವ ಬದಲು ಶೋಷಕ ಮನಸುಗಳನ್ನು ಯಥಾಸ್ಥಿತಿಯಲ್ಲಿಯೇ ಸಾಗಲು ಪರೋಕ್ಷವಾಗಿ ಪ್ರಚೋಧಿಸಿದಂತಾಗುತ್ತದೆ. ಈ ದುರಂತದ ಬಗ್ಗೆ ಎಚ್ಚರವಹಿಸಬೇಕಾದ ತುರ್ತು ಇಂದು ದಲಿತ ಲೇಖಕರ, ವಿಮರ್ಶಕರ, ಕಲಾವಿದರದ್ದಾಗಿದೆ ಎಂಬುದನ್ನು ಆಧುನಿಕೋತ್ತರ ಕನ್ನಡ ಕವಿಗಳು ತಮ್ಮ ವಿಚಾರ, ಸಂದರ್ಶನ, ಸಂಶೋಧನೆ, ಮತ್ತು ಕಾವ್ಯ ಇನ್ನಿತರ ಸಾಹಿತ್ಯ ಪ್ರಕಾರಗಳಲ್ಲಿ ಪ್ರಚುರಪಡಿಸುತ್ತಿರುವುದು ಸ್ವಾಗತಾರ್ಹವಾಗಿದೆ.

ಈ. ಆಧುನಿಕೋತ್ತರ ಕನ್ನಡ ಕಾವ್ಯದ ಕಾಳಜಿ:

ದಲಿತರ ಬಗೆಗಿನ ಸಮಸ್ಯೆಗಳನ್ನು ಕೇವಲ ಕಾವ್ಯವೇ ಸರಿಪಡಿಸುತ್ತದೆ ಎನ್ನಲಾಗುವುದಿಲ್ಲ. ಅಂತಹ ಉದಾಹರಣೆಗಳೂ ಇಲ್ಲ. ಅಂದಿನ ಕಾವ್ಯಾಸಕ್ತರಿಗೂ ಇಂದಿನ ಕಾವ್ಯಾಸಕ್ತರ ಮನಸ್ಥಿತಿಗಳ ನಡುವೆ ಬಹಳ ವ್ಯತ್ಯಾಸವಿದೆ. ಸಮಾಜದಲ್ಲಿ ಕಾವ್ಯವನ್ನು ಬಹುವಾಗಿ ಆಸ್ವಾಧಿಸುವ ಮನಸ್ಸುಗಳು ಇರಬಹುದು. ಅವರಿಗೆ ಎಂತಹ ಕಾವ್ಯವನ್ನು ನೀಡಿದರೂ ಅದರ ಬಗೆಗಿನ ಒಲವಿನಿಂದ ಪ್ರಚೋಧನೆಗೆ ಒಳಗಾಗುತ್ತಿದ್ದಾರೆಯೇ ಹೊರತು ಇಡೀ ವ್ಯವಸ್ಥೆಗೆ ಕಾವ್ಯದ ಗಮಲು-ಅಮಲು ಇಲ್ಲ. ಇರಬೇಕೆಂಬ ಒತ್ತಡವನ್ನು ಹೇರಲೂ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ನಿಬಂಧದ ಓದಿನ ವಸ್ತುವಾದ ಬಂಜಗೆರೆಯವರ 'ಮಹೂವಾ' ಕವನ ಸಂಕಲನದಲ್ಲಿಯ ಅದೇ ಶೀರ್ಷಿಕೆಯ ಕವಿತೆಯೊಂದು ನಿವೇಧಿಸುವಂತೆ: 'ಆದಿವಾಸಿ ಬುಡಕಟ್ಟು ಜನಾಂಗದವರು ಅನ್ನ ಮಾಡಿ ಉಣ್ಣಲು, ಸುರೆ ಮಾಡಲು ಬಳಸುವ ಹೂವು 'ಮಹೂವಾ'ದ ಮೇಲೆ ಸರ್ಕಾರ ಹೇರುವ ನಿರ್ಬಂಧದ ಕುರಿತಂತೆ ಜನರ ಮಾತನ್ನೇ ಕಾವ್ಯವಾಗಿಸಿದ್ದರ ಮಹತ್ವ ಗಡಿ-ನಾಡು-ಭಾಷಾತೀತ- ಜಾನಾಂಗ ಅತೀತವಾಗಿದೆ' ಎನ್ನಬಹುದು.

"ಮಾ ವೋಟೆ ನಾಟ್, ಮಾವೋಟೆ ರಾಜ್" ಎಂಬುದು ಗೋಂಡಿ ಭಾಷೆಯ 'ನಮ್ಮ ನಾಡಲ್ಲಿ ನಮ್ಮದೇ ರಾಜ್ಯ'[2] ಎಂಬರ್ಥದಲ್ಲಿ ಆದಿವಾಸಿಗಳು ಮೇಲಿನ ಘೋಷಣೆಯ ಮೂಲಕ ಅಲ್ಲಿಯ ಸರ್ಕಾರದ ಧೋರಣೆಯನ್ನು ವಿರೋಧಿಸುವ ರೀತಿ, ಅವರ ಪರಿಸ್ಥಿತಿಯ ಬಗೆಗೆ ಎಂತಹ ಕಲ್ಲೆದೆಯವರಲ್ಲೂ ಸಹನೆ ಜೊತೆಗೆ ಶೋಷಕರ ವಿರುದ್ಧ ರೋಷದ ಕಿಡಿ ಹೊರ ಹೊಮ್ಮುತ್ತದೆ. ಆದರೆ ಇಂದು ದೇಶವನ್ನು ಮುನ್ನಡೆಸುತ್ತಿರುವ ಪ್ರಧಾನ ಕ್ಷೇತ್ರವೆಂದರೆ: ಒಂದು ರಾಜಕೀಯ ಶಕ್ತಿ ಮತ್ತೊಂದು ಧಾರ್ಮಿಕ ಶಕ್ತಿ. ಸಾಹಿತ್ಯವಾಗಲೀ ಕಾವ್ಯವಾಗಲೀ ಪ್ರಧಾನ ಬದಲಾವಣೆಯ ಶಕ್ತಿಯಾಗಿ ಉಳಿಯಲು ಸಾಧ್ಯವಾಗುತ್ತಿಲ್ಲ; ಆಗುವುದೂ ಇಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ದುರಂತವೆಂದರೆ ಕಾವ್ಯ ಶೂನ್ಯಸ್ಥಿತಿಗೆ ಸಾಗುತ್ತಿದ್ದು ಅದಕ್ಕೆ ಮತ್ತೆ ಜೀವಚೈತನ್ಯವನ್ನು ತುಂಬಬೇಕಾದ ಅಗತ್ಯವಿದೆ. ಕಾವ್ಯ ಸಮಾಜವನ್ನು ಬದಲಾಯಿಸಲು ಒಂದು ಉಪಕರಣವಷ್ಟೇ, ಅಂತಹ ಅನೇಕ

ಉಪಕರಣಗಳು ಸೇರಿ ಒಂದು ಯಂತ್ರವಾಗಿ ಚಲಾವಣೆಗೆ ಬರಲು ಸಾಧ್ಯ. ಆ ಮೂಲಕ ಪ್ರಭಾವಯುತವಾಗಿ ಸುಧಾರಣೆ ತರಲು ಸಾಧ್ಯ. ವಾಸ್ತವಾಗಿ ದೇಶದ ಸ್ವಾತಂತ್ರ್ಯದ ಬಗೆಗೆ ಚಳವಳಿಯಾಗಿದೆ. ಅಂತೆಯೇ ದಮನಿತರ ಪರವಾಗಿಯೂ ಅಂತಹುದೇ ಒಂದು ಚಳವಳಿಯಾಗಿದೆಯೇ ಹೊರತು 'ಕ್ರಾಂತಿ'ಯಾಗಿಲ್ಲ. ಚಳವಳಿ ಕೇವಲ ವಿರೋಧಿ ಸಮುದಾಯವನ್ನು ಬೆಚ್ಚಗಾಗಿಸಬಲ್ಲುದೇ ಹೊರತು ಸುಡುವುದಿಲ್ಲ. ಸುಡದ ಹೊರತು ಕ್ರಾಂತಿ ಸಾಧ್ಯವಿಲ್ಲ. ಅರ್ಥಾಥ್ ಕ್ರಾಂತಿಯಿಲ್ಲದೆ ಬದಲಾವಣೆ ಸಾಧ್ಯವಿಲ್ಲ.

ಇಂದು ನಿಜವಾಗಿ ದೇಶದಲ್ಲಾಗಲಿ, ದಮನಿತರಲ್ಲಾಗಲಿ ಸುಧಾರಣೆಯಾಗಿಲ್ಲ. ನಿಜವಾಗಿ ಬದಲಾವಣೆ ಬಯಸುವವರು ಮೊದಲು ಧಾರ್ಮಿಕವಾಗಿ, ರಾಜಕೀಯವಾಗಿ ಸಂಘಟಿತರಾಗುವ ಮೂಲಕ ಒಗ್ಗೂಡಿ ಗುರಿ ತಲುಪಲು ಸಾಧ್ಯ. ವಾಸ್ತವದಲ್ಲಿ ಈ ಮೇಲಿನ ಎಲ್ಲಾ ಅಂಶಗಳಿಂದ ಸ್ವಾರ್ಥ ಮನಸುಗಳು ದಿಕ್ಕಾಪಾಲಾಗಿ ವಿಕೇಂದ್ರೀಕರಣಗೊಂಡಿವೆ. ದೇಶೀಯ ಸಮಸ್ಯೆಗಳನ್ನು ದೇಶೀಯವಾಗಿಯೇ ಸರಿಪಡಿಸಿಕೊಳ್ಳುವ ಸಾಹಿತ್ಯ ನಿರ್ಮಾಣವಾಗಬೇಕು. ಹರಿದ ಬಟ್ಟೆಯನ್ನು ಅನ್ಯರ ಕೋಟಿನಿಂದ ಮುಚ್ಚುವುದು ಶೋಭೆಯೂ, ಶಾಶ್ವತವೂ ಅಲ್ಲ. ಅನ್ಯ ಜ್ಞಾನದ ಬಾಡಿಗೆ ಕೋಟಿನಿಂದ ಮುಚ್ಚಲು ಕೆಲವು ಬರಹಗಾರರು ಕಸರತ್ತನ್ನು ಮಾಡುವವರಿದ್ದಾರೆ. ಈ ನೆಲದ ಸಮಸ್ಯೆಗೆ ನೆಲದಲ್ಲಿಯೇ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ. ಆದರೆ ಅನ್ಯ ಸಂಸ್ಕೃತಿಯ, ಸಾಹಿತ್ಯದ ಅರಿವಿರಬೇಕಾದರೂ ಅದೇ ಸಿದ್ಧೌಷಧವಾಗಬಾರದು ಎಂಬುದು ಆಧುನಿಕೋತ್ತರ ಕನ್ನಡ ಕಾವ್ಯದ ಒಕ್ಕೊರಲಿನ ವಾದವೂ ಆಗಿದೆ.

ಸಾಹಿತ್ಯ, ಧರ್ಮ, ಸಂಘಟನೆ, ರಾಜಕಾರಣದ ತುಡಿತಗಳು ಒಂದೇ ಆಗಿ ಸಮನ್ವಯತೆಯಿಂದ ಇದ್ದಾಗ ಮಾತ್ರ ನಿರ್ದಿಷ್ಟ ಗುರಿ ಮುಟ್ಟಲು ಸಾಧ್ಯ. ಅದರ ಹೊರತಾಗಿ ಗುರಿ ಒಂದೇ ಆಗಿಯೂ ವಿವಿಧ ಕ್ಷೇತ್ರದವರು ವಿರುದ್ಧ ದಿಕ್ಕಿನಲ್ಲಿ ಸಾಗಿದಾಗ ಯಾವ ಬದಲಾವಣೆಯನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಈ ಮೊದಲೇ ಉದ್ಧರಿಸಿದಂತೆ ಕ್ರಾಂತಿಯ ಮನಸ್ಸು ಯಾವ ವರ್ಗದಲ್ಲಿ, ಜನಾಂಗದಲ್ಲಿ, ಸಮುದಾಯದಲ್ಲಿ ಹುಟ್ಟಿಕೊಳ್ಳುತ್ತದೆಯೋ ಆಗ ಅಲ್ಲಿ ಮಾತ್ರ ಹೊಸತ್ತನ್ನು ಮಹತ್ತನ್ನು ತರಲು ಸಾಧ್ಯ. ಆಗ ಮಾತ್ರ ಸಮಾನತೆ ಬ್ರಾತೃತ್ವ, ಹೊಂದಾಣಿಕೆ, ಸರ್ವರೂ ಸಮಾನರು ಎನ್ನುವುದು ಮೂಡುತ್ತದೆ. ಇಂದು ಎಲ್ಲಾ ಕ್ಷೇತ್ರದ ಬಗೆಗೂ ಮೌಲ್ಯಮಾಪನ ಮಾಡಬೇಕಿದೆ. ಅಂದಿನ ದಲಿತ ಚಳವಳಿಯ ಕೆಲಸವನ್ನು ಆಧುನಿಕ ದಲಿತ ಕಾವ್ಯದಿಂದ ನಿರ್ದೇಶಿಸಲ್ಪಡುತ್ತಿತ್ತು; ಚಳವಳಿ ಕಾವೇರುತಿತ್ತು. ಇಂದು ಸಾಹಿತ್ಯದ ನಿರ್ದೇಶನ ಮತ್ತು ಚಳವಳಿ ಸ್ವಾರ್ಥಿಗಳಿಂಲೂ ಹಿಂದಿನವರ ಬೇಜವಾಬ್ದಾರಿ ಮಾರ್ಗದರ್ಶನದಿಂದಲೂ ಕವಲಾಗುತ್ತಿದೆ. ಬಯೋತ್ಪಾದಕರಂತೆ ಕಾಣುತ್ತಿರುವ ಆಳುವ ವರ್ಗದವರು; ರಾಜಕೀಯವಾಗಿ ಶಕ್ತಿಯುಳ್ಳವರು ದಲಿತರಿಗಿಂತಲೂ ಅಂಬೇಡ್ಕರರನ್ನು, ಅವರ ಸಿದ್ಧಾಂತಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಎಂಬುದು ದಲಿತ ಲೋಕದ ದೊಡ್ಡ ದುರಂತ.

ನಿಜವಾಗಿ ಪ್ರಜ್ಞಾವಂತರಾಗಬೇಕಿದ್ದ ಶೋಷಿತ ಸಮುದಾಯದವರು; ದಮನಿತರಾದವರು ಅಂಬೇಡ್ಕರರ ಚಿಂತನೆಗೆ ಬೆನ್ನುಮಾಡಿರುವುದೇ ಚಳವಳಿಯ ಹಿನ್ನೆಡೆಗೆ ಕಾರಣವಾಗಿದೆ. ಶೂದ್ರರಂತೂ ಅಂಬೇಡ್ಕರ್ ದಾರಿ ಹಿಡಿಯುವುದಿಲ್ಲ; ಏಕೆಂದರೆ ಅವರಿಗೆ ಗೊತ್ತಿಲ್ಲ; ಹಾಗಾಗಿ ಅವರಿಗೆ ಅಂಬೇಡ್ಕರ್ ಮುಖ್ಯರೂ ಆಗಿ ಕಾಣುವುದಿಲ್ಲ; ಅದಕ್ಕಿಂತ ಮುಖ್ಯವಾಗಿ ಅಂಬೇಡ್ಕರರನ್ನು ಅವರು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲೇ ಇಲ್ಲ. ಹಿಂದಿನ ಸಾಹಿತ್ಯದಲ್ಲಿ ಪ್ರಬೋಧನಾತ್ಮಕ, ಉದ್ವೇಗದ,

ಕ್ಷಣಿಕವಾಗಿ ಮೂಡುವ ಆಕ್ರೋಶಭರಿತವಾದ ಪದಗಳ ಬಳಕೆ ಹೆಚ್ಚಾಗಿತ್ತು. ಪದಗಳನ್ನು ಸೂಕ್ಷ್ಮವಾಗಿ ಬಳಸಬೇಕಾದ ಎಚ್ಚರ ಮೊದಲು ದಲಿತ ಲೇಖಕರುಗಳಲ್ಲಿ ಬಹಳ ಕಡಿಮೆಯೇ, ಇಂದು ಈ ನಿಟ್ಟಿನಲ್ಲಿ ಆ ಬಗೆಯ ಪದಪ್ರಯೋಗದ ಅಗತ್ಯವಿಲ್ಲ ಮತ್ತು ಶಿಕ್ಷಣ ಅರಿವು ತಿಳುವಳಿಕೆ ಅನುಭವದ ಮಾರ್ಗ ವಿಸ್ತರಿಸಿಕೊಂಡಿರುವುದರಿಂದ ಈ ಸಮಸ್ಯೆ ಕಡಿಮೆಯಾಗುತ್ತಿದೆ.

ಇಡೀ ಒಂದು ವ್ಯವಸ್ಥೆಯ ವಿರೋಧ ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇಂದು ಇಲ್ಲ. ಜಾಗೃತ ತಿಳುವಳಿಕೆಯಿಂದ ಎಲ್ಲರನ್ನೂ ಸಂಧಿಸುವ, ಯಾರನ್ನೂ ವಿರೋಧಿಸದೆಯೇ ತಾತ್ವಿಕವಾದಂತಹ, ಸೂಕ್ಷ್ಮಾತಿಸೂಕ್ಷ್ಮ ತಿಳುವಳಿಕೆಯಿಂದ ಸಮಾಜವನ್ನು ಬದಲಾಯಿಸಬೇಕಾದ ವಾತಾವರಣವನ್ನು ನಿರ್ಮಾಣ ಮಾಡಿಕೊಳ್ಳಬೇಕಾದದ್ದು ಒಬ್ಬ ಲೇಖಕನ, ಸಾಮಾಜಿಕ ಬದಲಾವಣೆಯನ್ನು ಬಯಸುವ ಸೂಕ್ಷ್ಮ ಸಂವೇದನೆಯ ಚಳವಳಿಗಾರನ ಎಚ್ಚರವಾಗಿರುತ್ತದೆ. ಅದು ಆರಂಭದ ಲೇಖಕರಿಗೆ ಆ ಎಚ್ಚರವಿರಲಿಲ್ಲ ಮತ್ತು ಅಂದಿನ ಒತ್ತಡವೂ ಅದಕ್ಕೆ ಭಾಗಶಃ ಕಾರಣವಿದ್ದಿತು ಎಂಬುದನ್ನು ಆಧುನಿಕೋತ್ತರ ಕನ್ನಡ ದಲಿತ ಕವಿಗಳು ವಿದ್ವಾಂಶರು ಸಂಶೋಧಕರು ಕಂಡುಕೊಂಡಿರುವ ಉತ್ತರ.

ಪ್ರಶ್ನೆ ಇರುವುದು ಇಲ್ಲಿಯೇ: ಅಪಮಾನಿತರ ಪರವಾಗಿ, ಮೇಲ್ವರ್ಗದವರ ಶತಮಾನದ ಪಾಶದಿಂದ ವಿಮುಕ್ತತೆಗಾಗಿ ಒಟ್ಟಾಗಿ ಹುಟ್ಟಿ ವಿಚಾರ ಹರಿಸಿದ ಕಾವ್ಯಖಡ್ಗ ಒಡೆದು ಕವಲಾದುದು ಏಕೆ ಎಂಬ ಪ್ರಶ್ನೆಗೆ 'ಪುರಸ್ಕಾರ, ಪ್ರಶಂಸೆ, ಪದವಿ, ಸಂಘಟನಾ ನಾಯಕತ್ವ, ಹುದ್ದೆ, ರಾಜಕೀಯ ಅಧಿಕಾರ' ಎಂಬ ಉತ್ತರ! ಇಂದಿನ ದಲಿತ ಬರಹಗಾರರಿಗೆ ಹೆಚ್ಚು ನೋವನ್ನು ತರಿಸಿದೆ. ಅಂದಿಗೆ ಸರಿ ಎನಿಸಿದರೂ, ಅದು ಇಂದಿಗೂ ಈಡೇರದ ಉದ್ದೇಶದ ಕನಸಿಗೆ ಪರಿಹಾರವನ್ನು ಬಯಸಿದೆ. ಯಾವುದೇ ನದಿಗಳು ಹುಟ್ಟಿ ಸಾಗುವ ಮಾರ್ಗ ಮಧ್ಯೆ ಕವಲಾಗಿ ಮತ್ತೆ ಒಂದಾಗಿ ಸಾಗರ ಸೇರುವಂತೆ ಮತ್ತೆ ಮೂಲ ಹುಟ್ಟಿನ ಸ್ಥಿತಿ ಕಂಡುಕೊಂಡು 'ದಲಿತ-ಬಂಡಾಯ ಕಾವ್ಯ ಕೃಷಿ' ಈ 21ನೇ ಶತಮಾನದ ಮೊದಲ ದಶಕದಲ್ಲಿ ಮೂಲ ಸದಾಶಯವನ್ನು ಈಡೇರಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿವೆ. ಆಧುನಿಕೋತ್ತರ ದಲಿತ ಮತ್ತು ದಲಿತೇತರ ಕವಿಗಳು ಇಂದು ಜಾತ್ಯಾತೀತವಾಗಿ ತಮ್ಮನ್ನು ತಾವು ಕಾವ್ಯ ಕೃಷಿಯಲ್ಲಿ ತೊಡಗಿಸಿಕೊಂಡಿವೆ. ದಲಿತೇತರರೂ ತಮ್ಮ ಸಮುದಾಯದ ಬಗೆಗೂ ಅದರಾಚೆಗೂ ನೊಂದವರ ಬಗೆಗಿನ ಕಾಳಜಿಯನ್ನು ನಿಷ್ಕಳಂಕವಾಗಿ ಕಾವ್ಯದ ಮುಖೇನ ಈ ಕಾಲಘಟ್ಟದಲ್ಲಿ ನಿಸ್ವಾರ್ಥವಾಗಿ ಛಾಪಿಸುತ್ತಿದ್ದಾರೆ. ದಲಿತರೂ-ದಲಿತೇತರರೂ (ಶೂದ್ರ ಸಮುದಾಯ)ದವರೂ ಒಂದುಗೂಡಿ ಸೃಜಿಸುವ ಕಾವ್ಯ ಸೃಷ್ಠಿ ಹಿಂದೆಂದಿಗಿಂತಲೂ ಇಂದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ 20ನೇ ಶತಮಾನದ ಅಂತ್ಯ 21ನೇ ಶತಮಾನದ ಆರಂಭದ ದಶಕದಲ್ಲಿ 2000ದಿಂದ 2014ರ ಕಾಲ ಘಟ್ಟದ ಕೆಲವು ಪ್ರಾತಿನಿಧಿಕವಾದ ನಾಡಿನ ಕವಿಗಳ ಕಾವ್ಯಗಳು ಜನಪರ, ಜೀವಪರ, 'ಆಧುನಿಕೋತ್ತರ ದಲಿತ ಧ್ವನಿ'ಯಾಗಿ ಸಮಾಜದ ಸುಧಾರಣೆಗೆ ಮನಸುಮಾಡಿವೆ. ಎಪ್ಪತ್ತರ ದಶಕದ ಆರಂಭದ ಸಾಹಿತ್ಯ-ಕಾವ್ಯ ಕೃಷಿಯ ತವಕ 21ನೇ ಶತಮಾನದ ಮೊದಲ ದಶಕದ ಕಾವ್ಯದಲ್ಲಿ ದಟ್ಟವಾಗಿಸಿದೆ. ಸಿದ್ಧಲಿಂಗಯ್ಯ, ಎಲ್. ಹನುಮಂತಯ್ಯ, ಮೂಡ್ನಾಕೂಡು ಚಿನ್ನಸ್ವಾಮಿಯವರಾದಿಯಾಗಿ ಹೊಸ ಕಾಲಕ್ಕೆ ತಕ್ಕಂತೆ ತಮ್ಮ ಕಾವ್ಯದ ದಾಟಿಯನ್ನು, ಶೈಲಿಯನ್ನು, ಸಿದ್ಧಾಂತವನ್ನು, ಆಕ್ರೋಶವನ್ನು, ನ್ಯಾಯವನ್ನು ಆಗ್ರಹಿಸುವಲ್ಲಿ ಬದಲಾವಣೆಯನ್ನು ಕಾಣಿಸಿದ್ದಾರೆ.

ನಲವತ್ತು ವರ್ಷ ಇತಿಹಾಸವುಳ್ಳ ದಲಿತ–ಬಂಡಾಯ ಸಾಹಿತ್ಯದಲ್ಲಿ ನೊಂದವರ ನೋವಿನ ಬಗೆಗೆ ವಿವರಣೆ, ಸಮಾನತೆ, ಸಾಮಾಜಿಕ ನ್ಯಾಯದ ಆಗ್ರಹ ಕುರಿತ ವಿವಿಧ ಸಾಹಿತ್ಯ ಪ್ರಕಾರಗಳಿವೆ. ಆದಾಗ್ಯೂ ಇಷ್ಟು ವರ್ಷಗಳಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ವ್ಯಕ್ತವಾಗಿರುವ ದಲಿತ–ಬಂಡಾಯ ಸಾಹಿತ್ಯ ಧಾರೆಯನ್ನು ಅಧ್ಯಯನ ದೃಷ್ಟಿಯಿಂದ 2000ದಿಂದ 2014ರ ವರೆಗಿನ ಕೆಲವು ಪ್ರಾತಿನಿಧಿಕ ಕಾವ್ಯಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ದಲಿತ–ಬಂಡಾಯ ನೆಲೆಯಲ್ಲಿ ಬರೆದ ದಲಿತ ಮತ್ತು ದಲಿತೇತರರ ಕಾವ್ಯಧಾರೆಗಳು ಹೇಗೆ ದಮನಿತರ ಬಗೆಗೆ, ವ್ಯವಸ್ಥೆಯ ಸುಧಾರಣೆಗೆ ಪ್ರಮುಖವಾಗಿವೆ ಮತ್ತು ಪ್ರಮುಖವಾಗಿಲ್ಲ ಎಂಬುದನ್ನು ನನ್ನ ಅಧ್ಯಯನ ವಿಶ್ಲೇಷಿಸುತ್ತದೆ. ದಲಿತರು–ದಲಿತೇತತರು (ಬ್ರಾಹ್ಮಣರನ್ನು ಹೊರತುಪಡಿಸಿ) ಒಟ್ಟುಗೂಡಿದ ಮೊದಲ ದಲಿತ ಬಂಡಾಯ ಸಾಹಿತ್ಯ ಕಾಲಘಟ್ಟದ ಆಶಯ ಈಡೇರಿಕೆಗೆ ಅಗತ್ಯವಾಗಿ ಮತ್ತೆ ಒಂದಾಗಿ ಕಾವ್ಯ ರಚಿಸಬೇಕಾದ ತುರ್ತು ಇಂದಿಗೂ ಇದೆ ಎಂದು ಸಮರ್ಥಿಸುವುದೇ ನನ್ನ **"ಆಧುನಿಕೋತ್ತರ"** ಸಾಹಿತ್ಯ ಸಂವೇದನೆ ಕುರಿತ ಎಂ.ಫಿಲ್., ಪದವಿಯ ಅಧ್ಯಯನದ ಉದ್ದೇಶವಾಗಿದೆ. ಇಲ್ಲಿ ಮುಖ್ಯವಾಗಿ ಎಪ್ಪತ್ತರ ದಶಕದಿಂದ ಕಾವ್ಯ ರಚಿಸಿದ ಮತ್ತು 2000ದ ನಂತರವೂ ಇಲ್ಲೀವರೆಗೆ ಕಾವ್ಯ ರಚಿಸುತ್ತಿರುವವರ ಬಗೆಗೆ ವಿಚಾರ–ವಿವರಣೆ–ಕಾವ್ಯದ ಉದ್ದೇಶ–ಸಮಾನತಾ ಆಶಯದ ಬಗೆಗೆ ಪ್ರಸ್ತಾಪವಿದೆ. ದಲಿತರು–ದಲಿತೇತರರು ಸಾಮಾನ್ಯವಾಗಿ ಶೂದ್ರ ವರ್ಗದವರು, ಅಲ್ಪ ಸಂಖ್ಯಾತರು–ಮಹಿಳಾ ಲೇಖಕಿಯರ ಸಮಾಜ ಮುಖಿ ಚಿಂತನೆಗಳಿವೆ.

ಉ. 'ಆಧುನಿಕೋತ್ತರ' ಕಾವ್ಯದ ಮಹತ್ವ ಮತ್ತು ಪರಿಕಲ್ಪನೆ:

ನೂರು ವರ್ಷಗಳು ತುಂಬಿರುವ ಆಧುನಿಕ ಹೊಸಗನ್ನಡ ಸಾಹಿತ್ಯದ ಜೊತೆಗೆ ಸಮಕಾಲೀನ ಅವಸ್ಥೆಯೊಂದಿಗೆ ದಲಿತ–ಬಂಡಾಯ ಸಾಹಿತ್ಯವೂ ಸಾಕಷ್ಟು ಜನಪರವಾಗಿ ಕ್ರಮಿಸಿದೆ. 21ನೇ ಶತಮಾನದ ಆರಂಭದಿಂದ ಬರೆಯುತ್ತಿರುವ ದಲಿತ ಬರಹಗಾರರ ಕಾವ್ಯಗಳನ್ನು ಆಧುನಿಕೋತ್ತರ ಕಾಲದ ಕಾವ್ಯಗಳೆಂದು ಕರೆಯಲಾಗಿದೆ. ಕಾಲಕ್ಕನುಗುಣವಾಗಿ, ಸಂದರ್ಭಕ್ಕನುಗುಣವಾಗಿ, ನಮಗೆ ಇಷ್ಟವಾದದ್ದು ಮತ್ತೆ ಜನಕ್ಕೆ ಕೊಡಬಹುದಾದದ್ದು ಸರಿ ಎಂದು ನಮ್ಮ ಅಂತರಂಗಕ್ಕೆ ಒಪ್ಪಬೇಕು. ಆಗ ನಾವು ಅದನ್ನು ಸಾರ್ವಜನಿಕಗೊಳಿಸುವುದರಲ್ಲಿ ಅರ್ಥವಿದೆ. ಸಮಾನತೆ ಎನ್ನಲು ವಿಶೇಷವಾದ ವ್ಯಾಖ್ಯಾನದ ಅಗತ್ಯವಿಲ್ಲ. ಅದನ್ನು ಎಲ್ಲಿಯೂ ಎಕ್ಕಿ ತರಬೇಕಿಲ್ಲ ಅದು ತುಂಬಾ ಸರಳವಾದುದು. ಹುಟ್ಟು–ಸಾವು–ಗಾಳಿ–ನೀರು–ಬದುಕು ಮತ್ತೆ ಅವಶ್ಯಕತೆ ಇದಕ್ಕೆ ಸಂಬಂಧಿಸಿದಂತೆ ಈ ಮನುಷ್ಯನ ಅವಶ್ಯಕತೆಗೆ ಪ್ರಕೃತಿಯ ಕೊಡುಗೆಯ ಸಮಾನ ಹಂಚಿಕೆಯೇ ಸಮಾನತೆ. ಇದನ್ನು ಯಾರೂ ಏಕಸ್ವಾಮ್ಯವಾಗಿಸಿಕೊಳ್ಳಲು ಹಕ್ಕಿಲ್ಲ. ಪ್ರಕೃತಿ ತಾರತಮ್ಯವನ್ನು ಎಂದೂ ಒಪ್ಪಿಲ್ಲ. ಪ್ರಕೃತಿ ಎಂದೂ ಯಾರನ್ನೂ ಉದ್ದೇಶವಿಟ್ಟುಕೊಂಡು ತಾರತಮ್ಯ ವಹಿಸಿಲ್ಲ. ಆಕಸ್ಮಿಕವಾದ ಭೂಕಂಪ, ಅತೀವೃಷ್ಟಿ, ಅನಾವೃಷ್ಟಿಯನ್ನು ಸಕಲ ಜೀವಿಗಳಿಗೂ ಹಂಚುತ್ತದೆ. ಕೆಲವೊಮ್ಮೆ ತನ್ನ ಬಲವನ್ನು ಸಮರ್ಥನೆ ಮಾಡಿಕೊಳ್ಳುವುದೇ ಹೊರತು ಜಗತ್ತನ್ನು ವಿಭಾಗಿಸಿ ವಿಂಗಡಿಸುವುದಿಲ್ಲ. ಉತ್ತಮ ಹವಾಗುಣ ಮನುಷ್ಯನ ದೃಷ್ಟಿಕೋನದಲ್ಲಿ ತನಗೆ ಪ್ರಕೃತಿ ನೀಡಿದ ವಿಶೇಷ ಕೊಡುಗೆ ಎನಿಸಿದರೂ ಅದನ್ನು ಜೀವಿ ನಿರ್ಜೀವಿಗಳೂ ಸಮಾನವಾಗಿ ಅನುಭವಿಸತ್ತವೆ. ಪ್ರಕೃತಿಯ ಕೊಡುಗೆಯನ್ನು ಅಳೆಯಲು ಮನುಷ್ಯನ ಮಾನದಂಡದಿಂದ ಸಾಧ್ಯವಿಲ್ಲ. ಸೂರ್ಯ–ಚಂದ್ರ–ಗ್ರಹ–ತಾರೆಗಳ ವ್ಯವಸ್ಥೆಯಲ್ಲಿ ತಾರತಮ್ಯವಿಲ್ಲ, ಪ್ರಕೃತಿಯು ತನ್ನದೇ ಆದ ಸ್ವಯಂ ಆದ ನಿರಂತರ ಚಲನೆಯನ್ನು ಹೊಂದಿರುತ್ತದೆ. ಅದು ಸಾಂದರ್ಭಿಕವಾಗಿ ವ್ಯತ್ಯಾಸಗೊಳಿಸಬಲ್ಲುದೇ ಹೊರತು ಯಾರಿಂದಲೂ ಅದನ್ನು ನಿರ್ಣಯಿಸಲು ಸಾಧ್ಯವಿಲ್ಲ. ನಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಚರ್ಚೆಗೊಳ್ಳುವ ಹನಸೋಗೆಯವರ ಕಾವ್ಯದ ಮುಖ್ಯ

ಧ್ಯೇಯವೇ ಈ ರೀತಿಯದು. ಮಾನವನ ಬಗೆಗಿನ ಕಾಳಜಿ, ಸಾಹಿತ್ಯ ಚರಿತ್ರೆಯ ದೃಷ್ಟಿಕೋನ, ಸಾಹಿತ್ಯ ಚರಿತ್ರೆಯ ಬಳಕೆ ದೃಷ್ಟಿಯಿಂದ ನೋಡಿದಾಗ 'ಬುದ್ಧಿಸಂ' ಮತ್ತು 'ಅಂಬೇಡ್ಕರಿಸಂ' ಅವಗಣನೆಗೆ ಒಳಗಾಗಿದೆ ಎಂಬುದು. ಉದ್ದೇಶ ಪೂರ್ವಕವಾಗಿ ಮರೆಮಾಚಲಾಗಿದೆ, ನಿರ್ಲಕ್ಷ್ಯಕ್ಕೊಳಗಾಗಿದೆ, ಬಹುಜನರ ಸಹಜ ಬೇಡಿಕೆಯ ಕಗ್ಗೊಲೆಯಾಗಿದೆ, ನ್ಯಾಯವನ್ನು ಕೇಳುವುದೇ ಅನ್ಯಾಯವೆಂಬಂತಾಗಿದೆ. ಈ ಕಾರಣಕ್ಕಾಗಿ ಅದು ಏಕಮುಖವಾದ ನ್ಯಾಯವಾಗುವ ಅಗತ್ಯವಿಲ್ಲ. ಸಾರ್ವತ್ರಿಕವಾದ ನ್ಯಾಯವನ್ನು ದಕ್ಕಿಸಿ ಕೊಡಬೇಕಿದೆ. ಪ್ರಾಮಾಣಿಕವಾಗಿ ಏನು ದಕ್ಕಬೇಕಾಗಿದೆಯೋ ಅದನ್ನು ರಕ್ತರಹಿತವಾಗಿ ಆಗ್ರಹಿಸಬೇಕಾಗಿರುವ ಕಾರಣಕ್ಕಾಗಿ ಆಧುನಿಕೋತ್ತರ ಕನ್ನಡ ಕಾವ್ಯದ ಮೂಲಕ ದಲಿತ ಕವಿಗಳು ಪ್ರಕರವಾದ, ಪರಿಣಾಮಕಾರಿಯಾದ ಮಾಧ್ಯವವನ್ನಾಗಿಸಿಕೊಂಡು ಬರೆಯುತ್ತಿದ್ದಾರೆ. ಹಾಗೆಂದಾಕ್ಷಣ: ಈಗಾಗಲೇ ದಲಿತ ಮನಸುಗಳು ಎಲ್ಲ ಬಗೆಯ ಸಮಸ್ಯೆಗಳನ್ನೂ ಆಮೂಲಾಗ್ರವಾಗಿ ಅಭಿವ್ಯಕ್ತಿಸಿದ್ದಾರೆ ಎನ್ನಲಾಗುವುದಿಲ್ಲ. ನಿಜವಾಗಿ ದಲಿತ ಸಾಹಿತ್ಯ ಈಗಿನ್ನೂ ಪ್ರಾಥಮಿಕ ಶಂಕುಸ್ಥಾಪನಾ ಲೆಕ್ಕದ ಹಂತದಲ್ಲೇ ಇವೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಹಿತ್ಯಕವಾಗಿಯಾಗಲಿ ಪೂರಕವಾತಾವರಣ ಇನ್ನೂ ಮಸಕುಮಸುಕಾಗಿಯೇ ಇದೆ. ಬುದ್ಧನ ವೈಚಾರಿಕತೆಯನ್ನಂತೂ ಮುಟ್ಟಲಿಕ್ಕಾಗದೆ ವಿದೇಶದವರಿಗೆ ದತ್ತುಕೊಡಲಾಗಿದೆ. ಆಧ್ಯಾತ್ಮಿಕತೆಯಂತೂ ದಲಿತ ಕಾವ್ಯಕ್ಕಿಂತ ಮಹಾನ್ ದೂರದಲ್ಲಿದೆ. ಹಾಗಾಗಿ ಮಾನವನ ಮೂಲ ಅವಶ್ಯಕತೆಗಳ ಬಗೆಗೆ ಪ್ರಭಾವ ಬೀರಲು, ಪೂರಕ ಹೊಸ ಆಲೋಚನ ಕ್ರಮದಲ್ಲಿ ಬದಲಾವಣೆ ತರಲು ಕವಿ ಹನಸೋಗೆ ಸಾಹಿತ್ಯಕವಾಗಿ ಕಲಾವಿದರಾಗಿ, ಲೇಖಕರಾಗಿ, ಸಂಶೋಧಕರಾಗಿ, ಗಾಯಕರಾಗಿ ಬಹುಜನ ಸಮಾಜದ ಸಂಸ್ಕೃತಿ ವಕ್ತಾರರಾಗಿ, ಮತ್ತು ನಾಡಿನ ಹೆಮ್ಮೆಯ ಆಧುನಿಕ ದಲಿತ ಕವಿಯಾಗಿ ಕಾವ್ಯಾತ್ಮಕವಾಗಿ ಹೆಚ್ಚುಹೆಚ್ಚು ಅಧ್ಯಯನ ಶೀಲರಾಗಿದ್ದಾರೆ. ದಮನಿತರ ಪರವಾಗಿ ಬರೆಯುವ ಕವಿ ಹನಸೋಗೆಯವರಿಗೆ ಸಂಪೂರ್ಣವಾಗಿ ಬುದ್ಧ ಮತ್ತು ಅಂಬೇಡ್ಕರ್ ಪ್ರಮುಖ ಪ್ರೇರಣೆಯಾಗುತ್ತಾರೆ.

ಕವಿ ಹನಸೋಗೆಯವರು ಹಿಂದಿನ ದಲಿತ ಕವಿಗಳ ಮಿತಿಯನ್ನು ತಮ್ಮ ಕಾವ್ಯದಲ್ಲಿ ತುಂಬಿಸಲು ಹೆಚ್ಚು ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಈ ಹಿಂದಿನ ಪ್ರೊ.ಬಿ. ಕೃಷ್ಣಪ್ಪ, ಬಿ.ಬಸವಲಿಂಗಪ್ಪ, ಸಿದ್ದಲಿಂಗಯ್ಯ, ದೇವನೂರ ಮಹಾದೇವ, ಅರವಿಂದ ಮಾಲಗತ್ತಿ ಎಲ್.ಹನುಮಂತಯ್ಯ, ಕೆ.ಬಿ.ಸಿದ್ದಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಕೆ.ವೈ.ನಾರಾಯಣ ಸ್ವಾಮಿ, ಮೊಗಳ್ಳಿ ಗಣೇಶ್, ಸುಬ್ಬು ಹೊಲೆಯಾರ್, ಮುಂತಾದವರು ಅವರವರ ಕಾಲಘಟ್ಟದಲ್ಲಿ ಬಹುಸಾಧ್ಯತೆಗಳನ್ನು ಮುಟ್ಟದೆ ಹೋದರೂ ತಮ್ಮ ಮಿತಿಯಲ್ಲಿ ದಲಿತ ಕಾಳಜಿಯನ್ನು ಉದ್ಘಾಟನೆಯನ್ನಷ್ಟೇ ಮಾಡಿದ್ದಾರೆ ಎನ್ನಬಹುದು. ಅಷ್ಟಕ್ಕೇ ದಲಿತ ಲೋಕ ಮೈ-ಮರೆಯಬಾರದು ಮತ್ತು ಅವರ ಬಗೆಗೆ ಕೃತಾರ್ಥರಾದೆವೆಂದು ಬೀಗದೆ ಅಂದಿಗಿಂತಲೂ ಇಂದು ಮತ್ತಷ್ಟು ಸಮಸ್ಯೆಗಳನ್ನು ಎದುರಿಸುವ ಕಾಲ ಸನ್ನಿಹಿತವಾಗಿದೆ ಎಂಬುದನ್ನಂತೂ ತಳ್ಳಿಹಾಕುವಂತಿಲ್ಲ. ಹಿಂದಿನ ದಲಿತ ಲೇಖಕರು ಸಿದ್ಧಲಿಂಗಯ್ಯ, ದೇವನೂರು, ಮೂಡ್ನಾಕೂಡು, ಮಾಲಗತ್ತಿಯವರನ್ನೂ ಒಳಗೊಂಡಂತೆ ಅನೇಕರು ಅಂದಿನ ಬಿಕ್ಕಟ್ಟುಗಳೊಂದಿಗೆ ರಾಜಿ ಮಾಡಿಕೊಳ್ಳದೆ ವ್ಯವಸ್ಥೆಯ ವಿರುದ್ಧ ಸಾಗಿರುವುದು ಸುಲಭ ಸಾಧ್ಯವಾದ ಮಾತೇನಲ್ಲ. ಸಿದ್ಧಲಿಂಗಯ್ಯರವರು ಇಂದಿನ ಆಧುನಿಕೋತ್ತರ ಕನ್ನಡ ದಲಿತ ಸಾಹಿತ್ಯಗಳಿಗೆ ಧನಾತ್ಮಕವಾಗಿಯೂ ರುಣಾತ್ಮಕವಾಗಿಯೂ ಪ್ರೇರೇಪಣೆಯಾಗಿದ್ದಾರೆ. ಅವರನ್ನು ಮೆಚ್ಚುವ ಮಂದಿ ಹತ್ತುಹಲವು ಬಗೆಗಳಲ್ಲಿ ಅವರನ್ನು ವ್ಯಾಖ್ಯಾನಿಸುವಂತೆ; ಅವರನ್ನು ವಿರೋಧಿಸುವ ಇಂದಿನ ಬಹಳಷ್ಟು ಮಂದಿಯ ಕಾವ್ಯದಲ್ಲಿ ಅವರಿಗರಿವಿಲ್ಲದೆಯೇ ಸಿದ್ಧಲಿಂಗಯ್ಯರ ಕಾವ್ಯದ ದಾಟಿ ಹಾಸುಹೊಕ್ಕಾಗಿರುವುದನ್ನು ಗಮನಿಸಬಹುದು. ಅವರ ಆಕರ್ಷಣೆಯೂ;

ಆಕ್ರೋಶಭರಿವೂ; ಅಂದು ಅಸಮಾನ ವ್ಯವಸ್ಥೆಯ ವಿರುದ್ಧ ತಾವು ಮಾಡಿದ ಅಕ್ಷರ ಪ್ರಯೋಗ ಇಡೀ ಭಾರತ ಸಾಹಿತ್ಯವನ್ನು ತಲ್ಲಣಗೊಳಿಸಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ.

ಬದುಕಿನ ಬೇಕಾದಷ್ಟು ಅವಕಾಶಗಳನ್ನು ಉಪಯೋಗಿಸಿಕೊಳ್ಳದೆ, ಪ್ರಕೃತಿದತ್ತ ಸಹಜ ಬದುಕಿನ ಸೌಂದರ್ಯವನ್ನು ಒಳಗಣ್ಣಿನಿಂದ ನೋಡದೆ ಇಂದು ದಲಿತರು ಜಾತಿ ಸಮಸ್ಯೆ ಬಗೆಗೆ ಬರೆಯುವುದೇ ಒಂದು ಸಾಮಾಜಿಕ ಕಾಯಿಲೆಯಾಗಿದೆ, ಇರುವ ಗಾಯವನ್ನೇ ಕಿತ್ತುಕೊಂಡು ದೊಡ್ಡಗಾಯ ಮಾಡಿಕೊಳ್ಳುವವರು ಇಂದು ದಲಿತ ಸಾಹಿತ್ಯ ಲೋಕದಲ್ಲಿ ಇದ್ದಾರೆಯೆಂಬ ಅಭಿಪ್ರಾಯ ಗಟ್ಟಿಯಾಗುತ್ತಿದೆ. ಆದರೆ ಇದು ಸುಳ್ಳು. ಇಂದಿನ ನಮ್ಮ ಕಾವ್ಯ ದಲಿತರ ಸಾಂಸ್ಕೃತಿಕ, ರಾಜಕೀಯ, ಸಮಾಜಿಕ ದಿವಾಳಿತನಕ್ಕೆ ನಮ್ಮ ಕಾವ್ಯಗಳು ಪರಿಣಾಮಕಾರಿಯಾದ ಚುಚ್ಚು ಮದ್ದಾಗಿವೆ. ರಾಜ್ಯ ಶರಣ ಸಾಹಿತ್ಯ ಪರಿಷತ್ತು, ವಿಶ್ವ ಒಕ್ಕಲಿಗರ ಸಂಘ, ಮಠ, ಮತ ಇತ್ಯಾದಿ ಇನ್ನಿತರ ಪರಿಷತ್ತುಗಳಂತೆ, ಸಂಸ್ಥೆಗಳಂತೆ ದಲಿತರೂ ಕೂಡ ಪರಿಷತ್ತು; ಸಂಸ್ಥೆ ಎಂದು ಯಾವುದೇ ತಮ್ಮ ಅಡ್ಡಗೋಡೆ ಕಟ್ಟಿಕೊಂಡು ವಿಭಜನೆಯನ್ನು ಬಯಸಿದವರಲ್ಲ. ಆದರೆ ರಾಜಕೀಯವಾಗಿ ಬೆಳೆಯಬಹುದಾದ ಸಾಧ್ಯತೆಯನ್ನು ಮತ್ತು ಅತೀ ಅವಶ್ಯಕತೆಯನ್ನು ಆಧುನಿಕೋತ್ತರ ದಲಿತ ಸಾಹಿತಿಗಳು ಒಕ್ಕೊರಲಿನಿಂದ ಸ್ವಾಗತಿಸುತ್ತಾರೆ ಎಂಬುದಂತೂ ಸತ್ಯ.

ರಾಜಕೀಯ ಅಧಿಕಾರದ ಸಾಧ್ಯತೆಗಾಗಿ ಕಾವ್ಯಾಸ್ತ್ರವನ್ನು ದಲಿತರು ಇಂದು ತಮ್ಮ ಪ್ರಮುಖ ಧೋರಣೆಯಾಗಿ ಸ್ವೀಕರಿಸಿಕೊಂಡಿದ್ದಾರೆ. ಅದಕ್ಕಾಗಿ ಕಾವ್ಯ ಜನಸಾಮಾನ್ಯರ ಭಾಷೆಯಾಗಿರಬೇಕು, ಏಕೆಂದರೆ ಶಬ್ದವೆಂದರೆ ಅದಕ್ಕೆ ಅರ್ಥವೆಂದು ವ್ಯಾಖ್ಯಾನವಿದೆ. ಹಾಗೆಯೇ 'ಮಾತು' ಅನ್ನೊದಕ್ಕೆ 'ಅರ್ಥ' ಇದ್ದಾಗ ಅದು ಒಳ್ಳೇ ಶಬ್ದವೂ ಸಾಹಿತ್ಯವೂ ಆಗಲು ಸಾಧ್ಯ. ಜನ ಸಾಮಾನ್ಯರಿಗೆ ಅರ್ಥವಾಗದಿದ್ದ ಮೇಲೆ ಏನು ಬರೆದರೂ ಅದು ವ್ಯರ್ಥವೇ ಸರಿ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಜನಸಾಮಾನ್ಯರಿಗೂ ಪಂಡಿತರಿಗೂ ಎಟುಕಿದ ವಚನಸಾಹಿತ್ಯವೊಂದನ್ನು ಒರತುಪಡಿಸಿ ಉಳಿದ ಬಹು ಸಾಹಿತ್ಯ ಕಬ್ಬಿಣ ಕಡಲೆಯಾಗಿದ್ದೇ ಜಾಸ್ತಿ. ಈವರೆಗಿನ ದಲಿತ ಸಾಹಿತ್ಯವನ್ನು ಪರಾಮರ್ಶಿಸಿದಾಗ ಹಿಂದಿನವರಂತೆ ಗಟ್ಟಿ ಅನಿಸದಿದ್ದರೂ ಮಿತಿಯೊಳಗೆ ಪಯಣಿಸಿದ್ದಾರೆ ಮತ್ತು ಆ ಪಯಣ ಸುಲಭಸಾಧ್ಯವಾಗಿರಲಿಲ್ಲ ಎಂಬುದು ಸತ್ಯಸ್ಯ ಸತ್ಯ. ಅಂದಿನ ಸಿದ್ಧಲಿಂಗಯ್ಯರ ಕಾವ್ಯ 'ಇಕ್ಕರ್ಲಾ ವದಿರ್ಲಾ ಇವ್ರ ಚರ್ಮ ಎಬ್ರುಲಾ' ಎಂಬಂತಹ ಸಾಹಿತ್ಯ ಇಂದು ಅವರಿಂದ ಸಾಧ್ಯವಿಲ್ಲ. ಅದು ಗುಡಿಸಲ ಹಾಡಾಗದೆ ಇನೋವಾದಲ್ಲಿ ಕುಳಿತು ನೋವಿರದೆ ಬರೆದ ಹುಸಿ ಕವಿತೆಯಾಗುತ್ತದೆ. ಅದಕ್ಕೆ ರೊಮ್ಯಾಂಟಿಕ್ ಆಗಿ ಬರೆಯಲು ತಿರುಗಿದ ಬಗೆಯನ್ನೇ ಉದಾಹರಿಸಬಹುದು. ಅದು ಸಮುದಾಯದ ನೋವಿನ ಕವಿತೆಯಾಗಲು ಅವರ ಪ್ರತಿನಿಧಿತ್ವದ ಕವಿ ಮತ್ತು ಕವಿತೆಯಾಗಿಸಲು ಸಾಧ್ಯವಾಗುವುದೇ ಇಲ್ಲ. ವೈಯುಕ್ತಿಕ ಬದುಕಿಗೆ ತಿರುಗಿದ ತಮ್ಮ ಮಿತಿಯನ್ನು ತಾವೇ ಜಾಹೀರುಮಾಡಿಸಿಕೊಂಡುದರ ಮತ್ತೂ ಅಲ್ಪಾಯುಷ್ಯದ ಕವಿತ್ವದ ಸೂಚನೆಯೇ ಆಗುತ್ತದೆ.

ಜನ ಸಾಮಾನ್ಯರ ಒಡಲಿನಿಂದಲೇ ಒಡ ಮೂಡಿದ ಒಂದು ಮಕ್ಕಳ ಸಾಹಿತ್ಯವಾದ "ಕಣ್ಣಾ ಮುಚ್ಚೆ ಕಾಡೆ ಗೂಡೆ ಉದ್ದಿನ ಮೂಟೆ ಉರುಳೇ ಹೋಯ್ತು ನನ್ನಯ ಹಕ್ಕಿ ಹಾರಿ ಹೋಯ್ತು, ನಿಮ್ಮಯ ಹಕ್ಕಿ ಬಚ್ಚಿಟ್ಟುಕೋ" ಹೀಗೆಲ್ಲಾ ನಾವು ಗ್ರಾಮವಾಸಿಗಳಾಗಿ ಆಡಿದ್ದೀವಿ ಕೇಳಿಸಿಕೊಂಡಿದ್ದೀವಿ. ಜನ ಸಾಮಾನ್ಯರಲ್ಲಿ ಇದು ಎಷ್ಟು ಅರ್ಥ ತುಂಬುತ್ತವೆಯೆಂದರೆ 'ಕಣ್ಣಾ ಮುಚ್ಚೆ-ನಾ ಕಣ್ಣು ಮುಚ್ತಾ ಇದ್ದೀನಿ, ಕಾಡೇ ಗೂಡು-ನನ್ನ ಗೂಡು ಕಾಡು, ಉದ್ದಿನ ಮೂಟೆ-ನಾನು ಮಾಡಿರುವಂಥಹ ಪಾಪ-ಪುಣ್ಯ ಉರುಳೇ ಹೋಯ್ತು-ನನ್ನಯ ಹಕ್ಕಿ ಹಾರೇ ಹೋಯ್ತು: ನನ್ನ ಪ್ರಾಣ ಪಕ್ಷಿ ಹಾರಿ ಹೋಯ್ತು;

ನಿಮ್ಮಯ ಹಕ್ಕಿ ಬಚ್ಚಿಟ್ಟುಕೋ' ಎನುವುದನ್ನು ಜನ ಸಾಮಾನ್ಯರ ಭಾಷೆಯೆಂದು ಗುರುತಿಸುತ್ತೀವಿ. ಆಧುನಿಕೋತ್ತರ ಕವಿಗಳಾದ ಇಂದಿನವರು ಸರಳತೆಯನ್ನು ಮೈಗೂಡಿಸಿಕೊಂಡಿದ್ದಾರೆ. ನವರಸಗಳಿಗೆ ಬದಲಾಗಿ ನೋವಿನ ಬಗೆಗೆ, ಭವಿಷ್ಯದ ಬದಲಾವಣೆಗಳ ಬಗೆಗೆ ಆಗ್ರಹಗಳಿವೆ, ಎಚ್ಚರದ ಮಾತುಗಳಿವೆ. ಸಮಸ್ಯೆಗೆ ಪೂರಕ ಪರಿಹಾರದ ಮಾತುಗಳಿವೆ. ಸಾಂತ್ವನಗಳಿವೆ, ಹಾಗೆಯೇ ಇಂದಿನ ಆಧುನಿಕೋತ್ತರ ಕವಿಗಳಲ್ಲಿ ಬಹುಪಾಲು ಆರಂಭದ ಓದಿಗೆ ಒಗ್ಗಿದ ಯುವಕವಿಗಳು ನವೋದಯ, ನವ್ಯ ದಲಿತ-ಬಂಡಾಯ ಮತ್ತು ಪಾಶ್ಚಾತ್ಯ ಓದಿಗೆ ಮಾರುಹೋಗಿ ಸರಳತೆಯನ್ನು ಮೈಗೂಡಿಸಿಕೊಳ್ಳುವ ಬದಲಾಗಿ ಹೇಳುವುದನ್ನು ಕಗ್ಗಂಟಾಗಿಸಿ, ಅನೇರವಾಗಿ ಗೋಜಲುಗೊಳಿಸಿ ಅರ್ಥವಾಗದ್ದೂ, ಕಠಿಣವೂ ಆಗಿ ಬರೆಯುವ ದುರಂತವೂ ಎದುರಾಗಿದೆ, ಇದು ಸರಿಯಲ್ಲ.

ಇದಕ್ಕೆ ಪೂರಕವಾಗಿ ಲಕ್ಕೂರು ಆನಂದ ಹೇಳುವಂತೆ "ನಿಜವಾಗಿ ಮನುಷ್ಯನನ್ನು ಓದಿಕೊಂಡಿದ್ದಾದರೆ ಯಾವ ವಿಶೇಷ ಓದಿನಲ್ಲೂ ಸಿಗದ ಸರಳ ನೇರ ಸಮಾಜಮುಖಿ ಅಭಿವ್ಯಕ್ತಿ ಸಾಧ್ಯ. ಅಲ್ಲೇ ಪ್ರಾಚೀನ, ಆಧುನಿಕ ನವೋದಯ, ನವ್ಯ, ಬಂಡಾಯ ಇತ್ಯಾದಿ ನಾವು ಇಂದು ಅಭಿವ್ಯಕ್ತಿಸಲೇ ಬೇಕಾದ ಎಲ್ಲವೂ ಅದರಲ್ಲೇ ಒಡಮೂಡುತ್ತದೆ. ಮನುಷ್ಯ ಸಂಬಂಧಗಳ ನಿಜ ಓದಿನೊಳಗೆ ಎಲ್ಲಾ ಕಾಲದ ಘಟ್ಟದ ದೇಶದ ಸಾಹಿತ್ಯದ ತಿರುಳಿದೆ. ಒಂದು ಹಳ್ಳಿಯ ಅಡಿಗೆ ಮನೆಯ ಹೆಣ್ಣಿನ ಒಳತುಮುಲವನ್ನೇ ಗಮನಿಸಿದಾಗ ಆಕೆ ದಲಿತ ಸಾಹಿತಿಯಾಗುತ್ತಾಳೆ ಅರ್ಥಾತ್ ಪ್ರತಿಭಟನೆ ಅವಳೊಳಗೆ ಅವ್ಯಕ್ತವಾಗೇ ಹೊರಹೊಮ್ಮಿರುತ್ತದೆ. ಪದಗಳಿಗೆ ನಿಲುಕದ ನಕ್ಷತ್ರಗಳಷ್ಟು ಕನಸುಗಳನ್ನು ಎಣೆದಿರುತ್ತಾಳೆ. ಅದನ್ನು ಅಡಿಗೆ ಮನೆ ಸಕಲ ಪಾತ್ರೆ-ಪಗಡೆಗಳ ಮೇಲೆಲ್ಲಾ ಸುರಿದಿರುತ್ತಾಳೆ. ಅದು ಅಕ್ಷರವಾಗಿ ಹೊರಬಂದರೆ ಅದರ ಮಾತೇ ಬೇರೆ: ಅದೇ ಅವಳು ನಡುಮನೆಗೆ ಬಂದಾಗ ಮೇಲ್ವರ್ಗದ ಸಬಲಳಾಗಿ ಕಾಣಿಸುತ್ತಾಳೆ ಇವು ನಮ್ಮ ಓದಿನ ಅಹಂಕಾರದ ಪಟ್ಟಿಯಲ್ಲಿ ಸಿಗುವಂತಹುದಲ್ಲ. ಜೀವಮುಖಿಯಾದಂತ ಕಾಳಜಿ ಇಲ್ಲದ ಓದು-ಬರೆಹ ಗಾಯದ ಮೇಲೆ ಉಪ್ಪು ಉಜ್ಜಿದಂತೆ" ಎನ್ನುವ ಲಕ್ಕೂರರ ಸರಳವಾದ ಅಭಿವ್ಯಕ್ತಿಯ ಬಗೆಗಿನ ಕಾಳಜಿ ಲೋಕ ಮೆಚ್ಚುವಂತದ್ದು.

ಈ ಮೆಚ್ಚುವ ಕಾಳಜಿ ಯುಕ್ತತೆಯನ್ನು ನಾವು ಚ.ಸರ್ವಮಂಗಳ, ದು.ಸರಸ್ವತಿ, ಪ್ರತಿಭಾ ನಂದಕುಮಾರ್, ಅನಸೂಯ ಕಾಮ್ಳೆ, ಬಿ.ಟಿ.ಲಲಿತಾ ನಾಯಕ್ ಮತ್ತಿತರ ಸಹಜವಾದ ಜೀವಪರ ತಾಯ್ತನದ ಕಾವ್ಯಗಳಲ್ಲಿಯೂ ಕಾಣಬಹುದು. ಇಂದಿನ ಆಧುನಿಕೋತ್ತರ ಕನ್ನಡ ಕಾವ್ಯದಲ್ಲಿ ಸಮಾನ ಪ್ರೀತಿ, ಪ್ರೇಮ, ದೇಶ, ಭಾಷೆ, ಮನುಷ್ಯನಿಗೂ ಮೀರಿದ ಜೀವತತ್ವದ ಮೇಲಿನ ಕಾಳಜಿ ಎಚ್ಚು ಇರುವುದೇ ಇದರ ವಿಶೇಷ. ಅದನ್ನು ಇನ್ನೂ ಮುಗ್ಧವಾಗಿರುವ ಜಗತ್ತು, ಮುರಿದು ಹೋದ ಸಂಬಂಧ, ಮರುಜೀವ ಕೊಡುವ ತಾಯಿಯ ಬಗೆಗೆ ಆಧುನಿಕೋತ್ತರ ಕವಿ ಲಕ್ಕೂರು ಆನಂದರ ಕಾವ್ಯದ ವಸ್ತುವಿನಲ್ಲಿ ನೋಡುವುದಾದರೆ:

'ಹೆಣ್ಣಾಗಿ ಹುಟ್ಟಿದ ಮೇಲೆ ಇದೆಲ್ಲಾ ಮಾಮೂಲೆ
ಎಂದು ಎರಡು ತೊಡೆಗಳ ನಡುವೆ ಕೈ ತೂರಿಸುವ ದಾದಿ
ಕಿಲಕ್ಕನೆ ನಗುತ್ತಾಳೆ;
ಈ ಕ್ಷಣ...ಈ ಕ್ಷಣ ಸರಿದರೆ ಸಾಕೆಂಬ
ಅವಳ ತಣ್ಣನೆಯ ಕೋರಿಕೆಯ ಮೌನ ಅಲುಬುತ್ತದೆ'[3]

ದಾದಿ ಕಿಲಕ್ಕನೆ ನಗುತ್ತಾಳೆ' ಆದರೆ, ಪ್ರಸವ ವೇದನೆಯಲ್ಲಿರುವ ತಾಯಿ ಮರು ಹುಟ್ಟಿನೊಡನೆ ತಾನೂ ದನಿ ಸೇರಿಸುತ್ತಾಳೆ ಎನ್ನುವ ಲಕ್ಕೂರು ಆನಂದರ ಕವನದ ಸಾಲು ಹೆಣ್ಣಿನ ಪೂರ್ಣತೆಯನ್ನು ಹೆಣ್ಣಾಗಿ ಹುಟ್ಟುವ, ರುತುಮತಿಯಾಗುವ, ತಾಯಿಯಾಗುವ ಮತ್ತು ಮುತ್ತೈದೆಯಾಗಿ ಸಾಯುವ ಹಿಂದುತ್ವದ ಘೋರ ಮೆಟ್ಟಿಲುಗಳನ್ನು ಸರಿಸಿ ಆಧುನಿಕೋತ್ತರ ಕನ್ನಡ ಕಾವ್ಯದಲ್ಲಿ ಸಂಬುದ್ಧನ ಜೀವತತ್ವದ ಮೂಲಕ ಇಡೀ ಜಗತ್ತಿನ ಹೆಣ್ಣಿನ ನೆಲೆಯೇನು, ನಮ್ಮ ನಡುವಿನ ದಲಿತ-ದಮನಿತ ಸ್ತ್ರೀ-ಪುರುಷರ ಇಂದಿನ ವಾಸ್ತವ ನೆಲೆಗಳೇನು ಎಂಬುದನ್ನು ಕಾವ್ಯ ಸಂಕೇತಿಸುತ್ತದೆ.

ಮನಬಂದಂತೆ ಧ್ವನಿಯುಕ್ತವಾಗಿಸುವ, ಪಂಡಿತರಿಗಾಗಿಯೇ ಮುತುವರ್ಜಿ ವಹಿಸಿ ಸಿದ್ಧಪಡಿಸಿದಂತಹ ಮಡಿ-ಸಾಹಿತ್ಯವು ಜನಸಾಮಾನ್ಯರ ಕಾವ್ಯವಾಗುವುದಿಲ್ಲ. 'ಜನಸಾಮಾನ್ಯರ' ಎಂದಾಕ್ಷಣ ಕೇವಲ ಒಂದು ಸಮುದಾಯದ ಮುಖವಾಣಿಯಾಗದೆ ಸಮಾಜ ಮುಖಿಯೂ, ನವಿರಾದ ಜೀವಸೆಲೆ ಇರುವ, ಗತ ಮಹತ್ತನ್ನು ಜತನವಾಗಿ ಕಾಪಿಡುವ, ವಾಸ್ತವವನ್ನು ಸಹಜವಾಗಿ ಸರ್ವರೊಡನೆ ಮುಖಾಮುಖಿಯಾಗಿಸುವುದು 'ಜನಸಾಮಾನ್ಯರ' ಆಧುನಿಕೋತ್ತರವಾದ ಕಾವ್ಯವೂ ಆಗುತ್ತದೆ. ಈ ನಿಟ್ಟಿನಲ್ಲಿ ದಲಿತ ಕವಿಗಳಾದ ಸುರೇಶ್ ಗೌತಮ್, ಲಕ್ಕೂರು ಆನಂದ, ಹನಸೋಗೆ ಸೋಮಶೇಖರ್ ಮತ್ತು ಅರವಿಂದ ಮಾಲಗತ್ತಿ, ಅವರ ಕಾವ್ಯಗಳಲ್ಲಿಯೂ ಹಾಗೆಯೇ ದಲಿತೇತರ ಕವಿಗಳಾದ ಸಿಪಿಲೆ ಸತೀಷ್ ಹಾಗೂ ಬಂಜಗೆರೆ ಜಯಪ್ರಕಾಶರ ಕಾವ್ಯಗಳಲ್ಲಿ 'ಆಧುನಿಕೋತ್ತರ ದಲಿತ ಸಂವೇದನೆ'ಯನ್ನು ಪ್ರಸ್ತುತ ಅಧ್ಯಯನದ ಚೌಕಟ್ಟಿನಲ್ಲಿ ನೋಡಬಹುದು.

<u>ಕೊನೆ ಟಿಪ್ಪಣಿ</u>

1. ಕುಶಾಲ: 'ಅರವಿಂದ ಮಾಲಗತ್ತಿ ಅವರ ಕಾವ್ಯಾನುಸಂಧಾನ' (ಈಶ್ವರಿ ಪ್ರಕಾಶನ: ಮೈಸೂರು, 2005) ಪ್ರಸ್ತಾವನೆ.
2. ಬಂಜಗೆರೆ ಜಯಪ್ರಕಾಶ: 'ಮಹೂವಾ' ಕ.ಸಂ. (ಚರ ಪ್ರಕಾಶನ: 1992) ಪು. 7.
3. ಲಕ್ಕೂರು ಆನಂದ: 'ಇತಿ ನಿನ್ನ ವಿಧೇಯನು' (ಕಣ್ವ ಪ್ರಕಾಶನ: ಬೆಂಗಳೂರು, 2010) (ಜನರಲ್ ಆಸ್ಪತ್ರೆಯ 6ನೇ ನಂಬರ್ ವಾರ್ಡು) ಪು. 82.

ಅಧ್ಯಾಯ–2

ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿನ ದಲಿತ ಸಂವೇದನೆ

(ಸುರೇಶ್ ಗೌತಮ್, ಲಕ್ಕೂರು ಆನಂದ, ಹನಸೋಗೆ ಸೋಮಶೇಖರ್ ಮತ್ತು ಅರವಿಂದ ಮಾಲಗತ್ತಿ)

ಇಲ್ಲಿ 'ದಲಿತರು' ಎಂದರೆ ಇಡೀ ದೇಶದ 'ಮೂಲನಿವಾಸಿಗಳು' ಎಂಬ ವಿಶಾಲಾರ್ಥದಲ್ಲಿ ಬಳಸಿಕೊಳ್ಳಲಾಗಿದೆ. ಇಂದಿನ ಸಮಾಜದ ಸಂದಿಗ್ಧ ಪರಿಸ್ಥಿತಿಯಲ್ಲಿ ಶೋಷಣೆಗೊಳಗಾದ ಎಲ್ಲರೂ 'ದಲಿತರು' ಅಂದರೆ ಅಸ್ಪೃಶ್ಯರೆನಿಸಿಕೊಂಡವರು, ರೈತರು, ಮಹಿಳೆಯರು, ಹಿಂದುಳಿದವರು ಅಲ್ಪ ಸಂಖ್ಯಾತರು (ಕ್ರೈಸ್ಥರು, ಜೈನರು, ಬೌದ್ಧರು ಇನ್ನೂ ಮುಂತಾದವರು) ಇನ್ನೂ ಅಕ್ಷರ ಸಂಸ್ಕೃತಿಯ ಪರಿಚಯವಿಲ್ಲದೆ ಮುಖ್ಯವಾಹಿನಿಗೆ ಬಾರದ ಅದೆಷ್ಟೋ ಅಲೆಮಾರಿ ಜನಾಂಗದ ಹಲವರು ದಲಿತರೇ ಆಗಿದ್ದಾರೆ. ಇವರೆಲ್ಲರ ಬಗೆಗಿನ ಕಾಳಜಿಯಿಂದ ಅಭಿವ್ಯಕ್ತಿಗೊಳ್ಳುತ್ತಿರುವ ಸಾಹಿತ್ಯವೇ 'ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿನ ದಲಿತ ಸಂವೇದನೆ'. ಹಾಗೂ ಸಮಾಜದ ಒಳಿತಿಗೆ ಜೀವತತ್ವ; ಜೀವಧರ್ಮದ ನೆಲೆಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳ ಬಗೆಗೆ ಯೋಚಿಸುವ ಶೂದ್ರವರ್ಗವನ್ನು 'ದಲಿತೇತರ'ರೆಂತಲೂ ಇಲ್ಲಿ ಕರೆದುಕೊಂಡು ಈ ಇಬ್ಬರೂ ಇಂದು ದೇಶದ ಜ್ವಲಂತ ಸಮಸ್ಯೆಗಳ ಬಗೆಗೆ ಯೋಚಿಸುವ, ಯೋಜಿಸುವ ಆ ನಿಟ್ಟಿನಲ್ಲಿ ನಿರ್ದಿಷ್ಟವಾದ ಒಂದು ದೊಡ್ಡ ದಿಟ್ಟ ಹೆಜ್ಜೆಯನ್ನೇ ಇಡಬೇಕಾದ ಅನಿವಾರ್ಯತೆ ಇಂದು ನಮ್ಮ ಮುಂದೆ ಇದೆ. ಇದಕ್ಕೆ ಮೊದಲು ಪರಿಣಾಮಕಾರಿಯೂ, ಶಾಶ್ವತವೂ, ಪ್ರಭಾವಯುತವಾದ ಅಭಿವ್ಯಕ್ತಿಗೆ ಆಧಾರವಾದ ಅಕ್ಷರ ಮಾಧ್ಯಮವನ್ನು ಅತೀ ಜಾಗರೂಕತೆಯಿಂದ ಬಳಸಿಕೊಳ್ಳುವ ಮೂಲಕ ಆಕರ್ಷಕ ಸಾಹಿತ್ಯ ಪ್ರಕಾರಗಳ ಮುಖ್ಯೇನ ಸರಳವಾಗಿ, ಸ್ಪಷ್ಟವಾಗಿ ಸಾಮಾನ್ಯರಿಗೂ ಅರ್ಥವಾಗುವ ನೆಲೆಯಲ್ಲಿ ಶೋಷಿತರೆಲ್ಲರನ್ನೂ ಜಾಗೃತಗೊಳಿಸುವ ಜಬಾಬ್ದಾರಿ ಇಂದು ಹೆಚ್ಚಾಗಿ ಬರಹಗಾರರ ಮೇಲಿರುವ ಕಾರಣ ಈ ಇಪ್ಪತ್ತೊಂದನೆ ಶತಮಾನದ ಆರಂಭದಲ್ಲಿ ಬರೆಯುತ್ತಿರುವ ಬುದ್ಧನ–ಬಸವಣ್ಣನ–ಅಂಬೇಡ್ಕರರ ಚಿಂತನೆಯ ಹಾದಿಯಲ್ಲಿ ಸಾಗುತ್ತಿರುವ ಬರಹಗಾರರನ್ನು ನಾವು ಆಧುನಿಕೋತ್ತರ ಕಾಲಘಟ್ಟದ ಕನ್ನಡ ದಲಿತ ಸಾಹಿತಿಗಳು; ಕವಿಗಳು ಎಂದು ಕರೆಯಲಾಗುತ್ತಿದೆ.

ಬ್ರಾಹ್ಮಣರಲ್ಲಿ ಶೋಷಿತರ ಬಗೆಗೆ ಯೋಚಿಸುವ, ಸಹಕರಿಸುವ, ಆಲೋಚಿಸುವ ಉದಾರ ಮನೋಭಾವದ ವಿಶ್ವಪ್ರೇಮಿಗಳಿಗೆ ಸದಾ ಸ್ವಾಗತ ಕೋರುತ್ತಾ ಪಟ್ಟಭದ್ರರನ್ನು ದೂರವಿಡಬೇಕಾಗಿದೆ. ಕೇವಲ ಧರ್ಮ, ಶಾಸ್ತ್ರ, ಆಚಾರ, ನೀತಿ, ದೇವರು, ನಂಬಿಕೆ, ಪುರಾಣದ ಹೆಸರಿನಲಿ ಮನುಷ್ಯರನ್ನು ಮನುಷ್ಯರನ್ನಾಗಿ ಕಾಣದೆ ಪ್ರಾಣಿಗಳಿಗಿಂತಲೂ ನಿಕೃಷ್ಟವಾಗಿ ಕಾಣುತ್ತಿರುವ ವ್ಯವಸ್ಥೆ ಕಣ್ಣಮುಂದಿದೆ. ಇಡೀ ದುಡಿವ ವರ್ಗವನ್ನು ಶತಮಾನಗಳಿಂದಲೂ ಸಾಕೆನಿಸುವಷ್ಟು ಮಾನಸಿಕ ಹತ್ಯಾಚಾರಕ್ಕೊಳಪಡಿಸುತ್ತಾ ಯಥಾಸ್ಥಿತಿಯಲ್ಲಿರಲು ಕಾರಣರಾಗಿ ಬ್ರಾಹ್ಮಣ್ಯವನ್ನು ಆಚರಿಸುವ ಪುರೋಹಿತಶಾಹಿಗಳು ಇಂದಿನ ಎಲ್ಲಾ ಅವಸ್ತೆಗೆ ದೊಡ್ಡ ಕಾರಣ. ಜೊತೆಗೆ ಶೋಷಿತರನ್ನೇ ಓಗಳೆಯುತ್ತಾ, ಬದಲಾವಣೆಯ ಮಾತುಗಳನ್ನಾಡುತ್ತಿರುವ ಮೂಲಭೂತವಾದಿ ಮನಸುಗಳನ್ನು ಸಂಬಲಸದಾಧ್ಯ. ಈ ಕಾರಣ ದಮನಕ್ಕೆ, ನೋವಿಗೆ, ಶೋಷಣೆಗೆ ಒಳಗಾದ ಎಲ್ಲರೂ ಶಿಕ್ಷಿತರಾಗಿ ಹೋರಾಡುವ ಮೂಲಕ ಸಂಘಟಿತರಾಗಬೇಕಿದೆ. ಮತ್ತೆ ತಮ್ಮ ಮೂಲ ಸಮುದಾಯದವರ ಬದಲಾವಣೆಗೆ ಸಂಘಟಿತರಾಗುವ ಸಲುವಾಗಿ ಇಂದು ಎಲ್ಲರೂ ಒಂದಾಗಬೇಕಾಗಿರುವ ಅನಿವಾರ್ಯತೆ ಇದೆ.

'ಆಧುನಿಕೋತ್ತರ ಕನ್ನಡ ದಲಿತ ಕಾವ್ಯ' ಹಲವು ಕಾರಣಗಳಿಂದಾಗಿ ವಿಶಿಷ್ಟತೆಯಿಂದ ಕೂಡಿರುವಂತದ್ದು. ತನ್ನ ಹಿಂದಿನ ಕಾವ್ಯ ಪರಂಪರೆಗಳ ಜೊತೆಗಿನ ಸಂಬಂಧಗಳು, ಆಧುನಿಕ ಶಿಕ್ಷಣ ಕ್ರಮ, ಯಂತ್ರ ನಾಗರೀಕತೆ, ಪ್ರಜಾಪ್ರಭುತ್ವದ ಅವಕಾಶ, ಸಂವಿಧಾನ, ಸ್ವಾತಂತ್ರ್ಯ, ಸಮಾನತೆ, ರಾಜಕೀಯ ಅಧಿಕಾರ, ಪಾಶ್ಚಾತ್ಯ ಸಾಹಿತ್ಯ-ಕಾವ್ಯಪ್ರೇರಿತ ಹೊಸ ಆಲೋಚನಾ ಕ್ರಮಗಳಿಂದಾಗಿ ಆಧುನಿಕೋತ್ತರ ಕಾವ್ಯಗಳು ಹೆಚ್ಚು ವೈವಿಧ್ಯತೆಯನ್ನು, ವಿಸ್ತಾರತೆಯನ್ನು ಪಡೆದುಕೊಂಡಿತು. ಹೀಗೆ ಪಡೆಯುವುದರ ಹಿಂದೆ ಅನೇಕ ರೀತಿಯ ಒತ್ತಡಗಳು, ಸಂದರ್ಭಗಳು ಕೆಲಸ ಮಾಡಿವೆ. ಇವತ್ತಿನ ಚಾರಿತ್ರಿಕ ಸಂದರ್ಭದಲ್ಲಿ ಸಾಹಿತ್ಯದಲ್ಲಿ ಅನೇಕ ರೀತಿಯ ಪಲ್ಲಟಗಳು, ಪರಿವರ್ತನೆ, ಮೌಲ್ಯಗಳು ತುಂಬಿಕೊಂಡಿದೆ ಮತ್ತು ಈ ಮೌಲ್ಯಗಳು, ಪಲ್ಲಟಗಳು ಕೂಡಾ ನಿರಂತರವಾಗಿ ಚಲನೆಯನ್ನು ಪಡೆದುಕೊಳ್ಳುತ್ತಿದೆ. ಈ ಕಾಲದಲ್ಲಿನ ಕವಿಗಳೆಲ್ಲರೂ ಕೂಡ ಮೇಲಿನವರ ಪ್ರಭಾವಗಳಿಂದ ಹೊರತಾದವರಲ್ಲ. ಆದರೆ ಇಂತಹ ಎಲ್ಲಾ ಪ್ರಭಾವಗಳನ್ನು ಜೀರ್ಣಿಸಿಕೊಂಡು ಭ್ರಮೆಯಿಂದ ಹೊರಬಂದು ಮುಕ್ತವಾಗಿ ವಾಸ್ತವವನ್ನು ತಮ್ಮ ಕಾವ್ಯದ ಮುಖ್ಯ ಅಭಿವ್ಯಕ್ತಿಯನ್ನಾಗಿಸಿಕೊಂಡಿರುವುದು ಆಧುನಿಕೋತ್ತರ ಸಾಹಿತ್ಯದ ಹೆಗ್ಗಳಿಕೆ ಮತ್ತು ವಿಶೇಷವೇ ಆಗಿದೆ.

ಜಾಗತೀಕರಣದ ಇವತ್ತಿನ ಮಾಯೆ ನಮ್ಮೆಲ್ಲ ಸತ್ವ ಚೈತನ್ಯಗಳನ್ನು, ಕಲೆ, ಸಂಸ್ಕೃತಿಯನ್ನು ನಾಶಗೊಳಿಸುತ್ತಿರುವ ಸಂದರ್ಭದಲ್ಲಿ ಆಧುನಿಕತೆಯ ಭರಾಟೆಯು ಮನುಷ್ಯನ ಸಹಜ ಪ್ರೀತಿ, ವಿಶ್ವಾಸ, ಎಲ್ಲಾ ಸಂಬಂಧಗಳೂ ಛಿದ್ರಗೊಳಿಸಿದೆ. ಈ ದಿನಗಳಲ್ಲಿ ನಮ್ಮ ಆಧುನಿಕೋತ್ತರ ಕನ್ನಡ ಕವಿಗಳು ವರ್ತಮಾನದ ಸಂದರ್ಭದಲ್ಲಿನ ಅನೇಕ ಬಿಕ್ಕಟ್ಟುಗಳ, ಸಂಘರ್ಷಗಳ ನಡುವೆಯೂ ಕೂಡ ವಾಸ್ತವವನ್ನು ಪ್ರಜ್ಞಾಪೂರ್ವಕವಾಗಿ ಗಮನಿಸುತ್ತಿದ್ದಾರೆ. ಆಶಾವಾದದ ನೆಲೆಯನ್ನು ಜಾತ್ಯಾತೀತವಾಗಿ, ಧರ್ಮಾತೀತವಾಗಿ ಕಾವ್ಯವಾಗಿಸಿಕೊಡುತ್ತಿರುವುದು ಬದಲಾಗಬಹುದಾದ ಧನಾತ್ಮಕ ಸಮಾಜದ ಪೂರ್ವ ಸೂಚನೆಯನ್ನು ಬೇಗನೆ ದರ್ಶಿಸಿಕೊಂಡಂತಾಗಿದೆ. ದಲಿತ-ಬಂಡಾಯದ ಉತ್ತುಂಗದಲ್ಲಿಯೂ ದಲಿತ ಕವಿಗಳು ನವ್ಯದವರಂತೆ ಇನ್ನೂ ಹಿಂದಕ್ಕೆ ಹೋಗಿ ನವೋದಯದವರಂತೆಯೇ ನಿರಾಶೆ, ಹತಾಸೆ, ಭ್ರಮೆ, ಆದರ್ಶದ ಕಲ್ಪನೆಯಲ್ಲಿ ಭವಿಷ್ಯದಲ್ಲಿ ಬರಬಹುದಾದ ಪ್ರವಾದಿ ಅಥವಾ ನಾಯಕನನ್ನು ಕರೆಯುವ ವಿಷಾದದ ಛಾಯೆಯನ್ನು ಮೂಡಿಸುತ್ತಾ ಹೋದರು. ಆದರೆ ಇವರ ಮುಂದಿನವರು ಹೀಗಾಗದೆ; ಗತಿಸಿಹೋದ ನಾಯಕನ ಕೊರಗಿನಲ್ಲಿಯೇ ಹಪಾಹಪಿಸದೆ, ಆರ್ತನಾದವನ್ನು ಮೀರಿದ ಬದಲಾವಣೆ, ಹೊಸ ಸೃಷ್ಟಿ ನಮ್ಮಿಂದಲ್ಲದೆ ಬೇರಾರಿಂದಲೂ ಅಸಾಧ್ಯ ಎನ್ನುವುದನ್ನು ಆಧುನಿಕೋತ್ತರ ಕವಿಗಳು ತಮ್ಮ ಕಾವ್ಯಗಳಲ್ಲಿ ಬಿಂಬಿಸುತ್ತಿರುವುದು ವಿಶೇಷ.

ಈ ನಿಟ್ಟಿನಲ್ಲಿ ಕ್ರಿ.ಶಕ. 2000ದಿಂದ ಇಲ್ಲೀವರೆಗೆ ರಚಿತವಾಗಿರುವ ಕನ್ನಡ ಕಾವ್ಯಗಳನ್ನು "ಆಧುನಿಕೋತ್ತರ ಕನ್ನಡ ಕಾವ್ಯಗಳು" ಎಂದು ಇಂದು ಕರೆಯಬೇಕಾದ ಅವಶ್ಯಕತೆಯಿದೆ. ಆಧುನಿಕೋತ್ತರ ಕನ್ನಡ ಕವಿಗಳು ದಲಿತರೂ ದಲಿತೇತರರೂ ಆಗಿ ಒಟ್ಟಾರೆ ಶೂದ್ರರೂ ಮಾನವ ಪ್ರೇಮಿಗಳೂ ಆಗಿ ಜಾತ್ಯಾತೀತ, ಧರ್ಮಾತೀತವಾಗಿ ಬರೆಯತೊಡಗಿದ ಕವಿಗಳನ್ನು 'ಆಧುನಿಕೋತ್ತರ

ಕನ್ನಡ ಕವಿ'ಗಳೆನ್ನುವ ಹೊಸ ಪರಿಕಲ್ಪನೆಯೊಂದಿಗೆ ದಲಿತ ಮತ್ತು ಬಂಡಾಯ ಕಾವ್ಯ ಕಾಲಘಟ್ಟದ ನಂತರ ಹೊಸ ತಲೆಮಾರಿನ ಕವಿಗಳು ಹೊಸ ಘಟ್ಟದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಹಂಬಲಿಸಿದ್ದಾರೆ. ಹಾಗೂ ಕೇವಲ ಹಿಂದಿನ ಕವಿಗಳಂತೆ ನಿರಾಶೆ, ಭ್ರಮೆ, ಹತಾಸೆ, ಕೀಳರಿಮೆ, ಮೇಲರಿಮೆ, ಸೂತಕದ ಛಾಯೆಲ್ಲಿಯೇ ಕಾವ್ಯವನ್ನು ವಿರಚಿಸುವ ಬದಲು ಹೊಸ ಕಾಲದಲ್ಲಿ ಹೊಸದಾದ ಬಗೆಯಲ್ಲಿ ಮುಕ್ತವಾಗಿ ವಾಸ್ತವ ನೆಲೆಯಲ್ಲಿ ಸಮಸ್ಯೆಯ ಜೊತೆಯಲ್ಲಿ ಬಹುಸಾಧ್ಯತೆಯ ಪರಿಹಾರವನ್ನು ತಿಳಿಹೇಳುವ ಸಾಕಷ್ಟು ಹೊಸತನ್ನು, ವಿಭಿನ್ನ ನೆಲೆಯನ್ನು ಮನಗಾಣಬಹುದಾದ ವಿಶೇಷ ಛಾತಿಯ ಕಾವ್ಯ ತಮ್ಮಿಂದ ಸಾಧ್ಯವೆಂಬುದನ್ನು ಸಾಭೀತುಪಡಿಸಿದ್ದಾರೆ. ಹೀಗೂ ಯೋಚಿಸಬಹುದೆನ್ನುವ, ಇತಿಹಾಸವನ್ನು ಮುರಿದು ಕಟ್ಟುವ, ದೇಶವನ್ನು ಮತ್ತಷ್ಟು ಧನಾತ್ಮಕ ಧೋರಣೆಯೊಂದಿಗೆ ಮುಂದೆ ಸಾಗಿಸುವ ಇರಾದೆಯಲ್ಲಿ ರಚನೆಗೊಳ್ಳುತ್ತಿರುವ ಕಾವ್ಯಕಾಲವನ್ನು ಪ್ರೀತಿಯಿಂದ 'ಆಧುನಿಕೋತ್ತರ ಕನ್ನಡ ಕಾವ್ಯಗಳು' ಎಂಬ ಕಾವ್ಯ ಘಟ್ಟದಲ್ಲಿ ಗುರ್ತಿಸುವ ತುರ್ತಿದೆ. ಇದು ಕೇವಲ ಕಪೋಲ ಕಲ್ಪಿತವಾಗದೆ ಇಡೀ ದಲಿತ ಮತ್ತು ದಲಿತೇತರ ಕವಿಗಳ ಇಂದಿನ ಕಾವ್ಯ ಸಂಸ್ಕೃತಿಯ ನೆಲೆಯಲ್ಲಿನ ಚರ್ಚೆಯ ವಿಷಯವೂ; ಅಗತ್ಯವೂ; ಸಾಧುವೂ ಆಗಿರುತ್ತದೆ. "ಎಪ್ಪತ್ತರ ದಶಕದಲ್ಲಿ ಕರ್ನಾಟಕದ ಬೀದಿಗಳಲ್ಲಿ ಕೂಗಿದ "ದಲಿತ" ಅನ್ನುವ ಪದ ತಮಟೆಯ ಲಯದಂತೆ ಎದೆಯ ಕನಿಯಾಗಿ ಕೇಳಿಸಿತ್ತು. ಮೈನೆರೆದ ಹುಡುಗಿಯಂತೆ ಮುಗ್ಧತೆ ನಾಚಿಕೆ ಸಂಭ್ರಮ ನೆನಪು ಮತ್ತು ಕನಸುಗಳನ್ನು ಮೈಗೂಡಿಸಿಕೊಂಡು ಓಡಾಡುತ್ತಿತ್ತು. ಈಗ ಮದುವೆಯಾಗಿ ಮಕ್ಕಳನ್ನು ಹೆತ್ತ ತಾಯಿಯಂತೆ ದಲಿತ ಪದ ತಿರುಗಾಡುತ್ತಿದೆ. ದಲಿತ ಚಳುವಳಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲಘಟ್ಟದಲ್ಲಿ ಅಸ್ಪೃಶ್ಯತೆ ಅನುಭವದಂತಹ ಸಾಮಾಜಿಕ ಸಂಕಟವನ್ನು ವಿರೋಧಿಸುವ ಕ್ರಮವಾಗಿ ದಲಿತರನ್ನು ಎಚ್ಚರಿಸುವ ನೆಪದಲ್ಲಿ "ಇಕ್ರಲಾ ವದಿರ್ಲ ಈ ನನ್ ಮಕ್ಳ ಚರ್ಮ ಎಬ್ರಲಾ" ಎಂಬ ಪ್ರತಿಭಟನಾ ಮಾದರಿಯ ಕಾವ್ಯ ಹುಟ್ಟಿತ್ತು. ಸದ್ಯದಲ್ಲಿ ದಲಿತ ಚಳುವಳಿ ದಣಿದು ಸುಸ್ತಾದಂತೆ ಕಾಣುತ್ತಿದೆ. ಇಕ್ಕಲೂ ಆಗದ ವದೆಯಲೂ ಆಗದ ಅಂಗವಿಕಲ ಸ್ಥಿತಿಯಲ್ಲಿದೆ. ಇದು ದಲಿತ ಚಳುವಳಿಯ ಸಂಕ್ರಮಣ ಕಾಲ ಎಂದರು ಸರಿಯೇ. ದಲಿತ ಕಾವ್ಯದ ಬಗ್ಗೆ ಮಾತನಾಡುವುದೆಂದರೆ ದಲಿತ ಪರಂಪರೆ, ಭಾಷೆ, ಸಂಸ್ಕೃತಿ, ರಾಜಕಾರಣದ ಬಗ್ಗೆ ನಡೆಸುವ ಗಂಭೀರ ಚರ್ಚೆ ಎಂದರ್ಥ"[1] ಎಂದು ದಲಿತ ಸಾಹಿತ್ಯವನ್ನು ವಿಮರ್ಶಿಸಿದ್ದ ಕವಿ ಕೆ.ಬಿ.ಸಿದ್ಧಯ್ಯರ ವಿಚಾರ ಈ ಮೇಲಿನ ಅಧ್ಯಯನದ ವಸ್ತುವಿಗೆ ಮತ್ತಷ್ಟು ಪುಷ್ಠಿಯನ್ನು ಒದಗಿಸುತ್ತದೆ.

ದಲಿತರು ದಲಿತೇತರರ ಬಗೆಗೆ ಹಾಗೂ ದಲಿತೇತರರು ದಮನಿತರ ಬಗೆಗೆ ಜಾತಿರಹಿತವಾಗಿ ಇಂದಿನ ಪರಿಸ್ಥಿತಿಯಲ್ಲಿ ತೀವ್ರವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಈಗಾಗಲೇ ಅಧ್ಯಯನದ ವ್ಯಾಪ್ತಿಯಲ್ಲಿ ವಿವರಿಸಿಕೊಂಡಂತೆ, ಕನ್ನಡದ ದಲಿತ ಕವಿಗಳಾದ: **ಸುರೇಶ್ ಗೌತಮ್, ಲಕ್ಕೂರು ಆನಂದ, ಹನಸೋಗೆ ಸೋಮಶೇಖರ್ ಮತ್ತು ಅರವಿಂದ ಮಾಲಗತ್ತಿ ಅವರುಗಳು ಕ್ರಿ.ಶಕ. 2000ದಿಂದ 2014ರ ವರೆಗೆ** ಬರೆದ ಕಾವ್ಯಗಳನ್ನು ಮತ್ತು ಇದೇ ಮನಸ್ಥಿತಿಯಲ್ಲಿರುವ ದಲಿತೇತರ ಕವಿಗಳಾದ **ಸಿಪಿಲೆ ಸತೀಶ್** ಮತ್ತು **ಬಂಜಗೆರೆ ಜಯಪ್ರಕಾಶ್**ರವರ ಕಾವ್ಯಗಳನ್ನು ಅಧ್ಯಯನದ ಚೌಕಟ್ಟಿನಲ್ಲಿ ವಿಶ್ಲೇಷಿಸಲಾಗಿದೆ.

ಅ. ಆಧುನಿಕೋತ್ತರ ಕಾವ್ಯಗಳಲ್ಲಿ ಸುರೇಶ್ ಗೌತಮ್‌ರ ದಲಿತ ಕಾವ್ಯಸಂವೇದನೆ:

'ಬೆಳ್ಳಿಗೆರೆಯ ದೀವಿಗೆ' ಮತ್ತು 'ಮಾತು ಕೊಂದ ಭಾರತ' ಕವನ ಸಂಕಲನದ ಮೂಲಕ ಇಪ್ಪತ್ತೊಂದನೆ ಶತಮಾನದ ಆಧುನಿಕೋತ್ತರ ಕನ್ನಡ ಕಾವ್ಯದ ನೆಲೆಯಲ್ಲಿ ದಮನಿತರ ಕವಿ ಸುರೇಶ್ ಗೌತಮ್ ಸಂವೇದನಾ ಶೀಲ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡವರು. ನವ ಸಮಾಜವನ್ನು ಕಟ್ಟುವ, ಹೊಸತ್ತಿನೊಂದಿಗೆ ಹಳೆಯದಾದ ಆದರೆ ವಿಶಾಲಗುಣದ ಬೇರಿನ ಸಂಬಂಧಕ್ಕೆ ಮತ್ತೆ ಜೀವತುಂಬುವ ಮೂಲಕ ಬೆಸುಗೆ ಹಾಕುವ, ಸರ್ವ ಸಮಾನತೆ ಸಮಾಜವನ್ನು, ಶೋಷಣೆಮುಕ್ತ ಸಂಸ್ಕೃತಿಯನ್ನು ನಿರ್ಮಿಸುವ ತವಕವುಳ್ಳ ಕನಸುಗಾರ ಕವಿ. ಶೋಷಿತ ಸಮಾಜದ ಬೇರಿನಿಂದ ಕುಡಿಹೊಡೆದು ಬೆಳೆಯಲು ಪಣತೊಟ್ಟಿರುವ, ಅಲ್ಲಿಯೇ ಭರವಸೆಯ ಬದುಕನ್ನು ಕಟ್ಟಲು ಬಯಸುವವರು. ಸಹಜವಾಗಿಯೇ ತಮ್ಮ ಕೆಲವು ಕವಿತೆಗಳಲ್ಲಿ ಬಂಡಾಯದ ಬಾವುಟಗಳನ್ನು ಆರಿಸಿದ್ದಾರೆ. ಕೆಲವು ಕವಿತೆಗಳಲ್ಲಿ ನಾಡು, ನುಡಿಯ ಪ್ರೇಮ ಅಭಿಮಾನಗಳನ್ನು ಸಶಕ್ತವಾಗಿ ಮೂಡಿಸಿದ್ದಾರೆ. ಅವು ಆದರ್ಶ ಸಮಾಜ ನಿರ್ಮಾಣಕ್ಕೆ ಅನುವಾಗುವಂಥ ಅರ್ಥಪೂರ್ಣ ಕಾವ್ಯವನ್ನು ಕೊಡುತ್ತವೆ ಎಂಬುದನ್ನು ಅವರ ಮೊದಲ ಕವನ ಸಂಕಲನ 'ಬೆಳ್ಳಿಗೆರೆಯ ದೀವಿಗೆ' ಮತ್ತು ಎರಡನೆಯ ಕವನ ಸಂಕಲನ 'ಮಾತು ಕೊಂದ ಭಾರತ' ಬಿಂಬಿಸುತ್ತದೆ ಮತ್ತು ವ್ಯವಸ್ಥೆಯೊಂದಿಗೆ ಮಾತನಾಡುತ್ತವೆ.

ಇಪ್ಪತ್ತೊಂದನೇ ಶತಮಾನದಲ್ಲೂ 'ಭವ್ಯ ಭಾರತೀಯ ಸಮಾಜ'! ಹೊಲಸು ತುಂಬಿದ ಅಸಮಾನ ಮನಸ್ಸುಗಳ ಕಪಿಮುಷ್ಟಿಗೆ ಸಿಲುಕಿ ಅಸಮಾನತೆಯ ಆಗರವಾಗಿರುವ ಸಂದರ್ಭದಲ್ಲಿ 'ಬೆಳ್ಳಿಗೆರೆಯದೀವಿಗೆ' ವರ್ತಮಾನದೊಂದಿಗೆ ರಾಜಿಮಾಡಿಕೊಂಡಿರುವ ಮನಸುಗಳನ್ನು ಪಕ್ವಗೊಳಿಸಲು ಬಯಸುತ್ತದೆ. ಆಧುನಿಕೋತ್ತರ ಕನ್ನಡ ಕಾವ್ಯ ಮನೋರಂಜನೆಗಾಗಿ ಹೆಣ್ಣನ್ನು ವರ್ಣಿಸುವುದಿಲ್ಲ ಬದಲಾಗಿ ಹೆಣ್ಣಿನ ನೋವಿನ ಕಾರಣ, ಪರಿಣಾಮ, ನಿವಾರಣೆ ತತ್ವದ ಭಾವ ಸೂಪ್ತಿಯಾಗಬೇಕು ಎನ್ನುತ್ತದೆ. 'ಕಾವ್ಯ ಜೀವನ್ಮುಖಿ ರಸತುಂಬಿದ ಖಡ್ಗ'ವಾದಾಗ ಮಾತ್ರ ಸಮಾಜದ ವ್ಯವಸ್ಥೆಗೆ ಕಳಂಕ ಪ್ರಾಯವಾಗಿ ಅಂಟಿಕೊಂಡಿರುವ ಜಡ್ಡುಗಟ್ಟಿದ ಅಮಾನವೀಯ ಆಚರಣೆಗಳನ್ನು ಇರಿದು, ಸಿಗಿದು ಕಿತ್ತೆಸೆಯಲು ಸಾಧ್ಯವಾಗುತ್ತದೆ. ಸಂದರ್ಭಕ್ಕನುಗುಣವಾದ ಸಂಘರ್ಷವಿಲ್ಲದೆ ಸಮಾನತೆ ಅಸಾಧ್ಯವೆಂಬುದು ಇವರ ಕಾವ್ಯದ ಒಡಲ ಉಲಿಯಾಗಿದೆ. 'ಬರಿದಾಗಿರುವ ಬದುಕಿನಲಿ ಬಂಜರು ಇಳೆಯ ಒಡಲಿನಲಿ ಆಕ್ರಂದನ ಮುಗಿಲು ಮುಟ್ಟುವ ಮುನ್ನ ಕಪ್ಪುಗೆರೆಯ ನೂಕಿ ಹೊರಗೆ ಮೂಡಬೇಕು' ಎನ್ನುವ ಕವಿ ಸಮಸಮಾಜಕ್ಕೆ ತುಡಿವ ಅಪರೂಪದ ಕವಿಯಾಗಿದ್ದಾರೆ.

ನೂರಾರು ವರ್ಷಗಳ ವ್ಯವಸ್ಥೆಯ ಏರುಪೇರು ಯಥಾಸ್ಥಿತಿಯಲ್ಲಿದ್ದರೂ ಗತ ಇತಿಹಾಸವೇನೂ ಜೀವವಿರದ ಬಂಜೆಯಾಗಿರಲಿಲ್ಲ. ನಿಜ ವಾರಸುದಾರರು ಯಾರು ಎಂಬುದನ್ನು ಬುದ್ಧನ ನೆಲೆಯಲ್ಲಿ ಜೀವಸಹಿತವಾದ ಮನಸ್ಸಿನಿಂದ ಯೋಚಿಸಿದಾಗ ಅಸತ್ಯದ ಕಪ್ಪುಮೋಡ ಸರಿದು ಬೆಳ್ಳಂಬೆಳಕಿನ ಸಮಾನತಾವಾದವಿ ನೆಲೆಯೂರಲು ಸಾಧ್ಯ ಎಂಬ ಆಶಾವಾದವನ್ನು ಹಿಂದಿನ ಕಾವ್ಯದ ಅಂತರ್ಯಗಳು ಧ್ವನಿಸಿವೆ. ಇದರ ಜೊತೆಗೆ ಇಂದಿನ ಕಾವ್ಯದ ಮುಖ್ಯ ಉದ್ದೇಶ ಅಸಹಾಯಕ

ಮನಸುಗಳಿಗೆ ಆಶಾವಾದವನ್ನು ಮೂಡಿಸಬೇಕೇ ಹೊರತು ಕೆರಳಿಸುವುದಲ್ಲ, ಅದು ಇಂದಿನ ಆಧುನಿಕ ಮನಸುಗಳಲ್ಲಿ ಮೂಡಿಸಲೇ ಬೇಕಾದ ತುರ್ತಾಗಿದೆ ಎಂದು ಭಲವಾಗಿ ನಂಬಿದೆ.

'ಹಸಿವಲ್ಲ ಇದು ಹಸಿವಲ್ಲ
ಸುಡುವ ಬೆಂಕಿಯ ಜ್ವಾಲೆ
ಬದುಕಿಗಾಗಿ ಕಾದು ಕಾದು
ಬೆವರ ನೀರು ಬತ್ತಿಹೋಯ್ತು
ಹರುಷಕ್ಕಾಗಿ ಕಾದುಕಾದು
ಮನದ ಬಯಕೆ ಮಾಸಿ ಹೋಯ್ತು'[2]

ಎನ್ನುವ ಕವಿಸಾಲು "ಹಾದೀಲಿ ಹೋಗ್ವೋರೆ ಹಾಡೆಂದು ಕಾಡ್ಬೇಡಿ ಹಾಡಲ್ಲ ನನ್ನ ಒಡಲುರಿ, ದೇವರೆ ಬೆವರಲ್ಲ; ಅದು ನನ್ನ ಕಣ್ಣೀರು" ಎಂಬ ಜನಪದ ಮಾತನ್ನು ನೆನಪಿಸುವ ಸಾಲು ವಿನಾಕಾರಣ ಇಡೀ ಭಾರತದ ಸಂಪದ್ಭರಿತ ನೆಲದಲ್ಲಿ ಅನಾಥವಾಗಿ ಹಪಾಹಪಿಸುವ; ಹತಾಶಾಭಾವವನ್ನು ಜಾಗರೂಕತೆಯಿಂದ ಹೆಣೆದು ಕಣ್ಣೆದುರಿಗೆ ತನ್ನಂತೆಯೇ ಇರುವ ಮನುಷ್ಯರನ್ನು ಹಿಂಸೆಗೆ ಒಳಗುಮಾಡುವ ಮನುವಾದದ ನಾಟಿವೈಧ್ಯರುಗಳ ಕಪಟತೆಯ ಅನಾವರಣವಾಗಿದೆ. ಈ ದುರಂತವು ಭವಿಷ್ಯದಲ್ಲಿ ಹೀಗೇ ನಡೆದರೆ ಜುಟ್ಟುಜನಿವಾರಗಳ ಬುರುಡೆಗಳಿಗೆ ಬಿಸಿ ನೀರೆರೆದು ಗುದ್ದಲಿಪೂಜೆ ಮಾಡುವ ಸೂಚನೆಯನ್ನು ಸುರೇಶ್ ಗೌತಮ್ ಕಾವ್ಯ ಸೂಚಿಸುತ್ತದೆ.

ಕವಿತೆಯಲ್ಲಿ 'ಮಹಾಮೋಸ ನಡೆದಿದೆ' ಎಂಬ ಆರಂಭದ ಸಾಲುಗಳು ನಿಜವನ್ನೇ ಹೇಳುತ್ತಾ ಮುಖಕ್ಕೆ ರಾಚುತ್ತವೆ. ನಿಜವನ್ನು ಎಷ್ಟು ಭಾರಿ ಹೇಳಿದರೂ ಅದು ನಿಜವೇ. ಆದರೆ, ಕರಾಳವನ್ನು ಜಪಿಸದೆ ಅದನ್ನೇ ಕಿರಿಪೀಳಿಗೆಗೂ ಉಣಬಡಿಸಿ ಗೊರಕೆಹೊಡೆಯದೆ ತಮ್ಮದೊಂದಿಷ್ಟು ಪರಿಹಾರವನ್ನು ಸೂಚಿಸುವ ಮೂಲಕ ಈ ಲೋಪವನ್ನು ಸರಿಪಡಿಸುವ ಬಗೆಗೆ ಯೋಚಿಸುವುದರಿಂದ ಭವಿಷ್ಯತ್ತಿನ ಮಕ್ಕಳು ಯುದ್ಧ ಪಿಪಾಸುಗಳಾಗದಿರಲು ಸಾಧ್ಯ. ಇಂತಹ ಅಪಾಯ ಸಂಭವದ ಕಾವ್ಯಗಳಿಗಿಂತ ಆಶಾವಾದವನ್ನು ಆಧುನಿಕೋತ್ತರ ಕಾವ್ಯ ಜಗತ್ತಿನಿಂದ ಸಮಾಜ ಆಗ್ರಹಿಸುತ್ತದೆ ಎನ್ನುವುದನ್ನು ಕವಿತಾ ರಚನೆಕಾರರು ಅರ್ಥಮಾಡಿಕೊಳ್ಳಬೇಕಾಗಿದೆ.

ಸಂಕೇತ, ರೂಪಕ ಮತ್ತು ಪ್ರತಿಮಾ ರೂಪದ ಕವಿತೆಗಳು ಈ ಸಂಕಲನದಲ್ಲಿದ್ದು; ಕವಿಯ ತಾಯಿಯ ಹಿರಿಮೆಯನ್ನು 'ಜನನಿ ಜೀವ' ಎಂಬ ಕವಿತೆ ಸಾರುತ್ತದೆ. ಭಾರತದಲ್ಲಿಂದು ನಾವು 'ಬಂಡವಾಳ ಶಾಹಿತ್ವ' 'ವಂಶ ಪಾರಂಪರ್ಯದ ಪಾಳೇಗಾರಿಕೆ', 'ಅನುಕೂಲ ಸಿಂಧು ಪ್ರಜಾಪ್ರಭುತ್ವ'ಗಳನ್ನು ಕಾಣುತ್ತಿದ್ದೇವೆ ಎಂದು ಸಾರಿ ಹೇಳಬಹುದು. ಅದನ್ನು ಭಾರತದ ನಡತೆಗೆಟ್ಟ ರಾಜಕಾರಣ, ಮತ ಪಡೆವ ಹುನ್ನಾರಗಳನ್ನು 'ಇವರು ನಮ್ಮವರಾ?' ಕವಿತೆಯಲ್ಲಿ ಬಿಂಬಿಸುವ ಸುರೇಶ್ ಬದುಕಿನ ಎಲ್ಲ ಲೋಪವ ತೊಳೆದು ನಿರ್ಮಲ ಆನಂದ ಅನುಭವಿಸುವ ಆಶಯವಿರುವುದನ್ನು ತಮ್ಮ ಆಧುನಿಕೋತ್ತರ ಕವಿತೆಯಲ್ಲಿ ಛಾಪಿಸಿದ್ದಾರೆ.

'ಮಾತು ಕೊಂದ ಭಾರತ' ಕವನ ಸಂಕಲನ ಸಮಾನತಾ ಆಶಯದ ಒತ್ತಾಸೆಯಿಂದ ಮೈಪಡೆದಿರುವ ಕವನ ಸಂಕಲನವು ಸಾಮಾಜಿಕ ದುರಂತಗಳನ್ನು ದಾಖಲಿಸುತ್ತಲೇ, ಪರಂಪರೆಯ ಉದ್ದಕ್ಕೂ ದನಿ ಎತ್ತಿದ, ಹಲವಾರು ಜೀವತತ್ವದ ಚಿಂತಕರ ಜೀವಪರ ಕುರಿತು ಮಾತನಾಡುತ್ತದೆ.

'ಮಾತು ಕೊಂದ ಭಾರತ' ಬಹುಸಂಸ್ಕೃತಿ, ಸಮುದಾಯಗಳನ್ನ ಹೊಂದಿರುವ ಬಹು ನಡೆಯ ಭಾರತವನ್ನು ಏಕ ಪ್ರಾಕಾರದ ಭಾರತವನ್ನಾಗಿ ಬಿಂಬಿಸುವ ಅಪಾಯದ ಸಂದರ್ಭದಲ್ಲಿ ಈ ಶೀರ್ಷಿಕೆಯು 'ಅನೇಕ ಭಾರತ'ಗಳ ಬಗೆಗೆ ಆಲೋಚಿಸುವಂತೆ ಮಾಡಿದೆ. ಭಾರತದ ಸಂಸ್ಕೃತಿ ವಿಶೇಷ ವರ್ಷಾಚರಣೆಯ ಆಗರ. ಅದರ ನೋಟ ಒಂದೇ ಅಲ್ಲ, ವಿಭಿನ್ನ ಕೋನವುಳ್ಳದ್ದು. ಭಾರತ ಹಲವು ಬದುಕು, ಕಾಯಕ, ಚಿಂತೆ–ಚಿಂತನೆ, ನಂಬಿಕೆ–ನೀತಿ, ಆಚರಣೆ–ಅನುಭವ, ಹೋರಾಟ–ವಿನೋದ, ಊರು–ಕೇರಿ, ವ್ಯಕ್ತಿಸಮಾಜ, ತತ್ವ–ವ್ಯಕ್ತಿತ್ವ, ಕಳಕಳಿ–ಕಾಳಜಿ, ಸಿದ್ಧಾಂತ–ಸೌಂದರ್ಯ ಪ್ರಜ್ಞೆ, ನೆಲ–ನೆಲೆ–ಭಾಷೆ ಮತ್ತು ಆಧ್ಯಾತ್ಮಗಳನ್ನು ಒಳಗೊಂಡಿರುವ ಭಾರತದ ಸಾಮುದಾಯಕವಾಗಿಯೂ ಕೂಡ ಒಂದೇ ಅಗಿಲ್ಲ. ಬದಲಾಗಿ ಅಸ್ಪೃಶ್ಯ, ಹಿಂದುಳಿದ ಅಲ್ಪಸಂಖ್ಯಾತ, ಆದಿವಾಸಿ, ಬುಡಕಟ್ಟು, ಅಲೆಮಾರಿ ಇತ್ಯಾದಿ ಅಸಂಖ್ಯಾತ ಸಮುದಾಯಗಳ ನಾಡು ಎಂಬುದನ್ನು ಸಾಭೀತುಪಡಿಸುತ್ತದೆ. "ಇಂತಹ ಬೃಹತ್ ಭಾರತದೊಳಗೆ ಅಸಂಖ್ಯಾತ ಭಾರತಗಳು ಇದ್ದಾವೆ. ಜಾತ್ಯಾತೀತ–ಜಾತಿವಾದಿ ಭಾರತ, ಧರ್ಮಾತೀತ–ಧರ್ಮಾಂಧ ಭಾರತ, ದ್ರಾವಿಡ–ಆರ್ಯ ಭಾರತ, ಶೋಷಿತ–ಶೋಷಕ ಭಾರತ, ಬಡವ–ಶ್ರೀಮಂತ ಭಾರತ, ಗ್ರಾಮೀಣ–ನಗರ–ಕೊಳೆಗೇರಿ ಭಾರತ, ಸ್ಪೃಶ್ಯ–ಅಸ್ಪೃಶ್ಯ ಭಾರತ, ಮನುವಾದಿ–ಸಂವಿಧಾನಾತ್ಮಕ ಬುದ್ಧ ಭಾರತ ಮತ್ತು ಪ್ರಭುತ್ವ–ಪ್ರಜಾಪ್ರಭುತ್ವದ ಭಾರತ ಹೀಗೆ ಇತ್ಯಾದಿ ಭಾರತಗಳಿವೆ. ಯು.ಆರ್.ಅನಂತಮೂರ್ತಿ ಅವರು ಹೇಳಿರುವ 'ಮಾತು ಸೋತ ಭಾರತ' ಎಸ್.ತುಕಾರಾಮ್ ಅವರು ಹೇಳಿರುವ 'ಮಾತು ಕೇಳದ ಭಾರತ' ಕೂಡ ಇದೆ"[3] ಎನ್ನುವ ವಿಮರ್ಶಕ ಅಪ್ಪಗೆರೆ ಸೋಮಶೇಕರ್ ರವರ ಮಾತು ಸತ್ಯ.

'ಮಾತು ಕೊಂದ ಭಾರತ' ಕೃತಿ ಮಾತು ಕಳೆದುಕೊಂಡವರ, ದುಡಿಮೆಗೆ ತನ್ನ ಪ್ರತಿ–ಫಲದ ಹಕ್ಕನ್ನು ದನಿಯೇರಿಸಿ ಕೇಳಿದ ಕಾರಣಕ್ಕಾಗಿ ಅನುಭವಿಸಿದ ವಿನಾಕಾರಣ ಶೋಷಣೆ, ಶತಮಾನದ ಜೀತದ ಹಟ್ಟಿಯಲ್ಲಿ ಅಸಮಾನತೆಯ, ಹಸಿವಿನ, ಅತ್ಯಾಚಾರದ, ಅಜ್ಞಾನದ ಬಲೆ ಎಣೆದದ್ದು, ಅಕ್ಷರ–ಅನ್ನದ ಗಳಿಕೆಗೆ ಘೋರ ಹೆಬ್ಬಂಡೆಯನ್ನೆಳೆದ ಮಹಾ ದುರುಳರ ಬಗೆಗೆ ತೀವ್ರವಾದ ಕಾವ್ಯ ಪ್ರತಿಭಟನೆ ಮಾಡುತ್ತದೆ. ಪುರಾಣದಲ್ಲೂ, ಇತಿಹಾಸದಲ್ಲೂ ಮತ್ತು ವರ್ತಮಾನದ ಅಂಬೇಡ್ಕರ್ ಸಂವಿಧಾನದ ಅಂಗಳದಲ್ಲೂ ಸಾಮಾಜಿಕ ಅನಿಷ್ಟಗಳನ್ನೇ ತಮ್ಮ ದೇಹದ ಚರ್ಮ ಉಸಿರಾಗಿಸಿಕೊಂಡಿರುವವರ ವಿರುದ್ಧ ವೈಚಾರಿಕವಾಗಿ ಚಿಂತಿಸಿದ ಕಾವ್ಯನಿನಾದ 'ಮಾತು ಕೊಂದ ಭಾರತ'. ಜಗದಗಲ ಮಾನವ ಪ್ರೀತಿಯನ್ನು ಪ್ರಸರಿಸಿದ ಬುದ್ಧ, ಜಾತಿ ಗಡಿಗಳನ್ನು ಒಂದುಮಾಡಲು ಹೋಗಿ ಕ್ರಾಂತಿಯ ಉಸಿರನ್ನೇ ದೈಹಿಕವಾಗಿ ಮಾನಸಿಕವಾಗಿ ನಿಷ್ಕ್ರಿಯಗೊಳಿಸಿಕೊಂಡು ಮನುಷ್ಯ ವಿರೋಧಿಗಳಿಗೆ ಬಲಿಯಾದ ಬಸವಣ್ಣ, ಸಮಾನತೆ ಸಹೋದರತೆ ಬ್ರಾತೃತ್ವದಿಂದ ಬಾಳಿಸಲು ಹೊರಟ ಸಂವಿಧಾನ ಶಿಲ್ಪಿ ಮುಂತಾದವರು ಈ ಕೃತಿಯ ಜೀವಂತ ವಿಷಯಗಳಾಗಿದ್ದಾರೆ.

'ಅವ್ವನ ಮೊಲೆ ಹಾಲ
ಹನಿಹನಿಯಲ್ಲೂ ಸಂವಿಧಾನದ ಆಶಯ
ಸ್ವಾತಂತ್ರ್ಯ...ಸಮಾನತೆ...ಸಹೋದರತೆ..'[4]

ತುಂಬಿದೆ ಎನ್ನುವ ಮೂಲಕ ತಾಯ್ತನದ ಸಾಮಾಜಿಕ ನ್ಯಾಯವನ್ನು ಪ್ರತಿಪಾಧಿಸುವ ಕವಿ ಸಂವಿಧಾನದ ಮೌಲ್ಯವನ್ನು ಕಾವ್ಯವಾಗಿಸಿದ್ದಾರೆ. ದಲಿತ ಚಳವಳಿಯ ಧೋರಣೆಗಳನ್ನು ನೆನಪಿಸುವ ಕಾವ್ಯ ಆ ಪರಿಧಿಯನ್ನು ಇನ್ನಷ್ಟು ವಿಸ್ತರಿಸಬಹುದಾದ ಆಶಾವಾದವನ್ನು ಓದುಗರೊಳಗೆ ನಿರ್ಮಿಸುತ್ತದೆ. 'ಅವ್ವ' ಪದದ ಮೂಲಕ ಆರಂಭವಾಗುವ ಕೃತಿಯು ತಾಯ್ತನವನ್ನು ಧ್ಯಾನಿಸುತ್ತದೆ. 'ಅವ್ವನ ಎದೆಯ ಸೀಳಿ ಮಾಂಸದಲಗೆಯ ಮೇಲೆ ರಕ್ತದ ಹನಿಗಳ ತಿದ್ದಿ ಅ ಆ ಇ ಈ ಕಲಿತವನು ನಾನು', 'ಅವ್ವನ ಅರಿವು' ಇಡೀ ಸಂಕಲನದ 'ಕಾವ್ಯ ಸಂವೇದನೆ'ಯಾಗಿದ್ದು ಶೋಷಣೆ, ದೌರ್ಜನ್ಯ, ದಬ್ಬಾಳಿಕೆಯನ್ನು ಪ್ರಶ್ನಿಸುತ್ತದೆ. ಸಮಾನತೆಯ ವಿವೇಕವನ್ನು ಪ್ರತಿಪಾಧಿಸುವ ಮೂಲಕ ಇಡೀ ಜಗದ ತಾಯಿ ಬಯಸುವುದು ಇಂತಹ ಸಹಜ ಸಮಾಜವನ್ನೇ ಎಂಬುದನ್ನು ಬಯಲು ಮಾಡುತ್ತದೆ.

ಹಸಿವು ಎಲ್ಲಾ ಅಪರಾಧಗಳ ತಾಯಿ, ತಂದೆ, ಅಣ್ಣ, ತಮ್ಮ ಎಲ್ಲರೂ ಆಗುವ ಪರಿಗೆ ಅಂಬೇಡ್ಕರರು ದಮನಿತ ಲೋಕಕ್ಕೆ ನೀಡುವ ಖಡಕ್ ಸಲಹೆಯೆಂದರೆ, 'ಶೋಷಿತರ ಬಿಡುಗಡೆ ಅಕ್ಷರದಿಂದ ಮಾತ್ರ ಸಾಧ್ಯ' ಎಂಬುದು. ಅಕ್ಷರ–ಅನ್ನ–ಅರಿವು; ಸಾಮಾಜಿಕ ಸ್ಥಾನ–ಮಾನ–ಪ್ರಾಣದ ಮೂಲ ಎಂಬ ತಾತ್ವಿಕತೆಯನ್ನು ಪ್ರಮಾಣೀಕರಿಸುತ್ತಲೇ ಅವ್ವ ಹೇಳಿಕೊಟ್ಟ ಅಕ್ಷರದಿಂದಲೇ ಬದುಕನ್ನು ವಿಶ್ವಾತ್ಮಕತೆಯೆಡೆಗೆ ಕೊಂಡೊಯ್ಯಬಹುದಾದ ನೆಲೆಗೆ ಕಾವ್ಯ ಹೊರಳಿದೆ. ಅಕ್ಷರದ ಅರಿವಿನ ಹಾದಿಯಲ್ಲಿ ಅವ್ವನ ಕೈ ಹಿಡಿದು ಸಾಗುವ ಕವಿ, 'ಪರಂಜ್ಯೋತಿಯ ಬೆಳಕು' ಜಾನಪದ ಸಂತ ಮಂಟೇಸ್ವಾಮಿಯ ಅರಿವಿನ ಸಂಕೇತವೇ ಆಗಿಸಿಕೊಂಡಿದ್ದಾರೆ. ಅವ್ವನ ತಿಳುವಳಿಕೆಯ ಮೂಲಕವೇ ಬುದ್ಧ, ಪಂಪ, ಬಸವಾದಿ ಶರಣರು, ಮಂಟೇಸ್ವಾಮಿ, ಫುಲೆ, ಅಂಬೇಡ್ಕರ್ ಅವರನ್ನು ಮುಖಾಮುಖಿಯಾಗಿಸುವ ಕವಿಯ ತಾಯಿ ತನ್ನ ಕವಿತ್ವದ ಅರಿವಿಗೂ 'ತಾಯಿಯೇ' ಆಗಿದ್ದಾಳೆ. ಹಾಗೆಯೇ ಬಾಲ್ಯವನ್ನು ನೆನಪು ಮಾಡಿಕೊಳ್ಳುತ್ತಾ.. 'ನಮ್ಮ ಅಂಗಿ ಚೆಡ್ಡಿಗಳಿಗೆ ಕಿಟಕಿ ಬಾಗಿಲುಗಳೇ ಜಾಸ್ತಿ, ಅಲ್ಲಲ್ಲಿ ಸೂಜಿದಾರದ ಗುರುತುಗಳು, ಒಂದೊಂದು ಬಾರಿ ಐನೋರ ಹಟ್ಟಿಯ ಬಲು ನಾಜೂಕಿನ ಪ್ಯಾಂಟು ತೊಡೆಗೇರುತ್ತಿತ್ತು', 'ನನ್ನವ್ವ ನಡುರಾತ್ರಿಯಲೆದ್ದು ಕನವರಿಸುತ್ತಾಳೆ' ಎನ್ನುವ ಎಲ್ಲ ದಮನಿತ ತಾಯಿಯ ಸಹಜ ಆಲಾಪದ ಅಭಿವ್ಯಕ್ತಿಯನ್ನು ನೆನಪಿಸುತ್ತದೆ. ನನ್ನಪ್ಪನ ಬೆತ್ತಲೆ ದೇಹದ ಬಿರುಕು ಬಿಟ್ಟ ಸುಟ್ಟಗಾಯಗಳಿಗೆ ಮೆತ್ತಗೆ ಮುಲಾಮು ಅವ್ವ ಬಳಿಯುತ್ತಾಳೆ', ಸಾಗರದಷ್ಟು ಹಸಿವು, ಅವಮಾನ ಹಿಂಸೆ ಅನುಭವಿಸುತ್ತಾ; ಕಣ್ಣೆದುರೇ ತಮ್ಮವರಲ್ಲೂ ಅದನ್ನೇ ಕಾಣುತ್ತಾ ಅವ್ವ ಗುಡಿಸಲ ಹಣತೆಯ ಹಚ್ಚುತ್ತಾಳೆ, ಅದೇ ಬೆಳಕಲ್ಲಿ ಬುದ್ಧ, ಪಂಪ, ಬಸವಣ್ಣ, ಪುರಂದರ, ಕನಕ, ಪೆರಿಯಾರ, ಕುವೆಂಪುರವರನ್ನು ಕಾಣುತ್ತಾಳೆ. ಮಾನವೀಯತೆಯನ್ನು ಮೈಗೂಡಿಸಿಕೊಳ್ಳುತ್ತಾ ಎಲ್ಲೋ ಇರುವ ಎಂದೋ ಸಿಗುವ ಮನುಷ್ಯತ್ವವನ್ನು ಹುಡುಕ ಬಯಸುತ್ತಾಳೆ ಎನ್ನುವ ಸಾಲು ಇಡೀ ಭಾರತದ ದಮನಿತರ ರಕ್ತರಹಿತ ಕ್ರಾಂತಿಯ ಮನಸಿನ ಹೃದಯವಿಷಾಲತೆಯನ್ನು ಕಾವ್ಯ ಸಾಕ್ಷೀಕರಿಸುತ್ತದೆ. ವರ್ತಮಾನದ ಸಮಾಜ ಹಸನಾಗಬೇಕಾದರೆ ಕಾವ್ಯದ ಹಂಬಲ ಬದುಕಿನ, ವ್ಯಕ್ತಿತ್ವದ ನಡೆಯಾಗಬೇಕಿದೆ. ಈ ಎಲ್ಲೋ ಇರುವುದನ್ನು ಕಾಯುವ ತಾಳ್ಮೆ 'ಅಂದಿನಿಂದಲೂ ಅನುಭವಿಸುತ್ತಿರುವವರಿಗೆ ಇರದೆ ಹೋಗಿದ್ದರೆ?! ವಾಹ್ ಎಂಥ ಘೋರ ರಕ್ತ ಕ್ರಾಂತಿ ಸಂಭವಿಸಿಬಿಡುತ್ತಿತ್ತು. ಅದಕ್ಕೆ ಸಿದ್ಧಲಿಂಗಯ್ಯನವರು 'ಭಕ್ತರಪ್ಪೋ ಭಕ್ತರು ನನ್ನ ಜನಗಳು' ಎಂದದ್ದು.

ನನ್ನವ್ವ ನನ್ನೆದೆಯ ಮುಟ್ಟಿ-ತಟ್ಟಿ ಹೇಳುತ್ತಾಳೆ; 'ಕಂದ-ಕಂದ ಸ್ವಾಭಿಮಾನಿಯಾಗು', 'ಅಂಬೇಡ್ಕರರಂತೆ ನೀನಾಗು', 'ಈ ದೇಶ ಆಳುವ ದೊರೆಯಾಗು' ಎನ್ನುವ ಕವಿಸಾಲು ಶೋಷಿತ ಸಮುದಾಯಗಳಿಗೆ ಚರಿತ್ರೆಯ ಪಾಠ ಹೇಳಿದ ಅಂಬೇಡ್ಕರ್ ಪ್ರಜ್ಞೆ ಇಲ್ಲಿನ ಪ್ರೀತಿಪದಗಳಲ್ಲಿ ಮತ್ತೆಮತ್ತೆ ಜೀವ ಪಡೆಯುತ್ತವೆ.

ಕವಿ ಕಾವ್ಯದಲ್ಲಿ ಕಟ್ಟಿಕೊಡುವ 'ಅವ್ವ' ತಲತಲಾಂತರದ ಶೋಷಿತ ಸಮುದಾಯಗಳ ಸಂಕೇತವಾಗಿದ್ದಾಳೆ. ದ್ರಾವಿಡ ಪರಂಪರೆಯ ಮಾತೃ ನೆಲೆಯಾಗಿದ್ದಾಳೆ. ಪಿ.ಲಂಕೇಶ್, ಎಲ್.ಹನುಂತಯ್ಯ, ಎನ್.ಕೆ. ಹನುಮಂತಯ್ಯ, ಸಿದ್ಧಲಿಂಗಯ್ಯ ಅವರು ಬರೆದಿರುವ ಅವ್ವನನ್ನ ಕುರಿತ ಕವಿತೆಗಳ ಆಳದ ಸಂವೇದನೆಯ ಮುಂದುವರಿಕೆಯಾಗಿರುವ ಇಲ್ಲಿನ ಅವ್ವನಿಗೆ ಸಂಬಂಧಿಸಿದ ಕವಿತೆಗಳು ಹಿಂದುತ್ವವಾದಿ ಪುರಾಣಮೂಲ ಅಸಮಾನತೆಯನ್ನು ಪ್ರತಿರೋಧಿಸುತ್ತವೆ. ಈ ಕವಿತೆಗಳಲ್ಲಿನ ಅವ್ವ ಪರಂಪರೆಯ ಅನುಭವದ ಪಾಠ ಹೇಳುವ, ಪ್ರಶ್ನಿಸುವ, ಬಂಡೇಳುವ ಜೊತೆಗೆ ಪರಿಹಾರವಾಗಿ ಸಮಾನತೆಯ ದಾರಿ ತೋರುವ, ಸ್ವಾಭಿಮಾನದ ಬಯಲ ಬೆಳಕಾಗಿ ಆಧುನಿಕೋತ್ತರದ ಕನ್ನಡ ಕಾವ್ಯಗಳಲ್ಲಿ ದೊಡ್ಡ ಪ್ರಭಾವಳಿಯಾಗಿ ಮೂಡಿದೆ.

'ಎದೆಯೊಳಗೆ
ಎರಡು ಅಕ್ಷರದ ಗಂಧವಿಲ್ಲ
ಭಗವದ್ಗೀತೆ ಓದಲಿಲ್ಲ
ವೇದಗಳ ಗುರುತಿಲ್ಲ
ಆದರೂ ಬೋಧಿಸುತ್ತಾಳೆ'[5]

'ಹೊಲ, ಕೆರೆ, ಹಳ್ಳ, ಕೊಳ್ಳ, ದನಕರು, ಸೂರ್ಯ-ಚಂದ್ರ, ಕಲ್ಲುಮಣ್ಣು, ಧೂಳು, ಊರುಕೇರಿ ಸುತ್ತಿ ಮಾನವೀಯತೆಯನ್ನು ಕಲಿತಿದ್ದಾಳೆ' ಎನ್ನುವ ಮೂಲಕ, ಕೂಲಿ ಹೆಣ್ಣುಗಳ ವೇದನೆಯನ್ನು ಹೇಳುತ್ತಲೇ, "ವೇದ ಶಾಸ್ತ್ರ ಆಗಮಾದಿಗಳೆಲ್ಲಾ ಕೊಟ್ಟಣವ ಕುಟ್ಟುತ್ತಾ ನುಚ್ಚು ತೌಡು ಕಾಣಿಬೋ" ಎಂದು ಹೇಳಿದ ಅಕ್ಕಮಾಹಾದೇವಿಯ ಪುರಾಣ ವಿರೋಧಿ ಬಂಡಾಯವನ್ನು ಈ ಕವಿತೆಯ ಸಾಲುಗಳು ಮರು ನೆನಪಿಸುತ್ತವೆ. ನೆಲ ಮೂಲ ಜ್ಞಾನದೊಂದಿಗೆ ಸಹಜವಾಗಿ ಬದುಕುವ ಕಪಟತೆ ಅರಿಯದ ಸಾಚಾತನ ಇರುವುದು ಮಣ್ಣಿನ ಮಕ್ಕಳಲ್ಲೇ ಎನ್ನುವುದನ್ನು ಇವರ ಕಾಯಕ ತತ್ತ್ವವನ್ನು, ಸ್ವಾಭಿಮಾನ ಹಾಗೂ ಸ್ವಾವಲಂಭನೆಯ ಮೌಲ್ಯವನ್ನು ಕವಿತೆ ಅನುಭವಾತ್ಮಕ ನೆಲೆಯಲ್ಲಿ ಪರಿಭಾವಿತ್ತದೆ. ಇಲ್ಲಿನ ಕವಿತೆಯ ಅವ್ವ ಚರಿತ್ರೆಯಲ್ಲಿ ಈಗಾಗಲೇ ಖಳನಾಯಕರಾಗಿ ಬಿಂಬಿಸಲ್ಪಟ್ಟಿರುವ ಮಹಿಷಾಸುರ, ಬಲಿಚಕ್ರವರ್ತಿ, ನರಕಾಸುರರ ನಿಜ ವ್ಯಕ್ತಿಗಳನ್ನು ಸಂಶೋಧಿಸಬೇಕಾಗಿರುವ ಚಾರಿತ್ರಿಕ ಅನಿವಾರ್ಯತೆಯನ್ನು ಸಹ ಕವಿ ಒತ್ತಿ ಹೇಳಿದ್ದಾರೆ.

'...ಈ ಭೂಮಿಯನ್ನು ಹೆತ್ತವರು
ನನ್ನ ರಕ್ತದ ಆದಿಜನ'[6]

‘ಚರಿತ್ರೆಯ ಗರ್ಭಸೀಳಿ ನನ್ನ ಜನರ ಕತೆ ತೆಗೆದಿದ್ದೇನೆ. ಸ್ವಾಭಿಮಾನದ ಬತ್ತಿ ಹೊಸೆದು ಸಮಾನತೆಯ ಎಣ್ಣೆ ಸುರಿದು ನೂರು ಹಣತೆಯ ಹಿಡಿದು ಊರ ಗುಡಿಸುತ್ತೇನೆ, ಯಾರೂ ತಡೆಯಲಾಗದು ನನ್ನ’ ಎನ್ನುವ ಕವಿಸಾಲು ಎಂದಾದರು ಒಂದು ದಿನ ಶತಮಾನಗಳ ದಾವಾಗ್ನಿಯನ್ನು ತಣಿಸುವ ಸಾಮಾಜಿಕ ನ್ಯಾಯದ ತಂಪು ನಮ್ಮವರಿಂದಲೇ ಆಗುತ್ತದೆ ಎಂಬ ಭರವಸೆ ಮೂಡಿಸುತ್ತದೆ. ಏಕೆಂದರೆ ಈ ಭೂಮಿಯನ್ನು ಹೆತ್ತವರು ನನ್ನ ರಕ್ತದ ಆದಿಜನ, ಅದಕ್ಕೆ ನಾವು ಕೆರಳದೆ ಸಾಮಾಜಿಕ ನ್ಯಾಯಕ್ಕಾಗಿ ಕಾಯುತ್ತಿರುವುದು, ಅದಕ್ಕೇ ಬುದ್ಧ, ಬಸವ ಮತ್ತು ಅಂಬೇಡ್ಕರರನ್ನು ಸದಾ ಜೀವಂತವಾಗಿಡುತ್ತಿರುವುದು ಎನ್ನುವ ಆಶಯದ ಮೂಲಕ ಚರಿತ್ರೆಯಲ್ಲಿ ತಮ್ಮ ತನದ ವಿಷಯ ವಿಶೇಷತೆಯನ್ನು ಆಧುನಿಕೋತ್ತರ ಕನ್ನಡ ಕವಿಗಳು ಕಾವ್ಯದ ಮೂಲಕ ಹೊಸ ಚರಿತ್ರೆಗೆ ಮುನ್ನುಡಿ ಬರೆಯುತ್ತಿದ್ದಾರೆ.

ಕರುಳಿನ ಮಾತನ್ನು ಕತೆಯಾಗಿಸುವ ಮೂಲಕ, ದಲಿತ ಸಾಹಿತ್ಯ ಲೋಕದಲ್ಲಿ ತಲ್ಲಣವನ್ನುಂಟುಮಾಡಿದ ‘ಉಚಲ್ಯಾ’ ಆತ್ಮ ಕಥನ, ಜನಮಾನಸ ಮೆಚ್ಚಿದ ‘ಕಳ್ಳುಬಳ್ಳಿ’, ಮೊಗಳ್ಳಿ ಗಣೇಶರ ‘ನನ್ನಜ್ಜನಗೊಂದು ಆಸೆಯಿತ್ತು’, ಸಿದ್ಧಲಿಂಗಯ್ಯರ ‘ಊರುಕೇರಿ’, ಮತ್ತು ಗೋವಿಂದಯ್ಯರ ‘ಅ ಆ ಮತ್ತು ನಾನು’ ಕೃತಿಗಳು ಆಧುನಿಕೋತ್ತರ ಕವಿ-ಬರಹಗಾರರಿಗೆ ಮಾದರಿಯಾಗಿವೆ. ಕವಿ ತಮ್ಮ ಬದುಕನ್ನು ಬಯಲಾಗಿಸುವ ಮೂಲಕ ಜಗದ ಸಂಕಟಗಳನ್ನು, ಅಸಮಾನ ಸಮಾಜದ, ಅಧರ್ಮಿಗಳ ಪುರುಷಾರ್ಥವನ್ನು ಕುರಿತು ‘ನೀವು ಇದರಲ್ಲಿ ಎಷ್ಟು ಪಾಲುದಾರರು’ ಎಂದು ಪ್ರಶ್ನಿಸುವ ಭಾವದ ಹಿಂದೆ ಇಡೀ ದೇಶದ ದಮನಿತರ ನಿಟ್ಟುಸಿರಿದೆ.

ಕ್ರಾಂತಿ ಕವಿ ಬಂಜಗೆರೆ ಜಯಪ್ರಕಾಶ್‌ರವರು ಕವಿ ಸುರೇಶ್‌ರನ್ನು ಕುರಿತು ಹೇಳುವಂತೆ “ಕವಿಯಾಗಿ ಅದಕ್ಕೂ ಮೊದಲು ಚಿಂತನಾಶೀಲ ತರುಣರ ಸಾಲಿನಲ್ಲಿ ಒಬ್ಬರಾಗಿರುವ ಗೌತಮ್ ಯಾವುದೇ ತಲೆಮಾರಿನ ಯುವಕರಲ್ಲೂ ತಿಂದುಂಡು ತಿರುಗುವ ‘ಜಾಣ’ರದ್ದೇ ಬಹುಸಂಖ್ಯೆ. ಕೆಲವೇ ಕೆಲವರು ಮಾತ್ರ ಸಮಾಜವನ್ನು, ಸಮುದಾಯವನ್ನು ಅವುಗಳಿಗೆ ಅಗತ್ಯವಾಗಿ ಬೇಕಿರುವ ಸಮಾನತೆ ಮತ್ತು ಸ್ವಾಭಿಮಾನದ ಇಲಾಜು ಮಾಡಿಸಬೇಕೆಂಬ ಹಾದಿಯಲ್ಲಿ ನಡೆಯುತ್ತಾರೆ. ಅವರಿಗೆ ಸ್ವಂತದ್ದಷ್ಟೇ ಮುಖ್ಯವಲ್ಲ, ನೆರೆಮನೆಗೆ ಬೆಂಕಿ ಬಿದ್ದಿರುವಾಗ ನಿನ್ನ ಮನೆಯಲ್ಲಿ ನೀನು ಸುಖವಾಗಿರಬಲ್ಲೆ ಎಂದುಕೊಳ್ಳುವುದು ಎಷ್ಟು ಅಪಾಯಕಾರಿ ಭ್ರಮೆ ಎಂಬುದನ್ನು ಅರಿತು, ಆ ಅರಿವಿನ ಬೆಳಕನ್ನು ಬರವಣಿಗೆಯಲ್ಲಿ, ಮಾತುಗಳಲ್ಲಿ, ಕ್ರಿಯೆಯಲ್ಲಿ ವ್ಯಕ್ತಗೊಳಿಸುತ್ತಾ ತಿರುಗುವ ಕಾರಣಕ್ಕೆ ಸುರೇಶನೊಳಗೆ ಮೊಳೆಯುತ್ತಿರುವ ಗೌತಮ ಪ್ರಜ್ಞೆಗೆ ನಾನು ಅಭಿನಂದಿಸುತ್ತೇನೆ. ಅಕ್ಷರಕ್ಷರಗಳ ಗೆರೆಗಳ ಮೇಲೂ ಮಂಟೆಸ್ವಾಮಿ ಮಾದಪ್ಪ ಜುಂಜಪ್ಪ ದೊಡ್ಡಮ್ಮ ಸಂಕೆಣ್ಣೆ ಕಾಟಮಲ್ಲರು...ಕಂಡಾಯ ಹಿಡಿದು ನಲಿಯುತ್ತಿದ್ದಾರೆ ಎಂಬುದು ಸುರೇಶಗೌತಮ್ ಕಾವ್ಯದ ಕನಸು. ಅವರ ಅಕ್ಷರಗಳಲ್ಲಿ, ಬದುಕಲ್ಲಿ ನಮ್ಮ ಪೂರ್ವಿಕ ಹಿರೀಕರು ನಡೆಸಿದ ಸಂಘರ್ಷ, ನೀಡಿ ಹೋದ ಸಂದೇಶ ನಲಿದು ನಾಟ್ಯವಾಡುತ್ತಾ ಎಲ್ಲರ ಮನಗೆದ್ದು ನಿಜದ ಕಂಡಾಯ ಊರಲಿ”[7]

ಎನ್ನುವ ಬಂಜಗೆರೆ ಅವರ ಮಾತನ್ನು ಪುಷ್ಟೀಕರಿಸುತ್ತಾ ಗೌತಮ್ ನಾಡಿನ ಒಬ್ಬ ಸಂವೇದನಾ ಶೀಲ ಚಿಂತಕರಾಗುತ್ತಿರುವ ಎಲ್ಲಾ ಬಗೆಯ ಸೂಚನೆಯನ್ನು ಈ ಆಧುನಿಕೋತ್ತರ ಕನ್ನಡ ಕಾವ್ಯ ಘಟ್ಟದಲ್ಲಿ ಮುಖ್ಯವಾಗಿ ದಮನಿತರ ದನಿಯಾಗಿ ಹೊರಹೊಮ್ಮಿದ್ದಾರೆ. ಒಟ್ಟಾರೆ ಸುರೇಶ್ ಭಾರತದ ವೈಚಾರಿಕ ಪರಂಪರೆಯ ಸಂಘರ್ಷಾತ್ಮಕ ನೆಲೆಗಳನ್ನು ಓದುಗರ ಅರಿವಿಗೆ ತರುವ ಮೂಲಕ, ತಾತ್ವಿಕ ಜಿಜ್ಞಾಸೆಯನ್ನು ಹುಟ್ಟುಹಾಕುತ್ತಾರೆ. ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳು ಅನಾಥವಾಗಿ ಅರ್ಥ ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಸುರೇಶರ ಆಧುನಿಕೋತ್ತರ ಕವಿತನ ಹೀಗೆ ಪ್ರತಿಕ್ರಿಯಿಸುತ್ತಿರುವುದು ಸರಿಯೆನಿಸುತ್ತದೆ.

ಆ. ಲಕ್ಕೂರು ಆನಂದರ ಕಾವ್ಯದೊಳಗಿನ ಮಾನವತ್ವ

ಆಧುನಿಕೋತ್ತರ ಕನ್ನಡ ಕಾವ್ಯಕ್ಕೆ ಎಪ್ಪತ್ತರ ದಶಕಕ್ಕಿಂತಲೂ ವಿಭಿನ್ನವಾದ ದಟ್ಟವಾದ ಸಮಸ್ಯೆಗಳು ಎದುರಾಗಿದ್ದು, ಅದನ್ನು ಲಕ್ಕೂರು ಆನಂದ ತಮ್ಮ ಕಾವ್ಯನೆಲೆಗಳ ಮೂಲಕ ನೋಡುತ್ತಿದ್ದಾರೆ. ಈಗ ಮುಖ್ಯವಾಗಿ ಎತ್ತಬೇಕಾದ ಸಮಸ್ಯೆಯೆಂದರೆ; ಆಧುನಿಕತೆ, ಜಾಗತೀಕರಣ ಮತ್ತು ಶಿಕ್ಷಣ. ಹೊಸ ತಲೆಮಾರಿನ ಬರಹಗಾರರ ಸಮಸ್ಯೆ ಎಂದರೆ ತಮ್ಮ ಇತಿಹಾಸದ ಬಗೆಗೆ ಹೆಚ್ಚು ಓದಿಕೊಳ್ಳುವ ಮೂಲಕ ಹೆಚ್ಚು ಅರಿವು ಪಡೆದುಕೊಳ್ಳದೆ ಇರುವುದು. ಹಿಂದಿನವರು ಬರೆಯದೆ ಇರುವುದರ ಬಗ್ಗೆ ಬರೆಯಬೇಕಾಗುತ್ತದೆ. ಪೂರ್ವಿಕರುಗಳ ಬಗೆಗಿನ ದಕ್ಕುವಿಕೆ ಹೆಚ್ಚಾಗುವ ನಿಟ್ಟಿನಲ್ಲಿ ಹೆಚ್ಚಿನ ಓದು ಅನಿವಾರ್ಯ. ಸಾಮಾನ್ಯರ ಅಗತ್ಯಗಳನ್ನು ಸಹಜವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲು ಸಿದ್ಧಸಾಹಿತ್ಯದ ಅರಿವು ಅಗತ್ಯವಿಲ್ಲ. ಆದರೂ, ಹಿಂದಿನ ಕಾವ್ಯಮೀಮಾಂಸೆ ಹೇಳುವ ನವರಸ ಧ್ವನಿಯನ್ನು ಮೀರಿಕೊಂಡು ಸಹ ಗಟ್ಟಿಯಾಗಿ ಬರೆಯಲು ಇಂದು ಸಾಧ್ಯವಾಗಿದೆ. 'ಸಾಮಾನ್ಯ ಓದು ಇಲ್ಲದೆಯೂ; ಮಹಾಕಾವ್ಯದ ಬಗೆಗಿನ ಅರಿವು ಇಲ್ಲದೆಯೂ ವಿಶೇಷವಾದುದನ್ನು ಬರೆಯಲು ಸಾಧ್ಯ' ಎಂದು ಲಕ್ಕೂರು ಆನಂದ ತಮ್ಮ ಕಾವ್ಯದಲ್ಲಿ ಬಿಂಬಿಸುತ್ತಾರೆ. ಮತ್ತೊಂದೆಡೆ ಹಿಂದಿನವರು ಬರೆದಿದ್ದನ್ನೇ ಬರೆಯುವುದರಿಂದ ಹೊಸದನ್ನು ಬಯಸುವವರಿಗೆ 'ತಂಗಳನ್ನು ಬಿಸಿ ಮಾಡಿಕೊಂಡು ಉಂಡಂತೆನಿಸುತ್ತದೆ' ಎಂದು ಅಭಿಪ್ರಾಯ ಪಡುತ್ತಾರೆ. ಹಿಂದಿನವರ ಬದುಕಿನ ಬಗೆಗೆ ಬರೆದ ಬರಹದ ಅರಿವು ಇದ್ದರೆ ಹೊಸದನ್ನು ವಿಷಧೀಕರಿಸಲು ಸುಲಭ ಎಂಬ ಲಕ್ಕೂರರ ಸಾಂದರ್ಭಿಕವೂ; ಔಚಿತ್ಯವೂ ಆದ ದಲಿತ ಕಾವ್ಯದ ಬಗೆಗಿನ ಅವರ ಆಶಯವನ್ನು ಆಧುನಿಕೋತ್ತರ ಕಾಲದ ಕಾವ್ಯ ಒಪ್ಪುತ್ತದೆ.

ದಲಿತೇತರರೂ, ಅಲ್ಪಸಂಖ್ಯಾತರೂ ಕೂಡ ಇಂದು ದಲಿತರ ಬಗೆಗೆ ಬರೆಯುತ್ತಿರುವುದನ್ನು ಸ್ವಾಗತಿಸಬಹುದಾದರೂ, ಅವರಿಗೆ ದಮನಿತರ ನೋವಿನ ಅನುಭವದ ಕೊರತೆಯಿದೆ. ಹಸಿವಿನ ಅರಿವಿರಬಹುದು ಆದರೆ ಅವಮಾನದ ಅರಿವು ದಮನಿತರಿಗೆ ಗೊತ್ತಿರುವಷ್ಟು ಈ ಮುಟ್ಟಿಸಿಕೊಳ್ಳುವವರಿಗೆ ಅವಮಾನದ ರುಚಿ ಗೊತ್ತಿರುವುದಿಲ್ಲ. ಈಗೆಂದಾಕ್ಷಣ ದಲಿತರ ಬಗೆಗೆ ದಲಿತೇತರರು ಮಾತನಾಡಬಾರದು ಎಂದಲ್ಲ, ಪ್ರಾಮಾಣಿಕವಾಗಿ ಮಾತನಾಡುವವರು ನಮ್ಮ ನಡುವೆ ಸಾಕಷ್ಟು ಕೆಲಸಗಳನ್ನು ಮಾಡುತ್ತಿರುವುದರ ಬಗೆಗೆ ಜನಾಂಗದ ಪ್ರೀತಿಯಿದೆ. ಶತಮಾನದ ಕುದಿಗೆ

ಕೊಂಚ ನಿಟ್ಟುಸಿರಿದೆ. ಈ ಹಿನ್ನೆಲೆಯಲ್ಲಿ ಲಕ್ಷ್ಮೀಪತಿ, ಎಲ್.ಎನ್.ಮುಕುಂದರಾಜ್, ತಾರಾನಾಥ್, ಬಂಜಗೆರೆ ಜಯಪ್ರಕಾಶ್ ಮುಂತಾದವರ ದಲಿತ ಕಾಳಜಿಯನ್ನು ಧಾರಾಳವಾಗಿ ಸ್ವೀಕರಿಸಬೇಕಾಗಿದೆ.

ಲಕ್ಕೂರು ಆಧುನಿಕೋತ್ತರ ಕನ್ನಡ ಕವಿಯಾಗಿ 'ಊರಿಂದ ಊರಿಗೆ' ಕವನ ಸಂಕಲನದಲ್ಲಿ ತನ್ನ ಊರುಕೇರಿ ಬಗೆಗೆ, 'ಇಪ್ಪತ್ತೆರಡರ ಕಲ್ಲಿನ ಮೇಲೆ' ಕೃತಿ ಬದುಕಿನ ಬಗೆಗೆ, 'ಬಟವಾಡೆಯಾಗದ ರಸೀತಿ' ಕೃತಿ ಪ್ರೇಮದ ಬಗೆಯೂ, 'ಇತಿ ನಿನ್ನ ವಿಧೇಯನು' ಕೃತಿ ಮಾನವಿಕ ಸಂಬಂಧಗಳ ಬಗೆಗೂ ಮತ್ತು 'ಉರಿವ ಏಕಾಂತ ದೀಪ' ಕೃತಿಯು ಭವಿಷ್ಯತ್ತಿನ ಮತ್ತು ಪ್ರಸ್ತುತ ಸಂದಿಗ್ಧ ಪರಿಸ್ಥಿಗಳ ಬಗೆಗೆ ಸೂಕ್ಷ್ಮ ನೋಟವನ್ನು ಬೀರುತ್ತವೆ. ಆ ಮೂಲಕ ಒಂದು ಹೆಜ್ಜೆ ಮುಂದೆ ಹೋಗಿ ಭವಿಷ್ಯತ್ತಿನ ಬಗೆಗೆ ದಿಗಿಲುಗೊಂಡು ಪರಿಹಾರವನ್ನು ಹುಡುಕುವ; ಆಧುನಿಕೋತ್ತರ ಕನ್ನಡ ಕಾವ್ಯ ಪ್ರೀತಿಯ ಹೊಸ ಹುಡುಕಾಟದೊಂದಿಗೆ ಸಮಾಜವನ್ನು ಕುರಿತು ವ್ಯಾಖ್ಯಾನಿಸುವ ರೀತಿ ವಿಶೇಷವಾಗಿದೆ. ಅದನ್ನು ಅವರ **'ಇತಿ ನಿನ್ನ ವಿಧೇಯನು'** (2010) ಕೃತಿಯ ಮೂಲಕ ನೋಡುವುದಾದರೆ:

**'ತುಟಿಯೊಡೆದ ಮಾತಿನಲ್ಲಿ
ಕತ್ತಲಿನ ಬದುಕಿನಲ್ಲಿ
ದೀಪದುರಿಯ ಎದುರಿನಲ್ಲಿ
ಬಂದೂಕಿನ ಬಾಯಲ್ಲಿ
ನನ್ನ ಕವನ ಹುಟ್ಟುವುದು'**[8]

ಎನ್ನುವ ಸಾಲು: ಬಂದೂಕಿನ ತೂಬಿನಲ್ಲಿ ಗುಬ್ಬಿ ಗೂಡು ಕಟ್ಟುವ ಮುಗ್ಧತೆಯಂತಹ ದಮನಿತ ಶೋಷಿತರು ಊರ ಹೊರಗಿನ ಮಣ್ಣಿನ ಕಲ್ಲಿನ ದೇವರ ಮೂರ್ತಿಗಳ ಸಂಕೇತವೇ ಆಗಿದ್ದಾರೆ. ಅಲ್ಲಿ ಮಾತ್ರ ನಿಜ ಮಾನವತ್ವದ ಪ್ರೀತಿಯ ಒರತೆ ಹುಟ್ಟಲು ಸಾಧ್ಯ. ಅಲ್ಲಿಂದಲೇ ಸಿರಿವಂತರ ಸೂಚಕವಾದ ಚಿನ್ನದ, ಬೆಳ್ಳಿಯ ದೇವರ ಮೂರ್ತಿಗಳ ತಳುಕಿನ ಕ್ರೌರ್ಯದ ಬಗೆಗೆ, ಅಸಮಾನತೆಯ ಬಗೆಗೆ, ಸಹಜ ಮಣ್ಣಿನ ಪಾಳು ಗುಡಿಯಿಂದಲೇ ನೆಲ ಮುಟ್ಟುವ ಪ್ರೀತಿಯ ಮಹಾಮಾನವತ್ವದ ಕಾವ್ಯ ಸೃಜಿಸುತ್ತೇನೆ, ಅದಕ್ಕಿಂತ ಸಹಜ ಸುಂದರ ಜೀವನದ ಗುರಿ ಮತ್ತೊಂದಿರಲಾರದು ಎನ್ನುವ ಆಧುನಿಕೋತ್ತರ ಕವಿಯ ಹಂಬಲ ವರ್ತಮಾನದ ಸ್ವಾಗತಾರ್ಹ ವಿಚಾರವೇ ಆಗಿದೆ. 'ತುಟಿ ಸರಿದ ಮಾತು ಹೊರಗೆಲ್ಲೋ ಅಲೆದಾಡುತ್ತಿರುವಾಗ ಬೋಳು ಮರದ ತುಂಬ ಮಾತು ಚಿಗುರೊಡೆಯುತ್ತಿರುವುದು. ತನ್ನದೇನೂ ತಪ್ಪಿಲ್ಲದಿದ್ದರೂ ವ್ಯಕ್ತಿತ್ವವನ್ನೇ ಬಲಿಕೊಡಬೇಕಾದ ದುರಂತದ ಸನ್ನಿವೇಶವನ್ನು ಅದೆಷ್ಟೋ ಜನರ ಬದುಕಿನಲ್ಲಿ ಹಠಾತ್ತಾಗಿ ಬಂದು ಬಿಡುತ್ತದೆ. ಅದನ್ನು ನಿರೀಕ್ಷಿಸದ ಮುಗ್ಧ ಹಾಗೂ ದುರ್ಬಲವಾಗಿಬಿಡುವ ಮನಸು ಬದುಕಿನ ಎಲ್ಲಾ ದಾರಿಗಳು ಮುಚ್ಚಿಹೋಯ್ತೆಂದು ಜೀವವನ್ನು ಕೊನೆಗಾಣಿಸುವ ಹೊತ್ತಿಗೆ ತಂಗಾಳಿಯ ಒಂದು ಸಣ್ಣ ಹೋಯ್ದಾಟವೂ ಅದೆಷ್ಟೋ ಜನರ ಬದುಕಿನಲ್ಲಿ ಬದುಕಿನ ಬಗೆಗೆ ಮತ್ತೆ ಭರವಸೆಗಳನ್ನು ಮೂಡಿಸುತ್ತದೆ. ಇದು ಪ್ರಕೃತಿಯು ಜಗತ್ತಿನ ಚರಾಚರ ವಸ್ತು, ವ್ಯಕ್ತಿಗಳ ಮೇಲೆ ಚೂರೂ ವಂಚನೆ ಮಾಡದೆ ಅನಂತವಾಗಿ ನೀಡುವ ಜೀವತತ್ವದ ರಸಸಿಂಚನವೆಂಬುದನ್ನು ಕವಿ ಕಾವ್ಯವಾಗಿಸಿ ಹೇಳಿದ್ದಾರೆ. ಮನುಷ್ಯ ಮನುಷ್ಯನನ್ನು ಎಷ್ಟೇ ವಿಕಾರವಾಗಿ ವಂಚಿಸಿದರೂ ಪ್ರಕೃತಿ ಮಾತ್ರ ಎಲ್ಲಾ ದಿಕ್ಕಿನಿಂದಲೂ ಮನುಷ್ಯನ ಆ ವಂಚನೆಯ ಭಾಗವನ್ನು ತುಂಬಿಸುತ್ತಲೇ ಸಾಗಿ ಬಂದಿದೆ. ಎಷ್ಟೋ ವೇಳೆ ನಿರ್ಜೀವ ವಸ್ತುಗಳೂ ಕೂಡ ಜೀವ ತುಂಬಿದಂತೆ ಕಾಣುವ ನಿರ್ಜೀವ ಮನುಷ್ಯರಿಗೆ ಬದುಕಿನ ಪಾಠ ಕಲಿಸುತ್ತದೆ.

'ತಾವರೆ ಹೂವಿನ ಮೇಲೆ
ನೆನ್ನೆ ಸುರಿದುಕೊಂಡ ನೀರು ನಿಲ್ಲುವುದೇ?
ಯಾವ ಋಣದ ಲೆಕ್ಕವಿಲ್ಲದೆ ನೀನು ಬಿಚ್ಚಿಟ್ಟ
ಹೆಬ್ಬೆರಳ ಜೀವನ ನವಿಲು ಕುಣಿಯುವುದು'[9]

ಮಹಾಭಾರತದ ದ್ರೋಣಾಚಾರ್ಯ ಜಗದ ದೃಷ್ಟಿಯಲ್ಲಿ ದುಷ್ಟ! ಆದರೆ, ಕವಿ ಆತನ ಅಂತರಂಗದ ಮನುಷ್ಯನ ಸಹಜ ಪ್ರೇಮದಿಂದ ಕಾಡುಹುಡುಗನ ಬಿಲ್ವಿದ್ಯೆಯ ಒಲವಿನ ಅಗಾಧತೆಯನ್ನು ಪ್ರೀತಿಯ ಕಣ್ಣುಗಳಲ್ಲಿ ನೋಡುತ್ತಲೇ ತಮ್ಮ ಅಸಹಾಯಕತೆಗಾಗಿ ಮರುಗುತ್ತಾರೆ. ನಿಯಮ ಮೀರಲಾಗದುದರ ರಾಜಾಜ್ಞೆಯ ಹಿಂದಿನ ಹಿಂಸೆಯನ್ನು, ಅದರ ಬಗೆಗೆ ಎದೆಯಲ್ಲಿನ ಕಿಚ್ಚಿನ ಉರಿಯನ್ನು, ಅರಮನೆಯ ಗುರುವಿನ ಮನಸು ನಿತ್ಯ ಸೆರೆಯಾಗಿ ಅಸಹಾಯಕತೆಯನ್ನು, ಕವಿ ಮುಗ್ಧತೆಯ ನವಿಲು ತನ್ನ ನರ್ತನದಲ್ಲಿ ನೋವನ್ನು ನುಂಗುವ ಪರಿಯೆಂಬಂತೆ ಎಂದು ಕವಿ ವಿಶ್ಲೇಷಿಸುತ್ತಾರೆ. ಹಾಗೆಯೇ ಜಗದ ಅಸಮಾನತೆಯನ್ನು ತೊಲಗಿಸಲು ಹೋರಾಡಿದ ಬುದ್ಧ, ಬಸವ, ವಿವೇಕ, ಪುಲೆ, ಪೆರಿಯಾರ್ ಮತ್ತು ಅಂಬೇಡ್ಕರ್‌ರಂತಹ ಅದೆಷ್ಟೋ ಅಸಹಾಯಕತೆಗೆ ಒಳಗಾದ ಮಾನವತಾವಾದಿಗಳು ಈ ವಿಶ್ಲೇಷಣೆಯೊಳಗೆ ಬಂದು ನಿಲ್ಲುತ್ತಾರೆ. ನೆನ್ನೆಯ ಕತ್ತಲು ಹರಿದರೆ ಬೆಳಕು ಬಿರಿವ ಹಾಗೆ ಭೂತದ ಕರಾಳ ದುಃಖದಿಂದ ಹೊರಳಿದರೆ ಮತ್ತೆ ಆಶಾವಾದದ ಕನಸು ನನಸಾಗುವ ವರ್ತಮಾನ ಕಾಲವನ್ನು ನಿಜವಾಗಿ ಕಾಣುವ ಎಲ್ಲಾ ಅವಕಾಶಗಳು ಎಲ್ಲರಿಗೂ ದಟ್ಟವಾಗಿರುತ್ತವೆ. ಎನ್ನುವ ಬದುಕಿನ ಅದಮ್ಯ ಸುಂದರ ಪ್ರಜ್ಞೆ, ಮಾನವ ಪ್ರೀತಿಗಾಗಿ ಅತೀ ವಿಶೇಷವೂ ಅವಶ್ಯವೂ ಆಗಿದೆ.

'ನೀನೆಸೆದು ಹೋದ ಹುಲ್ಲಿನೆಸಳನ್ನು ಬಿತ್ತಲಾಗುತ್ತಿಲ್ಲ
ಎದೆಯ ಗದ್ದೆಯ ಕೂಡ ಬರಡಾಗಿದೆ
ನಾವೆಯಂತಹ ನೇಗಿಲಿದ್ದರೆ
ಕೊಡು ಗುರುವೆ
ಹಗಲಿರುಳು ಮಣ್ಣ ಸೀಳುತ್ತ ಕಣ-ಕಣದ ಮೇಲೂ
ಉಣ್ಣುವವನ ಹೆಸರನ್ನು ಬರೆಯುತ್ತೇನೆ' [10]

ಬುದ್ಧನ ಅನುಯಾಯಿಗಳನ್ನು ಉಲ್ಲೇಖಿಸುತ್ತಾ ಆ ಹೆಸರುಗಳ ಮೂಲಕ ಜೀವತತ್ವದ ನೆಲೆಯಲ್ಲಿ ಆಲೋಚಿಸುವ ಕವಿ ಅದೆಷ್ಟೋ ಲೋಕದ ಕ್ರೌರ್ಯಕ್ಕೆ ನಿಟ್ಟುಸಿರಿಗೆ ಬುದ್ಧ ಮಾರ್ಗದಲ್ಲಿ ಶಾಂತಿಯ ಪರಿಹಾರವಿದೆ. ಮೌನದಿಂದಲೇ ಜಗದ ಶಾಂತಿ ಲಭಿಸುತ್ತದೆ. ಬರಡಾದ ಮನ-ಮನೆಯ ವಿಷಾಧಕ್ಕೆ ಮೌನದಲ್ಲಿಯೇ ಜಗದ ಗೆಲುವನ್ನು ಕಾಣುವ ಲೋಕದ ನಿಯಮದಾಚೆಗಿನ ವಿಚಾರವನ್ನು ಪ್ರತಿಫಲವಿಲ್ಲದೆ ಸಂಸಾರದೊಳಗಿದ್ದೂ ವಿರಕ್ತನಂತೆ ಶಾಂತ ಚಿತ್ತತೆಯಿಂದ ನಿತ್ಯ ಉಳುವ ಕಾಯಕ ಯೋಗಿ ರೈತನ ಮೌನ ವಿಶ್ವ ಭ್ರಾತೃತ್ವದೊಂದಿಗೆ ಸಂಕೇತಿಸಲಾಗಿದೆ.

'ನಿಜ, ಎಲ್ಲಿಯೂ ಕರುಣೆಯ ಪಸೆ ಕಾಣುತ್ತಿಲ್ಲ
ದಿನಗಳುರುಳಿದಂತೆ ನದಿಯಾಗಿ ಹರಿದ ಕರುಣೆ
ಕೆರೆಯಾಗಿ, ತೊರೆಯಾಗಿ, ಬಟಾ ಬಯಲಾಗಿ
ಕೊನೆಗೆ ಬಂಜರು ಎದೆಯಾಗಿ ಹೋಗಿದೆ
ಇನ್ನಾದರೂ ಋಣದ ಮೂಟೆಯನ್ನು ಇಳಿಸುವೆಯಾ ತಂದೆಯೆ?

ಅನ್ನದ ಅಗುಳ ಮೇಲೊಂದು
ಋಣದ ಸಾಲನ್ನು ಬರೆಯುವೆಯಾ?'[11]

ಎಷ್ಟೋ ರೈತರು ಅನ್ನ ಇಲ್ಲದಿದ್ದರೂ ನಿತ್ಯ ಉಳುವ, ಮೊರಡು ಕಲ್ಲನ್ನು ಅಪ್ರತಿಮ ಸುಂದರವಾಗಿ ಕಡಿದು ಶಿಲೆಯಾಗಿಸುವ ಶಿಲ್ಪಿ, ತನ್ನ ಕಾಲಿಗೆ ಮುಳ್ಳಿನಿಂದ ಚುಚ್ಚಿಸಿಕೊಂಡರೂ ಇತರರಿಗೆ ಬೆಲೆಬಾಳುವ ಚಂದ ಚಪ್ಪಲಿ ಮಾಡುವ ಕುಶಲವಂತ, ಮನೆ ಇಲ್ಲದಿದ್ದರೂ ಇತರರಿಗೆ ಮಹಲುಗಳನ್ನು ಕಟ್ಟಿಕೊಡುವ ಕೂಲಿ ಕಾರ್ಮಿಕರ, ಕ್ಷೌರಿಕರ, ಕಲಾವಿದರ ಮುಂತಾದವರ ಮೇಲಿನ ಋಣದ ಭಾರದ ಬಗೆಗೆ ಉಳ್ಳವರು ಇನ್ನೂ ಅಂತರಾಳದಿಂದ ಮುಕ್ತವಾಗಿ ಮಾತನಾಡದಿರುವುದರ ಬಗೆಗೆ ಕವಿ ವಿಷಾಧಿಸುತ್ತಾರೆ. ಕಾವ್ಯ ಎಂದೂ ಸ್ಥಾವರವಲ್ಲ; ಅದು ಜಂಗಮರೂಪಿಯಾಗಿರುವ ಕಾರಣ ಎಂದಾದರೂ ಈ ಮಾನವಪರವಾದ ಕಳಕಳಿ ಎಂತಹ ಕ್ರೂರಿಗಳನ್ನಾದರೂ ಕರಗಿಸೀತು ಎಂಬ ಬಯಕೆ ಎಲ್ಲಾ ಹೃದಯಶೀಲ ಬರಹಗಾರರಿಗೆ ಇದ್ದೇ ಇರುತ್ತದೆ ಎಂಬುದು ಕವಿಕಾವ್ಯದ ನಂಬಿಕೆಯೇ ಆಗಿದೆ.

'ಬೆಂಕಿಯಾಚೆಗೆ ದೀಪ ಹಿಡಿದವರ ನಗೆ
ಬೆಂಕಿಯೊಳಗಿನವರ ಕೂಗು, ಕಿರುಚಾಟ, ಆಕ್ರಂದನದಲ್ಲಿ
ಲೀನವಾಗಿ ಹೋಗಿತ್ತು;
ಇಷ್ಟೆಲ್ಲಾ ನಡೆಯುತ್ತಿರುವಾಗಲೂ
ವಿದ್ಯುತ್ ತಂತಿಯ ಮೇಲೆ ಕುಳಿತ ಬಿಳಿ ಪಾರಿವಾಳಗಳೆಲ್ಲಾ
ಅತ್ತಿಂದಿತ್ತ-ಇತ್ತಿಂದತ್ತ ಪ್ರಭಾತ್ ಪೇರಿ ಮಾಡುತ್ತ
ವಂದೇ ಮಾತರಂ ಹಾಡುತ್ತಿದ್ದವು'[12]

ಹಿಂಸೆಯನ್ನೇ ತಮ್ಮ ಆದರ್ಶವಾಗಿಸಿಕೊಂಡವರ ವಿಕೃತ ಹಿಂಸಾಮೋಹಕ್ಕೆ ತಮ್ಮದೇ ಆದ ವಂಶದ ಕುಡಿಗಳು ಭವಿಷ್ಯದಲ್ಲಿ ಬರ್ಬರವಾಗಿ ಬಲಿಯಾಗುತ್ತಾರೆ ಎಂಬ ಕಿಂಚಿತ್ತೂ ದಿಗಿಲುಗಳಿಲ್ಲದೆ ನಿತ್ಯ ಯಥಾವತ್ ಜೀವನ ಸಾಗಿಸುತ್ತಿದ್ದಾರೆ. ಅಧರ್ಮ ಅಂಧತ್ವದ ಪೊರೆ ತುಂಬಿದ ಮೂಲಭೂತ ವ್ಯಾಧಿ ಹೆಚ್ಚಿದ ಅಯೋನಿಜರು ನಿತ್ಯ ಜಪಿಸುವ ಕಾಣದ ಸ್ವರ್ಗ, ನರಕ, ದೇವರು, ಅರ್ಥವಿಲ್ಲದ ಶಾಸ್ತ್ರಾಚಾರದ ಬಗೆಗೆ ಪ್ರಶ್ನಿಸಲಾಗಿದೆ. ನಿರಂತರವಾದ ಮಾನವರ ಮೇಲಿನ ಅಸಮಾನತೆ ಆಚರಣೆ ಬಗೆಗೆ ಇವರಿಗೆ ಕಿಂಚಿತ್ತೂ ನಾಚಿಕೆ ಎನಿಸುವುದೇ ಇಲ್ಲ. ಅನಿಸಿದರೂ ಅದು ಧರ್ಮ ಸೂಕ್ಷ್ಮವೆಂಬ ತೇಲುಮಾತಿನಲ್ಲಿ ಜಾರಿಕೊಳ್ಳುವ ನಯವಂಚಕರಿಗೆ 'ಕಂಬಾಲಪಲ್ಲಿ ಪ್ರಕರಣ, ಧರ್ಮಾಂಧ ದುಷ್ಟರ ಜಾತಿ ಮರ್ಮದುರಿಯಲ್ಲಿ ಬೆಂದವರ ದುರಂತ, ಬೆತ್ತಲಾದವರ ಮನಸುಗಳು, ಜೀತದ ಮುಳ್ಳುಹಾಸಿಗೆಯಲ್ಲಿ ಇಂದಿಗೂ ನಗರದಲ್ಲೇ ಬೇಯ್ಯುತ್ತಿರುವ ದಿನಗೂಲಿಗಳು, ಕಾಮುಕರ ಕಣ್ಣಿನ ಗರಡಿಯಲ್ಲಿ ಭಾರೀ ಭೋಜನವಾದ ಅಮಾಯಕ ದಲಿತ ಹೆಣ್ಣುಗಳು, ಹಣದಾಸೆಗೆ ಎಂಥ ಕುಕೃತ್ಯಗಳಿಗೂ ಒಪ್ಪಿಕೊಂಡು ಬಾಲ್ಯವನ್ನೇ ಬಲಿಕೊಡುತ್ತಿರುವ ಅದೆಷ್ಟೋ ಸ್ಲಂಗಳ ಪುಟ್ಟ ಪೋರರು, ಹೀಗೆ ಅಗಣಿತ ಅಮಾಯಕ ಜಾತ್ಯಾತೀತ ಹೆಣ್ಣು-ಗಂಡುಗಳ ಆಕ್ರಂದನ ಧರ್ಮಾಂಧರ ಕರುಳಿಗೆ ತಲುಪುವುದೇ ಇಲ್ಲ.

ಇದರಿಂದ ಇವರು ಭೌತಿಕವಾಗಿ ಕಿರುಚಿ ಹಾಡುವ ಹಾಡು ದೇವರಿಗೂ ಇಷ್ಟವಾಗುವುದಿಲ್ಲ. ಅದೆಷ್ಟೋ ಅಗಣಿತ ವಿಶ್ವ ಪ್ರೇಮಿಗಳಾಗಿದ್ದ ಬುದ್ಧನಿಂದ ಹಿಡಿದು ಈ ಕ್ಷಣದ ಮಾನವ ಪ್ರೇಮಿಗಳೂ

ಇವರ ಮೆಚ್ಚಿನ ಪುರಾಣ ಪುರುಷರೂ ಇವರ ಕೆಂಗೆಣ್ಣಿನ ದಳ್ಳುರಿಯಲ್ಲಿ ಸತ್ತಿದ್ದಾರೆ. ಇದರ ಸುಳಿವೂ ಗೊತ್ತಿಲ್ಲದಂತೆ ಇರುವ ಇವರ ಮೊಂಡುವಾದವನ್ನು ಅಸಹಾಯಕರಾಗಿ ಮೂಕ ವೇದನೆಯಿಂದ ನೋಡತ್ತಿದ್ದ ಬಿಳಿ ಪಾರಿವಾಳಗಳೂ ಸತ್ತವರ ನಿಟ್ಟುಸಿರಿಗಾಗಿ ಎಂಬಂತೆ 'ಅತ್ತಿಂದಿತ್ತ-ಇತ್ತಿಂದತ್ತ ಪ್ರಭಾತ್ ಪೇರಿ ಮಾಡುತ್ತ ವಂದೇ ಮಾತರಂ ಹಾಡುತ್ತಿದ್ದವು' ಎನ್ನುವ ಕವಿಯ ಕೂಗು ಹಿಂದುತ್ವದ ಇಂದಿಗೂ ಮಾಸದ ಧರ್ಮಾಂಧತ್ವದ ಕ್ರೌರ್ಯವನ್ನು ಬೆತ್ತಲಾಗಿಸಿದೆ.

'ಒಂದಷ್ಟು ಸಮಾಧಾನ ಪಡೋಣವೆಂದು ಬೊಗಸೆಯೊಳಗೊಂದಷ್ಟು ನೀರು ತುಂಬಿಕೊಂಡು ಆ ಚಂದಿರನನ್ನು ಬಂಧಿಸಿ ಕುಡಿಯೋಣವೆಂದರೆ ಬೊಗಸೆಯೊಳಗಿನ ನೀರು ಬೆರಳ ಸಂದಿಯಲ್ಲಿ ಸೋರಿ ಹೋಗಿ ನಗುವ ಚಂದಿರ ಕೈಗಂಟಿಕೊಳ್ಳುತ್ತಿದ್ದಾನೆ' ಎನ್ನುವ ವಿಷಾಧತೆಯ ಅಭಿವ್ಯಕ್ತಿ ಮನುಷ್ಯಪ್ರೇಮ ತುಂಬಿದ, ಜೀವತತ್ವ ಬೆರೆತ ಭಾವನೆಗಳು ಸೂಕ್ಷ್ಮತೆ ಕಳೆದು ಕೊಂಡಾಗ ಸಂಬಂಧದ ಅಸ್ತಿತ್ವ ಏಕಾಂಗಿಯಾಗಲು ಬಯಸುತ್ತದೆ. ಮಾನವ ಸಂಬಂಧ ದೊಡ್ಡು ಎನ್ನುವುದನ್ನು ಮರೆಯುವಷ್ಟು ಮುರಿದು ಹೋಗುತ್ತವೆ. ಅನುಮಾನವೇ ಜಾಸ್ತಿಯಾಗಿರುವ ಈ ಮಾನವ ಜಾತಿಗೆ ತನ್ನ ಧರ್ಮವೊಂದನ್ನು ಬಿಟ್ಟು ಉಳಿದ ಧರ್ಮವೆಲ್ಲ ಪರಕೀಯವೇ, ಬಯೋತ್ಪಾದಕರೇ, ರಕ್ತ ಪಿಪಾಸುಗಳೇ ಆದರೆ, ನಿಜ ಬದುಕಿನ ತುಂಬ ಭೀತಿಯಲ್ಲೇ ಕಳೆಯುವ ಅದೆಷ್ಟೋ ಧರ್ಮಾಂಧರ ಬಗೆಗೆ ಕವಿಯ ಕೋರಿಕೆಯಿಷ್ಟೇ. ನಿಮ್ಮಿಂದ ಸೃಷ್ಟಿಸಲಾಗದ ಈ ಜಗದ ಯಾವ ವಸ್ತು ವ್ಯಕ್ತಿ ಸಮುದಾಯದ ಮೇಲೂ ಅತಿಕ್ರಮಿಸುವ, ಮಾನ ಹಾನಿ, ಜೀವಹಾನಿ, ಪ್ರಾಣಹಾನಿ ಮಾಡುವ ಹಕ್ಕನ್ನು ಪ್ರಕೃತಿ ಒಪ್ಪುವುದಿಲ್ಲ ಎಂಬುದನ್ನು ನಗುವ ಚಂದಿರ ಕೈಗಂಟಿಕೊಳ್ಳುತ್ತಿದ್ದಾನೆ ಎಂಬ ವ್ಯಂಗ್ಯದೊಂದಿಗೆ ಕವಿ ವಿಷಾಧಿಸುತ್ತಾರೆ.

"ಪ್ರತಿಮೆಗಳ ಮೂಲಕವೇ ಕಾವ್ಯಕಟ್ಟುವ ನಿಜನೆಲೆಯ ಪ್ರಯತ್ನದಲ್ಲಿರುವ ಲಕ್ಕೂರು ಆನಂದರು ಸಾಮಾಜಿಕ ಅಸಮಾನತೆಯ ಚಿತ್ರಗಳನ್ನು ಪ್ರಾಣಿ, ಪಕ್ಷಿ ಪರಿಸರದಿಂದಲೂ ಹೆಣೆಯಬಲ್ಲರು. ಅವರ ಈ ವರೆಗಿನ ಕವಿತೆಗಳ ಅನೇಕ ಸಾಲುಗಳ ಮೇಲೆ ರಕ್ತದ ತೊಟ್ಟುಗಳು ಬಿದ್ದು ಕೆಂಪು ಮಾಡಿವೆ. ಗರಿಯ ಗುಡಿಸಲೊಳಗಾಡುವ ನವಿಲುಗಳು, ಪುಟ್ಟ ಮಕ್ಕಳ ಪುಸ್ತಕದ ಹಾಳೆಯಲ್ಲಿ ಅವಿತುಕೊಂಡಿರುವ ನವಿಲುಗರಿ ಮರಿಹಾಕೀತೆ? ಎಂಬ ಹುಡುಕಾಟ ಅನೇಕ ಕವಿತೆಗಳಲ್ಲಿವೆ. ಕವಿ ಶಬ್ದದೊಳಗಿನ ನಿಶ್ಶಬ್ದದ ಜಾಗವನ್ನು, ಮೌನದಾಚೆಗಿನ ಮಾತಿನ ಬೆರಗನ್ನು ಕಂಡುಕೊಳ್ಳುವ ತಹತಹದಲ್ಲಿದ್ದಾರೆ. ಶರಣರ ನುಡಿಗಳು, ಕೃಷಿ ಸಂಬಂಧಿ ಉಪಕರಣಗಳು, ಬಯಲು-ಆಲಯದ ಮೂಲವಾದ ಅಲ್ಲಮರು ಕಾವ್ಯದಲ್ಲಿ ತುಂಬಿದ್ದಾರೆ. ಹೆಣ್ಣು-ಗಂಡಿನ ಸಂಬಂಧಗಳನ್ನು ವಯೋಸಹಜ ದೃಷ್ಟಿಯಿಂದ ವಿಶ್ಲೇಷಿಸುವ ಕಾವ್ಯಗುಣವಿದೆ"[21] ಎನ್ನುವ ಕವಿ ಎಲ್. ಹನುಮಂತಯ್ಯ ಅವರ ಅಭಿಪ್ರಾಯದಂತೆ ಲಕ್ಕೂರು ಆನಂದರಿಂದ ಆಧುನಿಕೋತ್ತರ ಕನ್ನಡ ಕಾವ್ಯಲೋಕ ಈವರೆಗಿನ ಕಾವ್ಯವನ್ನು ಸ್ವೀಕರಿಸುತ್ತಾ ಇನ್ನೂ ತೂಕದ ಬರಹಗಳನ್ನು ಸ್ವಾಗತಿಸುತ್ತದೆ.

ಇ. ಹನಸೋಗೆ ಸೋಮಶೇಖರ್ ಕಾವ್ಯದೊಳಗಿನ ಜೀವತತ್ವದ ಸಂವೇದನೆ:

ಮಾನವೋನ್ನತಿಗಾಗಿ ಶ್ರಮಿಸಿದ ಮಹಾಚೇತನಗಳನ್ನು ಮರೆಮಾಚಿ ಬ್ರಾಹ್ಮಣೋನ್ನತಿಗಾಗಿ ಶ್ರಮಿಸಿದ ಕುಬ್ಜ ಮನುಷ್ಯರನ್ನು ಮಹಾಮಾನವರೆಂಬಂತೆ ಮನುವಾದಿ ಲೇಖಕರು ಚಿತ್ರಿಸಿಬಿಟ್ಟಿದ್ದಾರೆ. ಎರೆಡು ಸಾವಿರ ವರ್ಷಗಳಿಗೂ ಹೆಚ್ಚುಕಾಲ ಸತತವಾಗಿ ಭಾರತದ ಬಹುಜನರಿಂದ ವಿದ್ಯೆ ಅಧಿಕಾರ ಆಸ್ತಿಗಳನ್ನು ಕಿತ್ತುಕೊಂಡ ಬ್ರಾಹ್ಮಣರು ಈ ಕೆಲಸವನ್ನು ಲೀಲಾಜಾಲವಾಗಿ ಮಾಡಿಕೊಂಡು ಬಂದಿದ್ದಾರೆ. ಹೀಗಾಗಿ ಇಡೀ ದೇಶದ ತುಂಬ 'ಸತ್ಯವನ್ನು ಸತ್ಯವೆಂದೂ, ಸುಳ್ಳನ್ನು ಸುಳ್ಳೆಂದೂ' ಜನ ನಿರ್ದಿಷ್ಟವಾಗಿ ಗುರುತಿಸುವುದೇ ಒಂದು ದೊಡ್ಡ ಪ್ರಯಾಸದ ಕೆಲಸವಂಬಂತಾಗಿದೆ. ಇಂಥಹ ದೊಡ್ಡ ಗೊಂದಲದ ವಾತಾವರಣದಲ್ಲಿ ಹನಸೋಗೆ ಸೋಮಶೇಖರ್ ಅವರ **'ಭೀಮ ಪಲ್ಲವಿ'** ಕವನ ಸಂಕಲನದ ಮೂಲಕ ಅದೆಷ್ಟೋ ಕತ್ತಲ ಗರ್ಭದಲ್ಲಿ ಹುದುಗಿಹೋಗಿದ್ದ ಸತ್ಯ ವಿಚಾರಗಳನ್ನು ಕಾವ್ಯವಾಗಿಸಿದ್ದಾರೆ.

"ಹೇ..ಏಳು ಎದ್ದೇಳು ಶೋಷಿತ
ಹೇ..ಸಾಕೋ ಸಾಕಿನ್ನು ಜೀತ
ನೀ ಕೇಳೋ ಕೇಳೆನ್ನ ಮಾತ
ಹೇ.. ಸಾಕೋ ಸಾಕಿನ್ನ ಜೀತ"[13]

ಕೀಳು ನಾನೆಂಬ ಕೊರಗಿನಲ್ಲಿರುವ ಗೆಳೆಯರನ್ನು ಕುರಿತು 'ಮೇಲೇಳು' ತೊಟ್ಟಿಲಲ್ಲಿರುವ ಹಸುಕಂದನಿಗೂ ಕ್ರಾಂತಿ ಗೀತೆಯ ನೀಹೇಳು. ಹಿರಿಯರೆಂದು ಹೀನ ನುಡಿಯನ್ನು ವಿಚಾರ ಮಾಡದೆ ನಂಬುವುದು ಸರಿಯಲ್ಲ. ಸರಿಯೋ ತಪ್ಪೋ ತಿಳಿಯದೆ, ಕುರಿಯಂತೆ ಅನುಸರಿಸದೆ, ಪ್ರಶ್ನೆಯ ಮೂಲಕ ಸತ್ಯಾಸತ್ಯತೆ ತಿಳಿಯಬೇಕಿದೆ. ಸುಳ್ಳು ಜಾತಿ ಸೃಷ್ಟಿಮಾಡಿ, ಮುಟ್ಟಬೇಡಿ, ಓದಬೇಡಿ ಎಂದು ಅಂದು ದೂರತಳ್ಳಿದ್ದವರು ಇಂದು ಹೂಡುತ್ತಿರುವ ಹೊಸ ತಂತ್ರಗಾರಿಕೆಯೇನೆಂದು ತಿಳಿಯುವ ಹೊಸ ಸಮಸ್ಯೆಗಳು ನಿನ್ನ ಮುಂದಿದೆ. ಇಂದು ಸಂವಿಧಾನ ಕೊಟ್ಟ ಅರಿವಿನಾ ಮೂಲಕ ನಿನ್ನ ಅಸ್ಥಿತ್ವವೇನೆಂಬುದನ್ನು ತಿಳಿದರೆ ಶತಮಾನದ ಅಸಮಾನ ಸೂತಕಕ್ಕೆ ತೆರೆ ತನ್ನಂತಾನೆ ಬೀಳುವುದು ಎಂಬುದು ಕವಿ–ಕಾವ್ಯದ ಆಶಯವಾಗಿದೆ.

ಇಂದು ಜನರನ್ನು, ದೇವರನ್ನು, ಧರ್ಮವನ್ನು ರಕ್ಷಣೆ ಕೊಟ್ಟು ಬೆಳೆಸುವ, ಉಳಿಸುವ, ಕೈಹಿಡಿದು ಕಾಪಾಡುವುದೇ ಅಧಿಕಾರ. ಸರ್ಕಾರದ ಒಳರೂಪವೇ ನಮ್ಮ ಕೈಲಿರುವ ಓಟಿನ ಅಧಿಕಾರ. ನಮ್ಮ ರಕ್ಷಣೆಗೆ ನಾವೇ ಹೊಣೆಯಾಗಲು; ಪ್ರಜಾಪ್ರಭುತ್ವದ ನೆಲದಲ್ಲಿ ಪ್ರತಿ ಓಟಿನ ಬೆಲೆಯ ತಿಳಿದು ಬುದ್ಧಿಯ ಜಗವನ್ನು ಕಟ್ಟುವ ಜಾಗೃತಿಗಾಗಿ; ದಮನಿತರ ವಿಮೋಚನೆಗಾಗಿ ರಾಜಕೀಯ ಅಧಿಕಾರವೊಂದೇ ದಾರಿಯಾಗಿದೆ ಎನ್ನುವ ಆಶಯ ಇಲ್ಲಿ ಬಿಂಬಿಸಿದೆ.

'ನಿನ್ನ ಜೀವಿತದ ಸಂಘರ್ಷ
ಈ ಎದೆಯಲಿ ತುಂಬಿದೆ ಹರ್ಷ
ನಿನ್ನ ಹೋರಾಟದ ಆ ಕೀರ್ತಿ
ಈ ಮನದಲಿ ತುಂಬಿದೆ ಸ್ಫೂರ್ತಿ
ಶಪಥ ಗೈಯ್ಯುವೆವು ಇಂದೇನೆ
ಈ ದೇಶ ಆಳುವೆವು ನಿನ್ನಾಣೆ'[14]

ಅಂಬೇಡ್ಕರ್ ಆಶಯದಂತೆ ನಾಗಕುಲದ ಚರಿತ್ರೆಯನ್ನು ನಾಳಿನ ಪುಟದಲ್ಲಿ ಬರೆಯುವ ಮೂಲಕ, ನಾಡಿನುದ್ದಕ್ಕೂ ಆನೆ ಬಲದ ನೀಲಿ ಬಾವುಟವನ್ನು ಅಭಿಮಾನದಿಂದ ಎತ್ತಿಹಿಡಿಯುವ ಶಪಥವನ್ನು ಸಾಭೀತು ಪಡಿಸಲು ನೀಡುವ ಕರೆ ಆಧುನಿಕೋತ್ತರ ಕವಿಗಳಿಗೆ ಮತ್ತು ದಮನಿತ ತರುಣರಿಗೆ ಸವಾಲಾಗಿದೆ. 'ನಾಡು ಕಟ್ಟಿ ನುಡಿ ಕಟ್ಟಿ ರಕ್ಷಣೆಯ ಕೋಟೆ ಕಟ್ಟಿ ರಾಜ್ಯವಾಳಿದಂತ ಈ ನೆಲದ ವಾರಸುದಾರರಾದ ನಾವು ದಮನಿತರು. ಇಲ್ಲಿ ಮನೆ ಕಟ್ಟಿ, ಮನಸ ಕಟ್ಟಿ; ಕನಸುಗಳ ಪಾತಿಕಟ್ಟಿ ಬೋಧಿಸತ್ವ ಬೆಳೆಸಿದೋರು ನಾವು'. ಬುದ್ಧನ ಜೀವತತ್ವದ ನೆಲೆಯಲ್ಲಿ ನಿಜ ಇತಿಹಾಸವನ್ನು ತೆಗೆದು ನೋಡಿದರೆ; 'ಜಗವ ಜಾಗೃತಿಗೊಳಿಸಿ ಮಾನವೀಯತೆ ಉಳಿಸೋ ಬುದ್ಧ ಧಮ್ಮ ಬಿತ್ತಿದೋರು; ದಯೆಯ ಧರ್ಮದ ಮೂಲ ಸತ್ಯಕ್ಕೆ ಸೋಲಿರದ ಅಶೋಕ ನಾಡ ಕಟ್ಟಿದೋರು ನಾವು; ಮಣ್ಣು ನೀರು ಗಾಳಿಯೊಡನೆ ಮೈಮನವ ಬೆರೆಸಿ ಬೆಳೆದ ಮೂಲನಿವಾಸಿಗಳು ನಾವು; ಮನುವಾದದ ನಾಶಕ್ಕಾಗಿ ಜೀವನವೀಡೀ ಹೋರಾಡಿದ ಭೀಮನ ಮೊಮ್ಮಕ್ಕಳು ನಾವು' ಎನ್ನುವ ಭಾವದ ಕವಿತ್ವದೊಳಗೆ ಗುರಿಯ ಮುಟ್ಟುವವರೆವಿಗೂ ದಿಟ್ಟತನದಿ ಹೋರಾಡೋ ಕೆಚ್ಚೆದೆಯ ಕಲಿಗಳನ್ನು ಆಧುನಿಕೋತ್ತರ ಕನ್ನಡ ದಲಿತ ಸಂವೇದನೆ ಇಂದು ಹುಟ್ಟುಹಾಕುತ್ತಿದೆ.

'ರೈತವರ್ಗವನ್ನು ರಕ್ಷಿಸಲು, ಕಾರ್ಮಿಕರ ಕಷ್ಟಗಳಿಗೆ ಸ್ಪಂದಿಸಲು, ಖಾಸಗೀಕರಣದ ಕಾರಣ ಬಿಡಿಸಲು, ಜಾಗತೀಕರಣದ ಮಾಯಾಜಾಲ ಭೇದಿಸಲು, ನಮಗೆ ಮಾತ್ರ ಉಂಟು ತಾಕತ್ತು' ಮನುವಾದಿಗಳಾ ಆಳ್ವಿಕೆಗೆ ಬೇಸತ್ತು ದಿಲ್ಲಿ ಗದ್ದುಗೆ ನೋಡು ಹೇಗೆ ಸದ್ದು ಮಾಡುತ್ತಿದೆ? ಆ ಗದ್ದುಗೆಯು ನಮ್ಮ ಕೈಬೀಸಿ ಕರೆಯುತಿದೆ, ಅದಕು ಗೊತ್ತು ಬಹುಜನರ ನಿಯತ್ತು. ನಾವು ಈಗಾಗಲೇ ಆಳಿದವರು ಎಂಬುದನ್ನು ಚರಿತ್ರೆಯೇ ಸಾರಿ ಹೇಳೀದೆ. ಅದಕ್ಕಾಗಿಯೇ ಇತಿಹಾಸ ತಿರುಚಿದ್ದು ಇಂದು ಆಳುತ್ತಿರುವವವರು ನಮ್ಮ ಭವಿಷ್ಯದ ಆಳ್ವಿಕೆಗೆ ಹೆದರಿ ಒಡೆಯುತ್ತಲೇ ಇರುತ್ತಾರೆ. ನಮ್ಮ ಒಗ್ಗಟ್ಟು ಎಂಬ ಇಂದಿನ ಹೊರ ಅರಿವಿನ ಮೂಸೆಯಲ್ಲಿ ಹೊಸ ಓದಿನಲ್ಲಿ ಕಂಡುಕೊಂಡ ವಿಚಾರಗಳು ಕಾವ್ಯವಾಗಿ ಹೊಮ್ಮಿವೆ. 'ಬ್ರಾಹ್ಮಣ ಶಾಹಿಗಳೇ ಭೂಮಿಯ ಮೇಲೆ ಮೊದಲಿಗೆ ಜನಿಸಿದ ಭಯೋತ್ಪಾದಕರು. ಮಾಯಾ–ಮಾಟ, ಮಂತ್ರ–ತಂತ್ರದ ಬಲದಲ್ಲಿ ಭಯವನು ಬಿತ್ತಿದವರು. ದೇವರ ಹೆಸರಲಿ, ಧರ್ಮದ ಅಡಿಯಲಿ ರಾಜ್ಯದಂಡವ ಹಿಡಿದುಕೊಂಡವರು'. ತಾರತಮ್ಯದ ರಾಜನೀತಿಯಲಿ

ಶೂದ್ರ-ಅಸ್ಪೃಶ್ಯರ ಸೃಷ್ಟಿಮಾಡಿದರು, ಪ್ರತಿಭಟನೆಗೆ ಶಿಕ್ಷೆಯ ಸಾರಿದರು, ಒಪ್ಪದೆ ಒದರಿದ ಶಕ್ತಿಶಾಲಿಗಳಿಗೆ ಚಂಡಾಲರೆಂದು ದೂರಿದರು. ಊರಿಂದ ಹೊರಗೆ ದೂಡಿದರು, ದುಷ್ಟ ಶಿಕ್ಷಣೆ ಶಿಷ್ಟ ರಕ್ಷಣೆ ಎಂಬ ಘೋಷಣೆ ನೀಡಿದರು. ಕಂಡಕಂಡಲ್ಲಿ ಕಲ್ಲನು ತೋರಿ ದೇವರ ರೂಪ ಎನಿಸಿ ನಮಿಸದಿದ್ದರೆ ಕಷ್ಟ ನೀಡುವನು, ಎಂಬ ಭಯವ ಹುಟ್ಟಾಕಿಸಿದರು. ಅವತಾರದ ಅವಾಂತರದೊಳಗೆ ಮೆದುಳಿಗೆ ಚಿತ್ರ ಪಟಗಳ ತೋರಿಸಿ ದೇವರೆಂದು ನಂಬಿಸಿದ ಈ ಲಜ್ಜೆಗೆಟ್ಟ ಪುರೋಹಿತಾಶಾಹಿಗಳ ಬಗೆಗೆ ಮಾತನಾಡುವ; ಕೆಣಕುವ ಮುನ್ನ ಜಾಗ್ರತೆ ಅತೀ ಮುಖ್ಯ ಎಂದು ಕಾವ್ಯ ಎಚ್ಚರಿಸುತ್ತದೆ.

'ಚಮಚಾಯುಗದ ಚರಮಗೀತೆಗೆ
ಅಂತ್ಯ ಹಾಡುತೀವಿ
ಭೀಮಯುಗದ ಭವ್ಯ ಗೀತೆಗೆ
ಪಲ್ಲವಿ ಬರೆಯುತೀವಿ'[15]

ಚಮಚಾಗಳನ್ನು ಸೃಷ್ಟಿಸಿದ ಒಪ್ಪಂದವನ್ನು ಧಿಕ್ಕರಿಸುತ್ತಾ; ಸಮತಾ ರಾಜ್ಯವ ಸಂತಸದಿಂದ ಕಟ್ಟಿ ಕುಣಿಯುತ್ತಾ; ಚಮಚಾಗಳು ಹಿಡಿದಿರುವಂಥಹ ಕೈಗಳ ಕಡಿಯುತ್ತಾ; ಸ್ವಾಭಿಮಾನದಿ ಸೋದರತೆಯನ್ನು ಎತ್ತಿ ಹಿಡಿಯುತ್ತೀವಿ. ಚರಣಚರಣದಲು ನ್ಯಾಯ ನೀತಿಯನು ಕಟ್ಟಿಹಾಡುತ್ತೀವಿ. ಪ್ರಜಾಪ್ರಭುತ್ವದ ಪ್ರಭಲ ಸತ್ವಗಳ ನೀರೆರೆದು ಬೆಳೆಸುತ್ತೀವಿ ಎಂಬ ವಿಶ್ವಾಸ ಇಂದಿನ ನವತರುಣರದ್ದಾಗಿದೆ. ಭಾರತವೆಂಬ ಬುದ್ಧ ಭೂಮಿಯಲಿ ಹರುಷ ತುಂಬುತ್ತೀವಿ, ತುಂಬು ಜ್ಞಾನದಿ ಅಂತ್ಯವಿರದ ಹೊಸಹಾಡ ಹಾಡುತ್ತೀವಿ. ಅಸಹಕಾರ ಮಾಡುವವರ ಅಂತರಂಗವ ಹೊಕ್ಕಿ ನೋಡುತ್ತೀವಿ; ಸಮಾನತೆಯ ಆನೆ ಬಲವನ್ನು ಸೃಷ್ಟಿ ಮಾಡುತ್ತೀವಿ ಎಂಬ ಆತ್ಮಾಭಿಮಾನದ ಹಿಂದೆ ಸಂವಿಧಾನದ ಪ್ರೇರಣೆ ಮಹತ್ವದ್ದಾಗಿದೆ.

'ರಕ್ತದ ಕಣಕಣದಲ್ಲೂ ಸ್ವಾಭಿಮಾನ ಇದ್ದವನು
ಜ್ಞಾನದ ಅಣು ಅಣುವಲ್ಲೂ ಭೀಮವಾದ ಉಳ್ಳವನು
ದಿಲ್ಲಿಗದ್ದುಗೆ ಏರೋವರೆಗೂ ನಿದ್ದೆಮಾಡಲಾರ
ಕನಸು ಕೈಗೂಡೋವರೆಗೂ ಸುಮ್ಮನಿರಲಾರ'[16]

ರಾಜಕೀಯ ತಿಳಿದವನು ರಾಜಿಯಾಗಲಾರ; ಸ್ವಾಭಿಮಾನ ಉಳ್ಳವನು ಚಮಚಾ ಆಗಲಾರ; ಮೋಸವಂಚನೆ ಕಂಡು ಮೌನಿಯಾಗಲಾರ ತನ್ನತನವ ಮರೆತವನು ತಾನೂ ಉಳಿಯಲಾರ; ಶೋಷಣೆಗೆ ಸೆಟೆದು ನಿಂತವನು ಸ್ವಾರ್ಥಿಯಾಗಲಾರ; ಧೈರ್ಯವುಳ್ಳವನು ಹೇಡಿಯಾಗಲಾರ; ನೆನ್ನೆಗಳ ಮರೆತವನು ನಾಳೆಗಳ ನೆನೆಯಲಾರ; ನಾಯಕನಾದವನು ಕಾಯಕವ ಬಿಡಲಾರ; ಬದಲಾವಣೆ ಬಯಸಿದವನು ಬೆಳೆಯದೆ ಇರಲಾರ; ತ್ಯಾಗಿಯಾದ ವೀರನೆಂದೂ ಸೋಗುಮಾಡದೆ ಮಾನವತೆಗೆ ಜೀವನವನ್ನು ಮುಡಿಪಾಗಿಡುತ್ತಾನೆ. 'ದೇಶ ಕೋಶಗಳ ತಿಳಿದು ಜಗದ ದುಃಖಗಳ ಅರಿತು ಕಷ್ಟಕೆ ಕಾರಣವನ್ನು ಕಂಡು ಹಿಡಿದ ಗೌತಮ ಬುದ್ಧ ನಮಗೆ ಆದರ್ಶ ಆಗುವವರೆಗೆ

ಸಂಘರ್ಷ ತಪ್ಪುವುದಿಲ್ಲ' ಎನ್ನುವ ಕವಿ 'ಮಾನವರೆಲ್ಲರೂ ಒಂದೇ; ಭೇದವು ಸಲ್ಲದು' ಸಮಸಂವಿಧಾನವ ಬರೆದುಕೊಟ್ಟ ಬಾಬಾ ಸಾಹೇಬ್ ಅಂಬೇಡ್ಕರ್ ನಮಗೆ ಆದರ್ಶ ಆಗದಿದ್ದರೆ ಅಸಮಾತನೆ ತಪ್ಪುವುದಿಲ್ಲ. ಹೆಣ್ಣುಗಂಡು ಒಂದೇ ಬಗೆಯಾದ ಸಮಾನ ಶಿಕ್ಷಣ ಪಡೆಯಿರಿ ಎಂಬ ಸಾರ್ವತ್ರಿಕ ಶಿಕ್ಷಣದ ಮಹತ್ವವನ್ನು ಮಹಾತ್ಮ ಜ್ಯೋತಿ ಬಾಫುಲೆ ಹೇಳಿದ್ದರು. ದೇವರು ದಿಂಡರು ಸುಳ್ಳು; ಶಾಸ್ತ್ರ ಪುರಾಣ ಪೊಳ್ಳು, ಸ್ವಾಭಿಮಾನವೇ ಶ್ರೇಷ್ಠವೆಂದಿದ್ದ ತಂದೆ ಪೆರಿಯಾರ್ ನಮಗೆ ಆದರ್ಶ ಆಗದ ಕಾರಣಕ್ಕಾಗಿಯೇ ದಮನಿತರಾದ ನಮಗೆ ಇನ್ನೂ ತಪ್ಪೇ ಇಲ್ಲ ಸಂಕಷ್ಟ ಎಂಬ ಸ್ವಗತ ಪಶ್ಚಾತ್ತಾಪದ ಮೂಲಕ ಇಡೀ ದಮನಿತರನ್ನು ಕಾವ್ಯ ಎಚ್ಚರಿಸುತ್ತದೆ. 'ಆನೆ ಗುಣದ ಹಿಂಡಾನೆ ಬಲದವರು ನನ್ನ ಜನ. ಇನ್ನು ಮುಂದೆ ನನ್ನ ಜನ ಈ ದೇಶವನ್ನು ಕೊನೆತನಕ ಆಳುತ್ತಾರೆ. ಆನೆಯಂತೆ ಗಂಭೀರದವರು, ಕುಶಲಮತಿಯ ನಿರ್ಧಾರದವರು, ತಲೆಯನೆಂದೂ ಬಾಗಿಸದಂತಹ ಜನರೇ ಈ ನಾಗಜನ. ನನ್ನ ಜನ ಈ ಆದಿಜನ ಆಳುತ್ತಾರೆ. ಮದ್ದಾನೆಯಂತೆ ಮುಂದೆ ನುಗ್ಗುವರು, ಹೊಂದಾಣಿಕೆಯೇ ಪ್ರಧಾನ ಎಂಬ ಕಾರಣಕ್ಕಾಗಿಯೇ ಸುಮ್ಮನಿರುವ ಇವರು ಎದ್ದುನಿಂತ ಮೇಲೆ ಕೂರುವುದಿಲ್ಲ ಎಂಬ ಅಂಬೇಡ್ಕರರ ವಿಶ್ವಾಸವನ್ನು ಕವಿ ಕಾವ್ಯದುದ್ದಕ್ಕೂ ಪುನರಾವರ್ತಿಸುತ್ತಾರೆ.

'ದೇವರ ಗುಡಿಯಲಿ ದಾಸಿ ಎಂದರು
ಕಾಣಿಕೆ ಎಂದರು ದಕ್ಷಿಣೆ ಎಂದರು
ಮಾರುಕಟ್ಟೆಯಲ್ಲಿ ವೇಶ್ಯೆ ಎಂದರು
ಕಾಸನು ಕೊಟ್ಟು ಜಾರಿಣಿ ಎಂದರು
ಬೇಕಂತ ನಾನಾಗಲಿಲ್ಲ ಸೂಳೆ.....
ನನ್ನ ಪ್ರೀತಿಸುವವರಿಲ್ಲ'[17]

ಬದುಕ ಊರುಗೋಲನೇ ಮುರಿದು ನನ್ನ ಮೂರುಕಾಸಿಗೆ ಕೇಳಿ ಹೊರೆಯಲು ಹಾಳಾದ ಹೊಟ್ಟೆ ನಾ ನೀತಿ ಮರೆತುಬಿಟ್ಟೆ; ಬೇಕಂತ ನಾನಾಗಲಿಲ್ಲ ಸೂಳೆ. ಬದುಕಲು ಬಿಡದೆ ಬದುಕಿಸುವವರಿಲ್ಲದೆ ಹಾಲುಗೆನ್ನೆಯ ಹಾಳಾಗಿಸಿ ಹರೆಯ ತುಂಬುವಾ ಮೊದಲೆ ಕಣ್ ಸನ್ನೆ ಕೈ ಸನ್ನೆಯಂದಲೇ ನನ್ನ ಬದುಕನ್ನು ವ್ಯವಸ್ಥೆ ಸೂನ್ನೆ ಮಾಡಿದೆ. ನನ್ನಂತವರಿಗೆ ನಿಜ ಊರು ಎಂಬುದಿದೆಯೇ? ಸಾಯಲು ಮನಸಿಲ್ಲ, ಬದುಕಲು ಬಿಡಲಿಲ್ಲ; ನನ್ನ ಬದುಕಿಸುವವರಿಲ್ಲ ಎಂಬ ವ್ಯವಸ್ಥೆಯು ತನ್ನಿಂದ ಮಾಡಿಸಿದ ಮತ್ತು ಸ್ವಯಂಕೃತ ಅಪರಾಧಕ್ಕೆ ಮುನ್ನುಡಿ ಬರೆದ ಕಾಮಲೋಕದ ಅನಾವರಣ ದಮನಿತ ಲೋಕದಲ್ಲಿ ನಿತ್ಯ ಅನುರಣನವಾಗುತ್ತಿರುವುದು ಕಾಮಾಂಧರಿಗೆ ಕಾಣಿಸುವುದೇ ಇಲ್ಲವೆಂಬುದನ್ನು ಕವಿ ದಾಖಲಿಸುತ್ತಾರೆ.

ಇದರ ಜೊತೆಗೇ ಗಮನಿಸಬೇಕಾದ ಮತ್ತೊಂದು ಆಶಾದಾಯಕ ಸಂಗತಿಯೆಂದರೆ; ಭಾರತದಾದ್ಯಂತ ಅಂಬೇಡ್ಕರ್ ನಂತರ ದಾದಾ ಸಾಹೇಬ್ ಕಾನ್ಷಿರಾಂ ಅವರ ನೇತೃತ್ವದಲ್ಲಿ ಬೆಳೆದಿರುವ ಬಹುಜನ ಚಳವಳಿಯಿಂದಾಗಿ ಬಹುಜನರ ಮೂಲ ಇತಿಹಾಸ, ಸಂಸ್ಕೃತಿಗಳು ಹೊರ ಬರಲಾರಂಭಿಸಿವೆ. ಕೀಳರಿಮೆಯಿಂದ ಕುಗ್ಗಿ ಹೋಗಿದ್ದ ಬಹುಜನ ಸಮಾಜ ಇಂದು ತನ್ನ ಭವ್ಯ

ಇತಿಹಾಸ–ಸಂಸ್ಕೃತಿಗಳ ಹಿರಿಮೆಯಿಂದಾಗಿ ತನ್ನೊಳಗೆ ಮೇಲರಿಮೆ, ಆತ್ಮಾಭಿಮಾನಗಳನ್ನು ತಂದುಕೊಳ್ಳುತ್ತಾ ಆಳುವ ವರ್ಗವಾಗಲು ಬೇಕಾದ ಎಲ್ಲ ಗುಣ–ಲಕ್ಷಣಗಳನ್ನು ಪಡೆದುಕೊಳ್ಳುತ್ತಿದೆ. ಈ ಎಲ್ಲ ಸಂಗತಿಗಳನ್ನೂ 'ಭೀಮ ಪಲ್ಲವಿ' ಕೃತಿಯಲ್ಲಿನ 'ಬಹುಜನ', 'ವಿಮೋಚನೆಗೊಂದೇ ದಾರಿ', 'ಜೈ ಭೀಮ', 'ಏಳಿ', 'ತಾಕತ್ತು', 'ಆಗುತೈತೆ', 'ಕಣ್ಣು ತೆರೆದು ನೋಡು'. 'ನಾಡು ನುಡಿ', 'ಆಳುವ ವರ್ಗ', 'ಬಹುಜನರದಂಡು', 'ವಿಮೋಚನಾರಥ', 'ನನ್ನ ಜನ', 'ರಣರಂಗ', 'ಚರಮಗೀತೆ', 'ಆದರ್ಶ', 'ಮುಂದೆ ಮುಂದೆ', 'ದಿವ್ಯ ಔಷಧ', 'ಕಾನ್ಷಿರಾಂಜೀ', ಇವೇ ಮುಂತಾಗಿ ಚರಿತ್ರೆ ಸಮಾಜ ಹೋರಾಟ, ಸಾಮಾಜಿಕ ಪರಿವರ್ತನಕಾರರ ಚಿಂತನೆಗಳು ಕಾವ್ಯಗಳಾಗಿ ಅರಳಿವೆ. ಬಾಬಾ ಸಾಹೇಬರ ಕನಸು ಕರ್ನಾಟಕದಲ್ಲೂ ಬೇಗ ನನಸಾಗಲೆಂಬ ತೀವ್ರ ಅಪೇಕ್ಷಿಯಿಂದ ತುಡಿಯುವ ಹನಸೋಗೆ ಸೋಮಶೇಖರ್ ಕವಿತೆಗಳು ನಾಡಿನ ಗಾಯಕರ; ಕಲಾವಿದರ ನಾಲಗೆಯ ಮೇಲೆ ಪ್ರಜ್ವಲಿಸುತ್ತಾ 'ಸಾಮಾಜಿಕ ಪರಿವರ್ತನಾ ಕಾವ್ಯ'ವಾಗಿವೆ. ಈ ನೆಲೆಯಲ್ಲಿ ಕವಿಯನ್ನು ನೋಡಿದಾಗ ಸಮಸಮಾಜದ ನಿರ್ಮಾಣಕ್ಕಾಗಿ ತಮ್ಮ ಕಾವ್ಯದ ಮೂಲಕ, ತೀವ್ರವಾಗಿ ಹಂಬಲಿಸುತ್ತಿರುವ ಹನಸೋಗೆ ಸೋಮಶೇಖರ್ ಪಾರಂಪರಿಕವಾಗಿ ಕಟ್ಟಲ್ಪಟ್ಟಿದ್ದ ಸುಳ್ಳು ಇತಿಹಾಸವನ್ನು ಸ್ವೋಪಜ್ಞ ದೃಷ್ಟಿಯಿಂದ ಆಧುನಿಕೋತ್ತರ ದಲಿತ ಕಾವ್ಯಲೋಕದಲ್ಲಿ ಹೊಸ ಆಲೋಚನಾ ಕ್ರಮವನ್ನೇ ದಾಖಲಿಸಿದ್ದಾರೆ.

ಕವಿ ಹನಸೋಗೆ ಸೋಮಶೇಖರ್ ಅವರ ಮಾತುಗಳಲ್ಲೇ ಹೇಳುವುದಾದರೆ: "ಜಗತ್ತಿನಲ್ಲಿಯೇ ಅತ್ಯುತ್ಕೃಷ್ಟವಾದ ಸಿಂಧೂ ನಾಗರಿಕತೆಯನ್ನು ಕಟ್ಟಿದ ಭಾರತದ ಮೂಲ ನಿವಾಸಿಗಳೇ ಇಲ್ಲಿನ ನಿಜವಾರಸುದಾರರು. ಇಂದಿನ ಬಹುಜನರಲ್ಲಿ ಇರುವ ಅಪೂರ್ವ ಸಾಂಸ್ಕೃತಿಕ ಸಂಗತಿಗಳನ್ನು ಕಂಡಾಗ ಯಾರು ಆಶ್ಚರ್ಯಪಡಬೇಕಾಗಿಲ್ಲ. ಕೋಗಿಲೆ ಹಾಡುವುದನ್ನು, ಹುಲಿ ಬೇಟೆಯಾಡುವುದನ್ನು ಕಂಡು ಆಶ್ಚರ್ಯಪಡುವುದೇ? ಅಂತೆಯೆ ನಾನೂ ಈ ಜನಾಂಗದ ಪ್ರತಿನಿಧಿ ಎಂಬುದನ್ನು ನನ್ನ ಕವಿತೆಗಳು ಹೇಳುತ್ತವೆ. ಬಾಲ್ಯದಿಂದಲೂ, ಓದುವ, ಬರೆಯುವ, ಹಾಡುವ ಹವ್ಯಾಸಗಳೊಡನೆ ಬೆಳೆದ ನನಗೆ ಬಡತನ ಬಾಧಿಸಿತು. ಸುತ್ತಣ ಪರಿಸರವೂ ಸೇರಿದಂತೆ ಇದೇ ವಾಸ್ತವವೆಂಬಂತೆ ತೋರಿದ್ದರಿಂದಲೋ ಏನೋ ಹಳ್ಳಿಗಾಡಿನ ಪರಿಸ್ಥಿತಿ ಮತ್ತು ಮೂಲಜನರ ಜನಪದ ಸಂಸ್ಕೃತಿಯು ಅದನ್ನು ತೋರಗೊಡಲಿಲ್ಲ ಎನಿಸುತ್ತದೆ. ಶಾಲೆಯಲ್ಲಿನ ಕಲಿಕೆ ವಿಷಯಗಳೂ, ಮನೆ ಮತ್ತು ನೆರೆಹೊರೆಯವರ ಬದುಕಿನ ರೀತಿ ನೀತಿಗಳೂ ಪ್ರಾರಂಭದಿಂದಲೂ ನನ್ನನ್ನು ಗೊಂದಲಕ್ಕೀಡುಮಾಡಿದ್ದವು. ಯಾವುದು ಸರಿ? ಯಾವುದು ತಪ್ಪು? ಯಾಕೆ ಹೀಗೆ? ಎಂಬೆಲ್ಲಾ ವಿಚಿತ್ರಗಳೇ ಸೃಷ್ಟಿಯಾದವು. ಕೆಲವೊಮ್ಮೆ ಶಾಲೆಯಲ್ಲಿ ಕಲಿತದ್ದೇ ಶ್ರೇಷ್ಠವೆಂದು ಅನಿಸಿ, ಮನೆ, ನೆರೆ–ಹೊರೆ ಬಂಧುಗಳನ್ನು ನಿಂದಿಸುತ್ತಿದ್ದೆನು. ನನ್ನ ಜಾತಿಯ ಬಗ್ಗೆ ಕೀಳರಿಮೆ ಬೆಳೆದು ಮೇಲು ಜಾತಿಯವರ ಒಡನಾಟದಲ್ಲೇ ಬೆಳೆದದ್ದು ನಿಜ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲಿ ಕಾಲೇಜು ಮೆಟ್ಟಿಲು ಏರುವವರೆಗೂ ಸ್ವಜಾತಿಯವರೆಂದರೆ ತಾತ್ಸಾರ ಮನೋಭಾವ ಮನೆಮಾಡಿತ್ತು.

ನಂತರ ಸಂಘಟನೆ, ಹೋರಾಟ, ಪ್ರತಿಭಟನೆಗಳಲ್ಲಿ ಭಾಗವಹಿಸುವಿಕೆಯು ನನ್ನಲ್ಲಿ ಮತ್ತಷ್ಟು ಗೊಂದಲವೆಬ್ಬಿಸಿತು. ಹೋರಾಟದ ಹಾಡುಗಳು, ಹರತಾಳಗಳು ಸರಿ ತಪ್ಪನ್ನು ಯೋಚಿಸದಂಥ

ವಾತಾವರಣ ಸೃಷ್ಟಿಮಾಡಿದವು. ಅಂದಿಗೆ ಸಾಕ್ಷರವಾಹಿನಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಇಲ್ಲಿ ಜನಜೀವನ, ಸಾಮಾಜಿಕ ವ್ಯವಸ್ಥೆ, ಜಾತಿ ವ್ಯವಸ್ಥೆಯನ್ನು ಕಣ್ಣಾರೆ ನೋಡಿ, ಅನುಭವಿಸಿ ಅರಿಯುವ ಒಂದು ಉತ್ತಮ ಅವಕಾಶ ಆಗ ನನಗೆ ದೊರೆಯಿತು. ಈ ಅನುಭವವು ನನ್ನಲ್ಲಿ ಅತೀವ ಬದಲಾವಣೆಗೆ ಕಾರಣವಾಯಿತು. ಅಸಮಾನ ವ್ಯವಸ್ಥೆಯ ವಿರುದ್ಧವಾಗಿ ಮತ್ತು ಜನಾಂಗಕ್ಕಾಗಿ ಬರೆಯಬೇಕು, ಹಾಡಬೇಕು ಎಂಬ ಉದ್ದೇಶವನ್ನು ನನ್ನಲ್ಲಿ ದೃಢಗೊಳಿಸಿತು. ಅದಕ್ಕಾಗಿ ಹುಡುಕಾಟ ಆರಂಭವಾಯಿತು. ಈ ಹೊತ್ತಿಗಾಗಲೇ ಚಾಲ್ತಿಯಲ್ಲಿದ್ದ ದಲಿತ ಸಾಹಿತ್ಯ ಚಳುವಳಿಯ ನೆಲೆಗಟ್ಟಿನ ಬಗ್ಗೆ ನನಗೆ ಗೊಂದಲವಿತ್ತು. ಅದು ಅಂಬೇಡ್ಕರರ ಮೂಲ ಚಿಂತನೆಗಳ ನೆಲೆಗಟ್ಟಿನ ಮೇಲೆ ನಿಂತದ್ದಲ್ಲ ಎಂದು ನನಗೆ ಅನಿಸುತ್ತಿತ್ತು. ಹೀಗಾಗಿ ಅದರ ಬಗ್ಗೆಯೂ ನನಗೆ ಹಿಂಜರಿಕೆಯುಂಟಾಗಿ ನನ್ನ ಮನಸ್ಸು ತೀರ ಅಸಹಾಯಕತೆಯಿಂದ ನರಳಿತು.

ನಿರಾಶೆ ಹತ್ತಿರವಾಗ ತೊಡಗಿತು. ಬದುಕೇ ಬೇಸರವಾಗಿ ಇನ್ನೇನೂ ಮಾಡಲು ಸಾಧ್ಯವೇ ಇಲ್ಲ, ನಮ್ಮ ಜಾಯಮಾನವೇ ಇಷ್ಟು ಇಂಬ ತೀರ್ಮಾನಕ್ಕೆ ಬಂದು ಆತ್ಮಹತ್ಯೆಯೇ ಅಂತಿಮವೆಂದು ಆಲೋಚಿಸಿದ ದಿನಗಳೂ ಉಂಟು. ಆ ಸಂದರ್ಭದಲ್ಲಿ ಭಗವಾನ್ ಬುದ್ಧರ "ಮಾನವನ ಏಳಿಗೆಗೆ ಮಾನವನೇ ಶಿಲ್ಪಿ" ಮತ್ತು ಬಾಬಾ ಸಾಹೇಬರ "ನಿಮ್ಮ ಅದೃಷ್ಟವನ್ನು ನಂಬಬೇಡಿ ನಿಮ್ಮ ಶಕ್ತಿಯನ್ನು ನಂಬಿ"[18] ಎಂಬ ನುಡಿಮುತ್ತುಗಳೇ ನನಗೆ ಮರು ಜೀವಕೊಟ್ಟವು ಎಂಬುದನ್ನು ಮುಚ್ಚಿಟ್ಟರೆ ಸತ್ಯವನ್ನೇ ಮುಚ್ಚಿಟ್ಟಂತೆ" ಎನ್ನುವ ಕವಿಯ ಸುದೀರ್ಘ ಸ್ವಾ-ಅಭಿಪ್ರಾಯವು ಇಂದಿನ ಆಧುನಿಕೋತ್ತರ ಕನ್ನಡ ದಲಿತ ಕವಿಗಳಿಗೆ ಮಾರ್ಗದರ್ಶನವನ್ನೂ, ಪ್ರೇರಣೆಯನ್ನೂ ಒದಗಿಸುತ್ತದೆ.

ಈ. ಆಧುನಿಕೋತ್ತರ ಕಾವ್ಯದಲ್ಲಿ ಮಾಲಗತ್ತಿಯವರ ಜೀವ-ಧರ್ಮದ ಸಂವೇದನೆ:

ಕವಿ ಅರವಿಂದ ಮಾಲಗತ್ತಿ ಅವರು ಜಾನಪದ, ಶಿಷ್ಟಗಳಿಂದ ತಮ್ಮ ಕವಿತೆಯನ್ನು ಬೆಳೆಸಿಕೊಂಡವರಷ್ಟೇ ಅಲ್ಲದೆ ಜನಾಂಗದ ಸ್ಮೃತಿಕೋಶದಿಂದ ತಮ್ಮ ಕಾವ್ಯ ಜೀವಕೋಶಕ್ಕೆ ಹತ್ತಾರು ಎಳೆಗಳನ್ನು ಪಡೆದವರು. ಇದು ಪ್ರತಿಯೊಬ್ಬ ಕವಿ ಮಾಡುವ 'ಜೀವಧಾತು'ವಿನ ನೆಲೆಯೇನೋ ಹೌದು! ಆದರೆ, ಅರವಿಂದ ಮಾಲಗತ್ತಿಯವರ ಕವಿಪ್ರತಿಭೆಯ ಲ್ಲಿ ಹಲವು ರೂಪಕಗಳನ್ನು ಕಂಡಿದೆ; ಹಲವು ಪ್ರತಿಮೆಗಳನ್ನು ಕಂಡಿದೆ; ಹಲವು ಪ್ರತಿರೋಧಗಳನ್ನು ಕಂಡಿದೆ. ಬಂಡಾಯ ರೂಪಕಗಳು ಹೊರಗಡೆಯಿಂದ ಹಾಸುಹೊಕ್ಕಾಗಿ ಬರುವುದು ಒಂದು ಕಡೆಯಾದರೆ; ತನ್ನ ಜನಾಂಗದ ಜೀವಧಾತುವಿನಿಂದಲೇ ಬಂಡಾಯ ರೂಪಕಗಳನ್ನು ಕಂಡುಕೊಳ್ಳುವುದು ಇನ್ನೊಂದು ಬಗೆ! ಈ ಬಗೆಯನ್ನು ಮಾಲಗತ್ತಿ ಹಿಡಿದಿರುವಷ್ಟು ಸಮರ್ಥವಾಗಿ ನಮ್ಮ ದಲಿತ-ಬಂಡಾಯ ಕವಿಗಳಲ್ಲಿ ಈ ಪ್ರಮಾಣದಲ್ಲಿ ಯಾರೂ ಕಂಡುಕೊಂಡಿಲ್ಲ; ಕಂಡರಿಸಿಲ್ಲವೆಂಬುದು ನನ್ನ ಭಾವನೆ"[19] ಎನ್ನುವ ನಾಡಿನ ಹಿರಿಯ ಲೇಖಕರಾದ ಮಲ್ಲೇಪುರಂ ಜಿ. ವೆಂಕಟೇಶರ ಅಭಿಪ್ರಾಯವನ್ನು ನೆನಪು ಮಾಡಿಕೊಳ್ಳುತ್ತಾ: ಮಾಲಗತ್ತಿಯವರ ಕೃತಿಗಳು ಮುಖ್ಯವಾಗಿ ವ್ಯಕ್ತಿ, ಸಮಾಜ, ಸಂಸ್ಕೃತಿ, ಸರ್ಕಾರ, ರಾಷ್ಟ್ರ, ಜಾತಿ, ಧರ್ಮದ ಅಂಶಗಳ ಬಗೆಗಿನ ವಸ್ತು-ವಿಷಯಗಳನ್ನು ಒಳಗೊಂಡಿದೆ. ಕಾವ್ಯ, ಇತಿಹಾಸ ಮತ್ತು

ಸಿದ್ಧಾಂತ ಈ ಮೂರರ ನಡುವೆ ಒಂದಕ್ಕೊಂದು ಸಾಮಯವ ಸಂಬಂಧಗಳಿವೆ. ಕಾವ್ಯವು ಆನಂದದಾಯಕ ಎಂತಲೋ ಶೈಕ್ಷಣಿಕ ಶಿಸ್ತೆಂದೊ ತಿಳಿದ ಒಂದು ಕಾಲವಿತ್ತು. ಆದರೆ, ಇಂದು ಕಾವ್ಯವು ಜೀವನ ಮುಖವಾದುದು, ನಮ್ಮ ಅರಿವಿನ ವಿಸ್ತರಣೆಯೆಂತಲೂ ತಿಳಿದಿದ್ದು 'ಕಾವ್ಯ'ವನ್ನು ನೋಡುವ ಬಗೆಗಳು ಬದಲಾದುವು. ಕವಿಯ ದೃಷ್ಟಿ, ಸಾಮಾಜಿಕ ದೃಷ್ಟಿ, ಸಾಂಸ್ಕೃತಿಕ ದೃಷ್ಟಿ ಇನ್ನು ಮುಂತಾದ 'ನೆಲೆ'ಗಳು ಬಂದು ಕೂಡುವುದು ಇದಕ್ಕಾಗಿಯೇ. ಅರವಿಂದ ಮಾಲಗತ್ತಿಯವರ ಕವಿತೆಗಳ ಬಗೆಗೆ ಒಂದು ಚಾರಿತ್ರಿಕ, ಸೈದ್ಧಾಂತಿಕ ಅಭ್ಯಾಸ ಈ ಕೃತಿಯಲ್ಲಿ ನಡೆದಿದೆ. ಈಗಣ ನಮ್ಮ ವಿಮರ್ಶೆಯಲ್ಲಿ ಕಂಡುಬರುವ 'ತಾತ್ವಿಕರೋಷ'ದಿಂದ ಅಥವ 'ವೈಚಾರಿಕ ದೋಷ'ದಿಂದ ಕವಿತೆಯ ಮೇಲೆ ಹರಿಹಾಯುವ ಪದ್ಧತಿ ಇಲ್ಲಿಲ್ಲ! ಅದರ ಬದಲು ಕವಿತೆ ಪಡೆದುಕೊಳ್ಳುತ್ತಿರುವ ಚಾರಿತ್ರಿಕ ನೆಲೆಗಳನ್ನೂ ಹಾಗೂ ಕವಿತೆ ಪಡೆಯಲು ಹಂಬಲಿಸುವ ತಾತ್ವಿಕ ಚರ್ಯೆಗಳನ್ನು ಆಧುನಿಕೋತ್ತರ ಕಾಲದಲ್ಲಿ ಹೊಸದಾಗಿ ಬರೆಯಲು ಮುಂದಾಗಿರುವ ಜೀವತತ್ವದಲ್ಲಿ ಸಂಪೂರ್ಣ ಒಲವಿರುವ ಆಧುನಿಕೋತ್ತರ ಬರಹಗಾರರು ಮಾಲಗತ್ತಿಯವರನ್ನು ಗಾಢವಾಗಿ ಅನುಸರಿಸುವ ಮೂಲಕ ತಮ್ಮ ಕಾವ್ಯ ಪ್ರತಿಭಾ ನೆಲೆಯನ್ನು ವಿಸ್ತಾರಗೊಳಿಸಿಕೊಳ್ಳಬಹುದಾಗಿದೆ. ಅದು ಮಾಲಗತ್ತಿಯವರೊಳಗೆ ಅಡಗಿರುವ ಕಾವ್ಯ 'ಪರಿಗ್ರಹಣ ಪ್ರಜ್ಞೆ' ಅದನ್ನು ಸಾಕ್ಷೀಕರಿಸುತ್ತದೆ.

ದಲಿತ ಕಾವ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಪ್ರವೇಶ ಪಡೆದು ಆಧುನಿಕ ಕನ್ನಡ ಕಾವ್ಯವನ್ನೇ ಮೀರಿ ನಿಂತ ಕನ್ನಡ ಕವಿ ಮಾಲಗತ್ತಿ. ಅವರ ಸಮಗ್ರ ಕಾವ್ಯವನ್ನು ಇತ್ತೀಚಿನ 'ವಿಶ್ವತೋಮುಖ ಹೂ ಬಲು ಭಾರ' ಕೃತಿ ಈ ನೆಲದ ಕಸುವಿನೊಂದಿಗೆ ಬೇಕು ಬೇಡಗಳನ್ನು ವಿಷಧೀಕರಿಸುವ ಕನ್ನಡ ಕಾವ್ಯಮೀಮಾಂಸೆಯೇ ಆಗಿದೆ. ಹಿಂದಿನಿಂತಲೂ ಕನ್ನಡ ಕಾವ್ಯವನ್ನು ಭಾರತೀಯ ಕಾವ್ಯ ಮೀಮಾಂಸಾ ನೆಲೆಗಟ್ಟಿನಲ್ಲೇ ಚರ್ಚಿಸಲಾಗಿದೆ. ಭಾರತೀಯ ಕಾವ್ಯಮೀಮಾಂಸೆ ಅಂದರೆ ಅದು ಸಂಸ್ಕೃತ ಮೀಮಾಂಸೆ. ಇದರ ತತ್ವಗಳನ್ನೇ ಕನ್ನಡ ಕಾವ್ಯಕ್ಕೂ ಬಳಸಿ ಚರ್ಚಿಸಿ ಅಧ್ಯಯನ ಮಾಡಲಾಗುತ್ತಿದೆ. ಇದರಿಂದಾಗಿ ಕನ್ನಡ ಕಾವ್ಯ ಸಂಸ್ಕೃತ ಕಾವ್ಯಮೀಮಾಂಸೆಯ ತತ್ವಗಳ ಮೇಕಪ್ಪಿನಿಂದ ಬಹುದೂರ ಸಾಗಿ ಇತ್ತೀಚೆಗೆ ಆಧುನಿಕೋತ್ತರ ಕನ್ನಡ ಕಾವ್ಯದ ಮೂಲಕ ಹೊರಗೆ ಬಂದಿದೆ ಎನ್ನುವುದು ವಾಸ್ತವ. ಅರವಿಂದ ಮಾಲಗತ್ತಿ ಅವರ ಕಾವ್ಯ ಕೃಷಿಯನ್ನು ಗಮನಿಸಿದ ಮೇಲೆ ಇವತ್ತಿನ ಆಧುನಿಕೋತ್ತರ ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ಈ ಕವಿ–ಕಾವ್ಯಗಳ ಸ್ಥಾನವೇನು? ಎಂಬ ಪ್ರಶ್ನೆ ಕಾಡುವುದು ಸ್ವಾಭಾವಿಕ. ಇದರ ಉತ್ತರಕ್ಕಾಗಿ ಅವರ ಆಧುನಿಕೋತ್ತರ ಕನ್ನಡ ಕಾವ್ಯಾವಲೋಕನದ ಪ್ರಯತ್ನ ಹೀಗಿದೆ.

ಅರವಿಂದ ಮಾಲಗತ್ತಿಯವರ ಕಾವ್ಯ ಸಂವೇದನೆ:

ಮಾಲಗತ್ತಿಯವರ ಪ್ರಕಟಿತ ಕಾವ್ಯಗಳು ಆರು. 'ಮೂಕನಿಗೆ ಬಾಯಿ ಬಂದಾಗ', 'ಕಪ್ಪು ಕಾವ್ಯ', 'ಮೂರನೆಯ ಕಣ್ಣು', 'ನಾದ–ನಿನಾದ', 'ಸಿಲಿಕಾನ್ ಸಿಟಿ ಮತ್ತು ಕೋಗಿಲೆ', ಮತ್ತು 'ಶ್ರೀ ಚಂಡಾಲ ಸ್ವರ್ಗಾರೋಹಣಂ'. ಈ ಮೇಲಿನ ಆರು ಕೃತಿಗಳಲ್ಲಿ ಚೌಕಟ್ಟಿನ ಮಿತಿಯಿಂದ ಅವರ 'ನಾದ–ನಿನಾದ'(1999–2000) 'ಸಿಲಿಕಾನ್ ಸಿಟಿ ಮತ್ತು ಕೋಗಿಲೆ',(2003) ಹಾಗೂ 'ಶ್ರೀ ಚಂಡಾಲ ಸ್ವರ್ಗಾರೋಹಣಂ'(2004) ಮೂರು ಕೃತಿಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

1. ಕಾಲ–ಕಾವ್ಯಗಳ ಸಂಮಿಶ್ರ: 'ನಾದ–ನಿನಾದ':

ನಾದ–ನಿನಾದ (1999–2000) ಮಾಲಗತ್ತಿ ಅವರ ನಾಲ್ಕನೆಯ ಕವನ ಸಂಕಲನ. ಇದನ್ನು ಶಬ್ದ ಗಾರುಡಿಗ ನಾದದ ಮೋಡಿಗಾರ ಎಂದೆಲ್ಲ ತಮ್ಮ ಕಾವ್ಯದಿಂದ ಜನಮನಗೆದ್ದ ಅಪರೂಪದ ಕವಿ ದ.ರಾ.ಬೇಂದ್ರೆಯವರಿಗೆ ಅರ್ಪಿಸಿರುವುದು ಈ ಕೃತಿಯ ವಿಶೇಷ. ಇಲ್ಲಿಯ ಬಹುಪಾಲು ಕವನಗಳು ಹಾಡಾಗಿ, ಹಾಡಿಗಾಗಿ ರಚನೆಯಾದವು. ಇವು ಭಾವಗೀತೆಗಳಾಗಿವೆ ಎಂಬುದನ್ನು ಕವಿಯೇ ಸ್ಪಷ್ಟಪಡಿಸಿದ್ದಾರೆ. ಇವರು 'ನಾದ–ನಿನಾದ' ಕೃತಿ ಮತ್ತು ಶೀರ್ಷಿಕೆಗೆ ಮುನ್ನುಡಿಯಲ್ಲಿ ತಮ್ಮದೇ ಆದ ಅರ್ಥಭಾವಗಳಿಂದ ವ್ಯಾಖ್ಯಾನ ನೀಡಿದ್ದಾರೆ. "ನಾನಲ್ಲದ ನಾನೊಬ್ಬ ನನ್ನೊಳಗಡೆ ಇದ್ದಾನೆ, 'ನಾನು' ಎನ್ನುವ ಈ 'ಅಹಂ' ಎಂಬುದಿದೆ...' ಈ ಇರುವಿಕೆ ಕಳೆಯುವಿಕೆಯು ಜೊತೆಗೆ ಇನ್ನೊಂದು ಆಗುವಿಕೆಯೂ ಇರುತ್ತದೆ. ಈ ಆಗುವಿಕೆಯ ನಾನು ಇರುವಿಕೆಯ ಅಥವಾ ಕಳೆಯುವುವಿಕೆಯ ನಾನುಗಿಂತ ದೊಡ್ಡವನು. ಈತನಲ್ಲಿ ಅಹಮಿಕೆ ಇಲ್ಲ. ಕಳೆಯುವಿಕೆ ಉಳಿಯುವಿಕೆಯಲ್ಲಿ ಈತ ನಿತ್ಯನೂತನವಾದವನು. ಈತನಿಗೆ ಬಣ್ಣವಿಲ್ಲ ಗುಣವಿಲ್ಲ ಆಕಾರವಿಲ್ಲ. ಆತನೇ ನಾದ ಆತನೇ ನಿನಾದ 'ಆತನಲ್ಲಿ ಎಲ್ಲವೂ ಇದೆ ಮತ್ತು ಆತನಲ್ಲಿ ಯಾವುದೂ ಇಲ್ಲ ಆತನೇ ಸ್ಥಿತಪ್ರಜ್ಞ' ಈ ಹಿನ್ನೆಲೆಯಲ್ಲಿ ಇಲ್ಲಿಯ ಕವಿತೆಗಳೆಲ್ಲ ಬಹುಮುಖಿ ಸ್ವರೂಪದವು.

'ನಾನಲ್ಲದ ನಾನೊಬ್ಬ ನನ್ನೊಳಗಡೆ ಇದ್ದಾನೆ' ಎಂದ ಲೇಖಕರು ಅದರ ವಿಶ್ಲೇಷಣೆ ಮಾಡುತ್ತಾ ಸಾಗಿ 'ಆತನೇ ನಾದ ಆತನೇ ನಿನಾದ' ಎನ್ನುವಲ್ಲಿಗೆ ತಲುಪಿದ್ದಾರೆ. ಅಂದರೆ ಮಾಲಗತ್ತಿಯೊಳಗಿನ ಕವಿತ್ವ ಪ್ರತಿಭೆ ಶಕ್ತಿಯನ್ನು ಕುರಿತು ಆಡಿದ ಮಾತಾಗಿದೆ. ಇದರ ಅಮೂರ್ತ ಶಕ್ತಿಯೆ ನಾದ–ನಿನಾದವಾಗಿದೆ. ಹಾಗಾಗಿ ಕವಿಯ ಮೇಲಿನ ವಿವರಣೆಯಿಂದ ಕವಿಯ ಮತ್ತು ಅವರ ಕಾವ್ಯದ ಚಲನಶೀಲ ತಾತ್ವಿಕ ಗುಣಗಳು ಗ್ರಹಿಕೆಗೆ ಸಿಕ್ಕುತ್ತವೆ. ಹಾಗಾಗಿ ನಾದ–ನಿನಾದ ಕಾಲ, ಕಾವ್ಯ, ಸಂಸ್ಕೃತಿಗಳ ವಿಷಯ, ವಿಚಾರಗಳನ್ನೊಳಗೊಂಡ ಮಿಶ್ರಣ ಕೂಟ ಕಾವ್ಯವಾಗಿದೆ. ಏಕೆಂದರೆ ಇದು ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ವರ್ಷಗಳ ಕಾವ್ಯ ಕೃತಿ. ಇದರಲ್ಲಿ ದಲಿತ–ಬಂಡಾಯ, ಮಹಿಳಾವಾದಿ ನೆಲೆಯ ಮತ್ತು ನವೋದಯ ಕಾಲದ ಭಾವಗೀತೆಗಳು, ನವ್ಯ ಜಾನಪದ ರೀತಿಯ ಕವನಗಳನ್ನು ಒಳಗೊಂಡಿದ್ದು; ಒಂದು ಸಂಮಿಶ್ರ ಕಾವ್ಯವೆನ್ನಲು ಅಡ್ಡಿಯಿಲ್ಲ.

ಮೊದಲಿಗೆ ದಲಿತ–ಬಂಡಾಯ ಧೋರಣೆಯ ಪದ್ಯಗಳೆಂದರೆ 'ಒಬ್ಬ ತಂದೆಯ ಹಾಡು, ಮುಳುಗದ ಸೂರ್ಯ, ಅಂಗಳ, ಭೂತನೃತ್ಯ, ಕೂಲಿಕಾರನ ಮೌನಗೀತೆ, ಹನಿಯಾಗುವಾ, ಬಾಲ

ಕಾರ್ಮಿಕರು, ಇತಿಹಾಸದ ಒಂದು ಜೋಕಾಲಿ, ಗೋಳಿಬಾರ–1980, ಮೀಸಲಾತೆವ್ವ ಮುಂತಾದವು. ಇವುಗಳಲ್ಲೆಲ್ಲ ಅಸಮಾನತೆಯ, ಶೋಷಿತರ ವಿರುದ್ಧದ ಪ್ರತಿಭಟನೆಯ ಧ್ವನಿಯಿದೆ. ಈ ಬಂಡಾಯ ಮನೋಧರ್ಮ ದಲಿತೇತರರಿಗಿಂತ ದಲಿತರಲ್ಲಿ ಭಿನ್ನ ಅನುಭವಗಮ್ಯವಾಗಿ ಅಭಿವ್ಯಕ್ತಿಗೊಳ್ಳುತ್ತದೆ. 'ಒಬ್ಬ ತಂದೆಯ ಹಾಡು' ಕವನದ ತಂದೆ ತನ್ನ ತಾತ ಮುತ್ತಾತಂದಿರು ಜಾತಿ ಸಮಾಜದ ಅಸಮಾನ ವ್ಯವಸ್ಥೆಯ ಸುಳಿಗೆ ಸಿಕ್ಕಿ ಸತ್ತಂತೆ ತನ್ನ ಮಗನ ಬದುಕು ಆಗದಿರಲೆಂದು ಎಚ್ಚೆತ್ತ ತಂದೆ ಮಗನ ಓದಿಗೆ ಶ್ರಮಪಡುತ್ತಾನೆ.

"ಸತ್ತ ದನ ಹೊರುವೆ
ಕುರಿಕೋಳಿ ಮಾರುವೆ
ಹೆಂಡಕ್ಕೆ ಮುಂಡ ಮುಚ್ಚುವೆ
ಹೊಡೆವರೆನ್ನ ಹೊಡೆಯಲಿ
ಮೈ ಚರ್ಮ ಕಿತ್ತು ಬರಲಿ
ಓದು ನೀನೋದು ಮಗನೆ ಓದು"[20]

ಅಂಬೇಡ್ಕರ್ ಅವರಿಂದ ಓದಿನ ಮಹತ್ವವನ್ನು ಅರಿತ ಅಪ್ಪ ತನ್ನ ಮಗ ಓದಿ ಸೂಟು–ಬೂಟುಗಳ ತೊಟ್ಟು ಮೇಲ್ಜಾತಿಯವರ ಸಮನಾಗಿ ಬದುಕಬೇಕೆಂದು ಹಂಬಲಿಸಿ ತಾನು ಅನುಭವಿಸಿದ ನೋವಿಗೆ, ಅಪಮಾನಕ್ಕೆ ಮಗನಿಂದ ಪ್ರತೀಕಾರದ ಉತ್ತರ ಬಯಸುತ್ತಾನೆ. "ನೀನಾಡಿದ ಮಣ್ಣಲಿ ನಾನುಳುವ ಭೂಮಿಯಲಿ ನೀ ಕೇಳಬೇಕು ಬಾಸುಂಡೆಗುತ್ತರ" ಎಂಬ ಹಿರಿಯರ ಆಶೀರ್ವಾದೊಳಗಿನ ನೋವಿನ ಕುದಿ ವಿಷಾಧವಾಗಿ ಹೊರಹೊಮ್ಮುತ್ತದೆ. ಈ ಬಂಡಾಯದ ಆತ್ಮಗೌರವದ ಮಾತುಗಳು ಸ್ವಾಭಿಮಾನದಿಂದ ಬಂದದ್ದು. ಇದರ ಆದರ್ಶ, ಮಾರ್ಗದರ್ಶನ ಅಂಬೇಡ್ಕರ್ ಅವರದು. ಹಾಗಾಗಿ ತನಗಿಲ್ಲದ ಧ್ವನಿಯನ್ನು ತನ್ನ ಮಗನಿಗೆ ವಿದ್ಯೆಯ ಜ್ಞಾನದ ಮೂಲಕ ತುಂಬುತ್ತಾನೆ. ವಿದ್ಯೆ ಕಲಿತ ಮಗ ಸ್ವಾಭಿಮಾನದ ನಿರ್ಭೀತಿಯ ನಡೆನುಡಿಗಳನ್ನು ಕಂಡ ಮಾನವಂತನಾಗಿ ಬಾಳುವ ಹಂತಕ್ಕೆ ಬರುವುದರ ಹಿಂದೆ ದಮನಿತರ ಸಾಗರದಷ್ಟು ನಿಟ್ಟುಸಿರಿದೆ.

"ಜೀತಕ್ಕಾಗಿ ಬರುತಿದ್ದ ನಿಮ್ಮ ಅಪ್ಪ ನಮ್ಮ ಕೇರಿಗೆ
ತಗ್ಗಿ ಬಗ್ಗಿ ನಡೆಯುತ್ತಿದ್ದ ಎಂಥ ವಿನಯ ಅವನಿಗೆ,
ವೀಳ್ಯದೆಲೆಯ ತಿನ್ನುವಾಗ ಕೈಯ ಚಾಚಿ ಬೇಡುತ್ತಿದ್ದ
ಎತ್ತಿ ನೀರು ಹಾಕುತ್ತಿದ್ದೆವು ಬಗ್ಗಿ ಸಲಾಮ ಮಾಡುತ್ತಿದ್ದ."[21]

ತಗ್ಗಿ ಬಗ್ಗಿ ನಡೆಯುತ್ತಿದ್ದ ಎಂಥ ವಿನಯ ಅವನದು ಎಂಬ ಮಾನವಂತನ ಮಾತಿನಲ್ಲಿ ಆ ಹುಡುಗನನ್ನು ನಿಮ್ಮಪ್ಪನ ವಿನಯ ನಿನ್ನಲ್ಲಿ ಯಾಕಿಲ್ಲವೆಂಬ ಪ್ರಶ್ನೆ ಇದೆ. ಇದರಿಂದ ಕಳೆದ ತಲೆಮಾರಿಗಿಂತ ಈ ತಲೆಮಾರಿನ ದಲಿತ ಮಕ್ಕಳ ಪರಿವರ್ತನೆ ಸ್ಪಷ್ಟವಾಗಿದೆ. ಏಕೆಂದರೆ ಕಳೆದ

ತಲೆಮಾರಿನ ದಲಿತರೇನು ಇವತ್ತಿಗೂ ಹಳ್ಳಿಗಳ ದಲಿತರು ಅಮಾನವೀಯ ಸಂಸ್ಕೃತಿಯುಳ್ಳ ಮೇಲ್ಜಾತಿಯ ಜನರ ಹಂಗಿಗೆ ಸಿಕ್ಕಿ ನಲುಗುತ್ತಿದ್ದಾರೆ. ಅವರ ಹಿಂಸೆಯಿಂದ ಬಿಡಿಸಿಕೊಳ್ಳಲಾಗದೆ, ಪ್ರಶ್ನಿಸಲಾಗದೆ ಚನಿಯನಂತಹ ದಲಿತರು, ತಮ್ಮ ಧಣಿಗಳ ಎದುರು ವೇಷ ಮರೆಸಿ ಕುಣಿದು ಬೇಡಿ ಬದುಕುತ್ತಿದ್ದಾರೆ. ಅವರನ್ನು ಕಂಡ ಕವಿ: "ಒಂದಲ್ಲಾ ಒಂದಿನಾ ವೇಷ ಕಳಚಿ ಈ ಜನ ಇದೇ ಕುಣಿತ ಹಗಲು ಕುಣಿದು ನ್ಯಾಯ ಕೇಳ್ವರು ಹಕ್ಕು ಕಿತ್ತಿಕೊಳುವರು" ಎನ್ನುವ ಈ ಮಾತಿನ ಆಂತರ್ಯದಲ್ಲಿ ಕವಿ ಆಶಾವಾದಿತನವಿದ್ದು ನನ್ನ ಜನ ಒಂದಲ್ಲ ಒಂದು ದಿನಾ ಅವರ ಹಕ್ಕು, ನ್ಯಾಯವನ್ನು ಕೇಳಿ ಪಡೆವರೆಂಬ ದೃಢತೆ ಇದೆ. ಈ ಭಾವದ ಹಿಂದೆ ಮಾನವೀಯ ತತ್ವದ ಬನಿ ಇದೆ.

ಆದ್ದರಿಂದಲೇ; "ಹರಿವ ನೀರಾಗುವಾ ನಾವು ಕಡಲಾಗುವಾ ಹೊಸ ನಿಮಿಷದಿ ಹೊಸ ಮನುಕುಲವಾಗುವಾ" ಕವಿಯ ಈ ಹಂಬಲದ ಮೂಲ ಸೆಲೆ ಮಾನವೀಯ ತತ್ವದ್ದು. ಹರಿವ ನೀರು ಮತ್ತು ಕಡಲು ವಿಶಾಲತೆಯ, ಶುದ್ಧ ಸಮೃದ್ಧತೆಯ ಸಂಕೇತ, ಅದರಂತೆ ಹೊಸ ಮನುಷ್ಯ ಕುಲವಾಗಿ ಬಾಳುವ ಬಯಕೆ ಮಹತ್ವದ್ದು. ಇದು ಕವಿ ಮತ್ತು ಕಾವ್ಯದ ಮೂಲ ತತ್ವ ಆದಂತೆ; ದಲಿತ–ಬಂಡಾಯ ಸಾಹಿತ್ಯದ ಮೂಲ ಸತ್ವ–ತತ್ವವೂ ಆಗಿದೆ. 'ನಾದ–ನಿನಾದ' ಸಂಕಲನದಲ್ಲಿ ಕವಿ ಮಹಿಳೆಯರ ಜೀವನ ಶೋಧನೆಯಿಂದ ಕರಗುವ ಮನದಲಿ ಸ್ಪಂದಿಸುವ ಕವನಗಳೆಂದರೆ, ಬೆಳ್ಳಿಕೂದಲು, ಓ ನನ್ನ ಕೈಗಳೇ, ಕೊಂದವರು ಯಾರು? ಹಂಬಲ, ಹೊಸ್ತಿಲಾದವರು, ಕುಂಕುವ ಮುಂತಾದುವು. ಹಾಗೆ ನೋಡಿದರೆ ದಲಿತರ ಬದುಕಿನಂತೆ ಭಾರತೀಯ ಮಹಿಳೆಯ ಬದುಕು ಆಗಿದೆ. ಹಾಗಾಗೇ ಕವಿಯ ಬಂಡಾಯ ಮನೋಧರ್ಮದ ಸೋಂಕು ಮಹಿಳೆಯರ ಬಗ್ಗೆ ಬರೆಯುವಾಗಲು ಪ್ರತಿಫಲಿಸಿದೆ. ಬುದ್ಧ–ಭಾವಗಳುಳ್ಳ ಕವಿಯ ಮನಸ್ಸಿಗೆ ಹೆಣ್ಣಿನ ಹೃದಯವಂತಿಕೆ ಬೆರೆತಾಗ ಮಹಿಳಾ ಧ್ವನಿಯ ಕಾವ್ಯ ಸೃಷ್ಟಿಯಾಗುತ್ತದೆ. 'ಓ ನನ್ನ ಕೈಗಳೇ ದನಿ ಎತ್ತಿ ಬನ್ನಿ, ಆಕಾಶಕಪ್ಪಳಿಸಿ ಬೆಂಕಿ ಮಳೆ ತನ್ನಿ' ದಲಿತರು ಮತ್ತು ಮಹಿಳೆಯರು ಅಸಮಾನತೆ ಶೋಷಣೆಯಿಂದ ನೊಂದು ಸಿಡಿದೆದ್ದ ಧ್ವನಿಗಳು ಮೇಳೈಸಿದ ಪದಗಳೇ ಆಕಾಶಕಪ್ಪಳಿಸಿ, ಬೆಂಕಿ ಮಳೆ ತನ್ನಿ ಇವು ಕವನದಲ್ಲಿ ಹೆಣ್ಣಿನ ಕನಸು, ಮನಸುಗಳೆಲ್ಲ ಸುಟ್ಟು ಮಣ್ಣಾದದ್ದರ ಆಕ್ರೋಶದ ಪ್ರತಿಕ್ರಿಯೆಯುಳ್ಳವು ಹಾಗೂ ಪ್ರತಿಮೆ, ಸಂಕೇತಗಳುಳ್ಳ 'ಓ ನನ್ನ ಕೈಗಳೇ' ಕವನ ನಾನಾ ಶಬ್ದಾರ್ಥದ ಹೂರಣವಾಗಿದೆ.

ಇಂದಿನ ಯುವ ಪೀಳಿಗೆ ಸಾಂಸ್ಕೃತಿಕ ಆಸಕ್ತಿಗಿಂತ ಬಂದೂಕಿನ ಕಡೆಗೆ ಆಸಕ್ತಿ ತೋರುತ್ತಿರುವುದು ಅಪಾಯಕಾರಿ. ಬಂದೂಕು ಮತ್ತು ಕಲ್ಲು, ಮಣ್ಣು, ಮರಳು ಕರಗಿಸುವ, ಕರಗಿಸಿ ನೀರಾಗಿ ಹರಿಸುವ ಸಂವೇದನೆಯೂ ಕಾವ್ಯ ಮೈಗೂಡಿಸಿಕೊಂಡಾಗ ಬದುಕಿಗೆ ಹತ್ತಿರವಾಗುತ್ತದೆ. ಬದುಕಿಗೆ ಹತ್ತಿರವಲ್ಲದ ವಿಚಾರ, ಕಾವ್ಯ ಎರೆಡೂ ವ್ಯರ್ಥ ಮತ್ತು ಒಂದು ರೀತಿಯಲ್ಲಿ ಇಂದಿನದು ಸಾಂಸ್ಕೃತಿಕ ಬಿಕ್ಕಟ್ಟಿನ ಕಾಲ, ಜೀವನ ಶೈಲಿಯನ್ನೇ ಪಲ್ಲಟಗೊಳಿಸುತ್ತಿರುವ ಕಾಲ. ಇಂಥಲ್ಲಿ ಕಾವ್ಯ ಸಕಾಲಿಕವಾಗಿರಬೇಕು, ಅಕಾಲಿಕವಾಗಿರಬಾರದು, 'ಸಾರ್ವಕಾಲಿಕ ಎನ್ನುವುದು ಭ್ರಮೆ'. ಆದರೆ ಆ ಆಶಯ ಅದರಲ್ಲಿರುವುದು ತಪ್ಪಲ್ಲ ಆದರೆ ಬದುಕೇ ಹಾಗೆ ಗ್ರಹಿಸುವುದು ಸಮರ್ಥನೀಯವಲ್ಲ ಎನ್ನುವ ವಿಚಾರದಿಂದ ಆಧುನಿಕೋತ್ತರ ಕನ್ನಡ ಕಾವ್ಯ ಮತ್ತಷ್ಟು ಆಧುನಿಕ ಕಾಲದ ವಿಷಮ

ಪರಿಸ್ಥಿತಿಯ ಕಡೆಗೆ ಯುವ ಸಾಹಿತ್ಯಾಸಕ್ತರು ಕಟ್ಟೆಚ್ಚರದಿಂದಿರಬೇಕು. ಇಲ್ಲದಿದ್ದರೆ ಭ್ರಷ್ಟ ವ್ಯವಸ್ಥೆ ಅದೆಷ್ಟು ಪ್ರತಿಕೂಲ ವಾತಾವರಣವನ್ನು ಸೃಷ್ಟಿಸಿ ಅದರಿಂದ ಹೊರಬರಲಾಗದ ತಮ್ಮ ಪಟ್ಟಭದ್ರ ಕಬಂಧ ಭಾಹುಗಳಲ್ಲಿ ಇಟ್ಟುಕೊಳ್ಳಬಹುದು ಎನ್ನುವುದನ್ನು ವಿಷಧೀಕರಿಸಿದ್ದಾರೆ. ಜೊತೆಗೆ ಕೃತಿಯಲ್ಲಿ ನವೋದಯದ ರೋಮ್ಯಾಂಟಿಕ್ ಕಾವ್ಯಗಳಿರುವುದು ವಿಶೇಷ. 'ಪ್ರೀತಿ ಮಾತು', 'ಮಾತಾಡು ಮಲ್ಲಿಗೆ', 'ಭಗ್ನ ಗೀತೆ', 'ಮಾವನ ಮಗಳು', 'ಬಾನಂಗಳ ಬೆಳಕು', 'ಮೊದಲ ಚುಂಬನ', 'ಪ್ರಕೃತಿ', 'ತಾಯಿ', 'ನಾಡು', 'ದೇಶ' ಹೀಗೆ ಹಲವಾರು ವಿಷಯ ವಿಚಾರಗಳನ್ನು ಕುರಿತ ಭಾವಗೀತೆಗಳೂ ಇವೆ.

2. ಮಾನವತ್ವದ ಸಿರಿಯ ಸರ–'ಸಿಲಿಕಾನ್ ಸಿಟಿ ಮತ್ತು ಕೋಗಿಲೆ'

ಕವಿ ಮಾಲಗತ್ತಿ ಅವರ ಐದನೆ ಕವನ ಸಂಕಲನ 'ಸಿಲಿಕಾನ್ ಸಿಟಿ ಮತ್ತು ಕೋಗಿಲೆ'. ಕೃತಿ ಮುಖ್ಯವಾಗಿ ತೃತೀಯ ಜಗತ್ತಿನ ಪರವಾದ ಧೋರಣೆಯನ್ನು ಬಿಟ್ಟುಕೊಡುವುದಿಲ್ಲ ಎನ್ನುವುದು ಗಮನಾರ್ಹವಾದ ಸಂಗತಿ. ಶೀರ್ಷಿಕೆಯಲ್ಲಿ 'ಸಿಲಿಕಾನ್ ಸಿಟಿ' ಇಂದಿನ ಹೊರ ರಾಷ್ಟ್ರಗಳ ಆಧುನಿಕತೆಯ ವಿಜ್ಞಾನ ತಂತ್ರಜ್ಞಾನವುಳ್ಳ ಹೈಟೆಕ್ ನಗರದ ಇಂದಿನ ನಾಗರಿಕ ಸಮಾಜವಾದರೆ; ಕೋಗಿಲೆ ಭಾರತೀಯ ಗ್ರಾಮ ಸಮಾಜದ ಸಂಕೇತವಾಗಿದೆ.

"ಪ್ರಪಂಚವೇ ಒಂದು ಗ್ರಾಮ
ಇಂಡಿಯಾ ಎಂಬುದೊಂದು ಹರಿಜನ ಕೇರಿ
ಈ ಭಾರತೀಯನೇ ಆ ಕೇರಿಯಲಿ ಅಸ್ಪೃಶ್ಯ
ತನ್ನನ್ನು ತಾನೇ ಪರಕೀಯರಿಗೆ ಅಡವಿಟ್ಟುಕೊಂಡು
ಬಡ್ಡಿ ಕಟ್ಟಲಾಗದೆ ಜೀತದಾಳಾಗಿದ್ದಾನೆ!"[22]

ಭಾರತೀಯ ಸಮಾಜದಲ್ಲಿ ಒಬ್ಬ ದೇಶಿ ದಲಿತನನ್ನು ಪರಕೀಯ ಅಸ್ಪೃಶ್ಯನನ್ನಾಗಿ ಕಾಣುವಂತೆ; ಜಾಗತೀಕರಣದ ಪ್ರಕ್ರಿಯೆಯಿಂದ ಈ ಪ್ರಪಂಚದಲ್ಲಿ ಇಡೀ ಭಾರತೀಯರೆ ಅಸ್ಪೃಶ್ಯರಾಗಿ, ಜೀತದಾಳುಗಳಾಗಿದ್ದಾರೆ ಎಂಬ ದೃಶ್ಯ ಮನಮುಟ್ಟುವಂತೆ ಮೂಡಿಬಂದಿದೆ. ಇದರಲ್ಲಿ ದಲಿತ ಬದುಕಿನ ಕಥೆಯಿದ್ದು; ಭಾರತದ ಬಹುಜನರ ಸಂಕೀರ್ಣ ಬದುಕಿನ ದುರಂತ ಚಿತ್ರಣವು ಇಲ್ಲಿದೆ. ಅಂದು ಎಪ್ಪತ್ತು–ಎಂಬತ್ತರ ದಶಕದಲ್ಲಿ ಸಿದ್ಧಲಿಂಗಯ್ಯರ ಕಾವ್ಯ ಪ್ರತಿಭಟನೆಯ ಅತ್ಯುನ್ನತ ಶಿಖರದ ಕಾವ್ಯವಾಗಿತ್ತು. 'ಇಕ್ರಲಾ ವದೀರ್ಲಾ ಈ ನನ್ ಮಕ್ಕಳ ಚರ್ಮ ಎಬ್ರಲಾ;[23] 'ಸೌದೆ ಸಿಗದಂಗೆ ಸಿಗಿತಿನಿ, ಸಾವ್ಕಾರಿ ಮಯ್ಯ; ಕಳ್ಳು ಪಚ್ಚಿ ಬಗಿತಿನಿ, ಕುಟ್ತಿನಿ ಗಂಟ್ಮೂಳೆ ಕೊಬ್ಬ ಕುಡಿತಿನಿ ಗಟಗಟನ, ಹ್ಯಂಡ ಕುಡ್ದಂಗೆ ಸಾವ್ಕಾರಿ ರಕ್ತನ'[24] ಇವೆಲ್ಲ ಮಾರ್ಕ್ಸವಾದಿ ಹಿನ್ನೆಲೆಯ ಉದ್ವೇಗದ ಆರ್ಭಟತೆಯುಳ್ಳ ಪ್ರತಿಭಟನಾ ಧ್ವನಿಗಳು. ಈಗ ಅದು ಸಿಡಿದ ಮೇಲಿನ ನಿಶಬ್ದವಾದ ತಣ್ಣನೆಯ ಸ್ಥಿತಿಯದ್ದಾಗಿದೆ. ಇಂದು ಧ್ವನಿ ಎತ್ತದಿರುವ ಸಿದ್ಧಲಿಂಗಯ್ಯರಂತಹ ಲೇಖಕರ ಮತ್ತು ಅವರ ಕಾವ್ಯಗಳ ಮಿತಿಯಾದರೆ; ಇದೇ ಕಾಲಘಟ್ಟದಿಂದ ಬೆಳೆದು ಬಂದ ಮಾಲಗತ್ತಿಯವರ ಕಾವ್ಯ ಇದಕ್ಕೆ ಭಿನ್ನವಾಗಿದೆ. ವಿಶೇಷವೆಂದರೆ ಮಾಲಗತ್ತಿ ಅಂದಿನಿಂದ ಇಂದಿನವರೆಗೂ ತಮ್ಮ ಉದ್ದೇಶ, ಧೋರಣೆ ಗುರಿಗಳಿಗೆ

ಮಾಧ್ಯಮವಾಗಿ ಕಾವ್ಯ-ತತ್ವ, ಗುಣ-ತತ್ವ, ಲಯ-ತತ್ವ, ಧ್ವನಿ-ತತ್ವಗಳ ನಿರಂತರತೆಯನ್ನು ಕಾಯ್ದುಕೊಂಡಿದ್ದಾರೆ. ತಮ್ಮ ಸ್ವೋಪಜ್ಞತೆಯನ್ನು ಉಳಿಸಿಕೊಂಡ ಜೀವಸಿರಿಯೊಡನಾಟದ ಕಾವ್ಯ-ಕವಿಯಾಗಿದ್ದಾರೆ. ಬಂಡಾಯವಿಲ್ಲದ ಬದುಕೂ ಬದುಕೇ? ಸಮಾಜವನ್ನು ಊರ್ಧ್ವಮುಖಿಯಾಗಿ ನಿಲ್ಲಿಸಬೇಕು..'ಎಂದು ಮಾಲಗತ್ತಿ ತಮ್ಮ ಬಂಡಾಯದ ತಾತ್ವಿಕ ಮನೋಧರ್ಮವನ್ನು 'ಚರಿತ್ರೆಯಾದ ಮೀನು ಮುಳ್ಳು' ಪದ್ಯದಲ್ಲಿ ಪ್ರಕಟಪಡಿಸುತ್ತಾರೆ.

ಜೀವತತ್ವದ ಸುತ್ತ ಅನಾವರಣಗೊಂಡ ಮಹಾಕಾವ್ಯ 'ಶ್ರೀ ಚಂಡಾಲ ಸ್ವರ್ಗಾರೋಹಣಂ:

ಅರವಿಂದ ಮಾಲಗತ್ತಿಯವರ ಆರನೆ ಕಾವ್ಯ 'ಶ್ರೀ ಚಂಡಾಲ ಸ್ವರ್ಗಾರೋಹಣಂ', ಇದು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಬಿಟ್ಟರೆ ಆಧುನಿಕೋತ್ತರ (ಆಧುನಿಕ)ಕನ್ನಡ ಸಾಹಿತ್ಯದ ಮತ್ತೊಂದು ಹಳೆಗನ್ನಡ ಕಾವ್ಯ. ಹಾಗೆಯೇ ದಲಿತ-ಬಂಡಾಯ ಸಾಹಿತ್ಯದ ಮೊದಲ ಹಳಗನ್ನಡ ಕಾವ್ಯ ಕೂಡ. ಇದನ್ನು ಅಸ್ಪೃಶ್ಯ (ಚಂಡಾಲ) ಮತ್ತು ಮಹಿಳಾ ಅಸಮಾನತೆಯ ವಿರುದ್ಧ ಸಮಾನತೆಯನ್ನು ಸಾಧಿಸಲು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದ ಸಮತಾವಾದದ ಐಕ್ಯವುಳ್ಳ ಕಾವ್ಯವೆನ್ನಬಹುದು. ಇದು ಬಂಡಾಯ ಮನೋಧರ್ಮವನ್ನೊಳಗೊಂಡ ಶೂನ್ಯ ಪರಿಯ ಪರಿವರ್ತನ ರೂಪಿ ಕಾವ್ಯ ಕೂಡ. ಇಂತಹ ಕಾವ್ಯಗಳನ್ನು ಮಹಾಕಾವ್ಯಗಳೆನ್ನಲು ಕೆಲವು ಪುರೋಹಿತಶಾಹಿ; ಮೂಲಭೂತವಾದಿಗಳು ಸಿದ್ದರಿಲ್ಲ. ಅವರಿಗೆ ಹಿಂದಿನ ಮಹಾಕಾವ್ಯಗಳ ಗುಣಲಕ್ಷಣಗಳನ್ನೆ ಹಿಡಿದು ಮುಕ್ಕಿರುವುದನ್ನೇ ಆಧುನಿಕ ಕಾವ್ಯಗಳು ಹೊಂದಿರಬೇಕೆಂಬುದು ಇಂದಿಗೂ ಒತ್ತಾಯಿಸುವವರಿದ್ದಾರೆ. ಮಾಲಗತ್ತಿ ಅವರ ಈ ಕಾವ್ಯದ ಒಂದು ಅಂಚನ್ನು ದಲಿತ ಧೋರಣೆಯಿಂದ ನೋಡಿದಾಗ; 'ಸತ್ಯವ್ರತನ ಪಟ್ಟಾಭಿಷೇಕದಿಂದ ಕಾವ್ಯ ಆರಂಭವಾಗುತ್ತದೆ. ಆ ಸಂದರ್ಭದಲ್ಲಿ ರಾಜ ಸತ್ಯವ್ರತ ನಗರದ ಮೆರವಣಿಗೆಯಲ್ಲಿ ಸಾಗುವಾಗ ಅವನಿಗೆ ಎರಚುತ್ತಿದ್ದ ಅಕ್ಷತೆಯ ಕಾಳನ್ನು ಕೂಳಿಗಾಗಿ ಆಯುವ ಮಕ್ಕಳ ದೃಶ್ಯವನ್ನು ಕವಿ ಹೀಗೆ ಹೇಳುತ್ತಾರೆ.

"ಚಿಂದಿ ಬಟ್ಟೆಯುಟ್ಟು ಕೈಯೊಳ್ ಒಡಕು ತಟ್ಟೆಂ ಪಿಡಿದಿರ್ದ
ರಾಜಕುಮಾರಂಗೆಸೆದ ಸೇಸೆಗಳಂ ಆಯ್ವ
ಎಲುದೊಗಲ ದೇಹದ ಎಣ್ಣೆ ಸೋಂಕದ
ಮಂಡೆ ಬಾಚದ ಜಡೆಗಟ್ಟಿದ ಕುರುಳ್ಗಳ ಬಾಲಕರ್
ನಾಳೆಯ ಕೂಳ್ ಇಂದೇ ದಕ್ಕಿತೆಂದು ಹಿಗ್ಗುತಿರ್ದರ್"[25]

ಇದು ಈ ದೇಶದ ದೀನದಲಿತರ ಬಡನತದ ದೃಶ್ಯ. ರಾಜನಿಗೆ ಮಂಗಳಕರ ಅಕ್ಷತೆಯ ಕಾಳನ್ನು ಕೆಲವರು ಎಸೆಯುತ್ತಿದ್ದರೆ; ಅದೇ ರಾಜ್ಯದ ಕೆಲವು ಜನ ಎಸೆದ ಆ ಅಕ್ಕಿ ಕಾಳನ್ನೇ ಹೊಟ್ಟೆ ಕೂಳಿಗಾಗಿ ಆಯ್ದು ಸಂತೋಷಪಡುತ್ತಿರುವುದರ ದೃಶ್ಯವನ್ನು ಕವಿ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಇದರಲ್ಲಿ ಒಂದು ಕಡೆ ಶ್ರೀಮಂತಿಕೆಯ ಅಟ್ಟಹಾಸವಿದ್ದರೆ, ಮತ್ತೊಂದೆಡೆ ಬಡತನದ ಆಕ್ರಂದನವಿದೆ. ಆದರೆ ಬಡ ಜೀವಗಳಿಗೆ ಮನ ಸೋತ ರಾಜ ತನ್ನ ಹೃದಯ ಮನಸ್ಸುಗಳ ಮಾನವೀಯ

ಸ್ಪರ್ಶದಿಂದ ರಾಜನೆಂಬ ಅಹಂ ಅನ್ನು ತೊರೆದು ಸ್ಪಂದಿಸುತ್ತ ನಡೆದ ದೃಶ್ಯ ಇಡೀ ಕಾವ್ಯದ ಆಶಯಕ್ಕೆ ಹಿಡಿದ ಮುನ್ನುಡಿಯಾಗಿದೆ. ಅಸ್ಪೃಶ್ಯ ಕೇರಿಯ ಬಡತನದ ಕೆಸರೊಳಗಿನ ಕಮಲದಂತೆ ಇದ್ದ ಮಂದಸ್ಮಿತ ನಗುವಿನ ಪುಟ್ಟ ಬಾಲೆ ಮಾತಂಗಿಯನ್ನು ಕಂಡ ಸತ್ಯವ್ರತ ಮೋಹಿತನಾದ. ಅಸ್ಪೃಶ್ಯ ಕೇರಿಯ ಪ್ರವೇಶ ಮಾತಂಗಿಯ ಮೇಲಿನ ಮೋಹ ಇವು ಸತ್ಯವ್ರತನ ಧಾರ್ಮಿಕ ತಪ್ಪುಗಳಾಗಿ ಅವನ ಜೀವನದ ತಿರುವುಗಳನ್ನೇ ದಿಕ್ಕು ತಪ್ಪಿಸುತ್ತವೆ. ಇದರಿಂದ ಆಧುನಿಕೋತ್ತರ ಕಾವ್ಯವೇ ಜೀವನ ಮೌಲ್ಯದ ಶೋಧನೆಗಿಳಿಯುತ್ತದೆ.

ಮನುಷ್ಯತ್ವ, ಮಾನವೀಯತೆ ಈ ಮಾತುಗಳೆಲ್ಲ ಮಾನವ ಕೇಂದ್ರಿತ ನೆಲೆಯವು. ಇವು ಸ್ವಾರ್ಥಿ ಮಾನವನನ್ನು ಮಾತ್ರ ರಕ್ಷಿಸಿಕೊಳ್ಳಲು, ಬೆಳೆಯಲು ಮಾಡಿಕೊಂಡ ತಂತ್ರ, ಈ ಮಾನವೀಯತೆಯೊಳಗೆ ಮಾನವೇತರ ಜೀವಿಗಳಿಗೆ ರಕ್ಷಣೆಯಿಲ್ಲ. ಆದರೆ ಒಂದು ದೇಶ, ಸಮಾಜ, ಸಂಸ್ಕೃತಿಗಳ ಜೀವಂತಿಕೆಗೆ ಪ್ರಕೃತಿಯ ಸರ್ವಜೀವಿಗಳದ್ದು ಪ್ರಧಾನ ಪಾತ್ರವಿದೆ. ಅದನ್ನು ಅರಿತೆ ಬುದ್ಧ ಜನಕ್ಕೆ ಜೀವತತ್ವವನ್ನು ಬೋಧಿಸಿದ. ಇಂತಹ ತತ್ವಗಳ ನೆಲೆಯಲ್ಲಿ 'ಶ್ರೀ ಚಂಡಾಲ ಸ್ವರ್ಗಾರೋಹಣಂ' ಕೃತಿ ರಚನೆಯಾಗಿದೆ. ಇಲ್ಲಿ ಎಲ್ಲ ಜಾತಿ, ವರ್ಗದ ಸ್ತ್ರೀ–ಪುರುಷ ಮಾನವರಿಗೆ ಇರುವಂತೆ; ಇರುವೆ, ಹಸುವನ್ನು ಒಳಗೊಂಡಂತೆ ಸರ್ವಜೀವಿಗಳಿಗೂ ಜೀವನದ ಹಕ್ಕು ಕ್ರಿಯಾತತ್ವಗಳನ್ನು ಬೋಧಿಸುವ ಈ ಕೃತಿ ಜೀವಕೇಂದ್ರಿತ ನೆಲೆಯಲ್ಲಿದೆ. ಶ್ರೀ ಚಂಡಾಲ ಸ್ವರ್ಗಾರೋಹಣಂ' ಕಾವ್ಯವು ಒಂದು ಶಿಖರ ಕಾವ್ಯವಾಗುವ ಸಾಧ್ಯತೆಗಳಿವೆ. ಏಕೆಂದರೆ ಮುಂದಿನ ಕಾವ್ಯಕ್ಕೆ ಜೀವಧರ್ಮದ ಮುನ್ನುಡಿಯಂತಿರುವ ಈ ಕೃತಿಯೇ ಚಲನಶೀಲ ಕವಿಗೆ ಪ್ರೇರಣೆಯ ಮಾರ್ಗ. ಇದರ ತಾತ್ವಿಕ ಚಿಂತನೆಯ ಎಳೆಯಿಂದ ಮತ್ತೊಂದು ಹೊಸ ಜೀವಂತಿಕೆಯ ಕಾವ್ಯಸೃಷ್ಟಿಯ ಆಶಯವನ್ನು ಇವರ ಪ್ರತಿಯೊಬ್ಬ ಸಹೃದಯಿ ಕಾವ್ಯ ಓದುಗ ಪಡೆಯಬಹುದು.

ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿ 'ದಲಿತೇತರರ' ಸಂವೇದನೆ

(1. ಸಿಪಿಲೆ ಸತೀಶ್ 2. ಬಂಜಗೆರೆ ಜಯಪ್ರಕಾಶ್)

ಕ್ರಿ.ಶಕ.2000–01ನೇ ಇಸವಿಯಿಂದ ದಮನಿತರ ಪರವಾಗಿ ಬರೆಯುತ್ತಿರುವ ದಲಿತ ಮತ್ತು ದಲಿತೇತರ ಕವಿ–ಕಾವ್ಯಗಳನ್ನು 'ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿನ ದಲಿತ ಸಂವೇದನೆ' ಎಂಬ ಹೆಸರಿನಲ್ಲಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ. ಈ ದೃಷ್ಟಿಯಿಂದ 2000ದಿಂದ 2014ರ ಕಾಲಘಟ್ಟದಲ್ಲಿ ಇದುವರೆವಿಗೂ ಬರಹದ ಮೂಲಕ ಹೋರಾಟದ ಕೃಷಿ ಮಾಡುತ್ತಿರುವವರನ್ನು ಅಧ್ಯಯನದ ಅಡಿಯಲ್ಲಿ ತಂದು ದಲಿತ ಮತ್ತು ಬಂಡಾಯ ಸಾಹಿತ್ಯ ಕಾಲಘಟ್ಟದ ನಂತರದ ಹೊಸ ಆಲೋಚನೆ; ಹೊಸ ಹುಡುಕಾಟದಲ್ಲಿರುವ ಯುವ ಬರಹಗಾರರನ್ನು ಮತ್ತು ಇವರನ್ನು ಬೆಂಬಲಿಸುತ್ತಿರುವ ನಾಡಿನ ಹಿರಿಯ ದಲಿತ ಸಾಹಿತಿಗಳು ಆಧುನಿಕೋತ್ತರ ಕಾಲಘಟ್ಟದ

ಪರಿವರ್ತನಾ ಸಾಹಿತ್ಯವನ್ನು ಹೊಸದಿಕ್ಕಿನೆಡೆಗೆ ಕೊಂಡೊಯ್ಯುವ ಎಲ್ಲಾ ಲಕ್ಷಣ; ಭರವಸೆ ಕಂಡುಬರುತ್ತಿದೆ.

1. ಸಿಪಿಲೆ ಸತೀಶ್‌ರವರ ಕಾವ್ಯದಲ್ಲಿ ದಲಿತಪರ ಕಾಳಜಿ:

ಸಿಪಿಲೆ ಸತೀಶ್ ಆಧುನಿಕೋತ್ತರ ಕನ್ನಡ ಕಾವ್ಯಲೋಕದಲ್ಲಿ ದಲಿತೇತರ ಕವಿಯಾಗಿ 'ಒಂದು ಹಕ್ಕಿಯ ಕೂಗು', ಕವನ ಸಂಕಲದ ಮೂಲಕ ಕವಿಯಾಗಿ ಒಡಮೂಡಿದ ಇವರು ಈವರೆಗೆ ಆರು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಮನುಷ್ಯ ಸಹಜ ಪ್ರೀತಿ–ಪ್ರೇಮವನ್ನು ಬದುಕಿನಂಗಳದ ಸುತ್ತ ವ್ಯವಸ್ಥೆ ಎಣೆಯುವ ಸೋಲಿನ ಬೇಲಿಯನ್ನು ಅನಾವರಣ ಮಾಡುತ್ತಾ 'ಸಿಹಿ ನೀರ ಕೊಳ', ಕೃತಿಯಲ್ಲಿ ಇಡೀ ಜೀವನ ಯೌವ್ವನದ ಬಿಂಬವಾಗದಿದ್ದರೆ ಏನರ್ಥ: ಅದು ಬರೀ ವ್ಯರ್ಥ ಎನ್ನುವ ಇವರು 'ಬಿರಿದ ಹೂಗಳ ನಡುವೆ', ಕೃತಿ ಮೂಲಕ ಅಪರೂಪದ ಬದುಕಿನ ಸ್ವಾರಸ್ಯವನ್ನು ಅನುಭವಿಸುತ್ತಾರೆ. ಸುಖದ ಅವಕಾಶಗಳಿಗೆ ಮನಸಿನ 'ಕೊಂಬೆ ಕೊಂಬೆಯೂ ಚಿಗುರಿ'ಸುತ್ತಾ 'ಬೃಂಗ ಬೆರೆತ ಹೂವಿಗೆ', ಕೃತಿ ಮೂಲಕ ನೋವಲ್ಲೂ ಸುಖವಿದೆ; ಎಲ್ಲವನ್ನೂ ಸವಿಯುವುದೇ ಜೀವನವೆಂಬ ಕಾವ್ಯಕ್ಕೆ ಭಾವರಸವೆಂಬ 'ಹರಿವ ತೊರೆ ನೀರು' ಉಣಬಡಿಸುವ ಪ್ರೀತಿ ಪ್ರೇಮಗಳೇ ಜಗತ್ತಿನ ಎಲ್ಲಾ ಸಮಸ್ಯೆಗಳನ್ನೂ ನೀಗಿಸುವ ಏಕೈಕ ವಸ್ತು ಎನ್ನುವಂತಹ ಆರು ಸಂಕಲನಗಳ ಮೂಲಕ ಪ್ರೀತಿ, ಪ್ರೇಮ, ಕಾಮ, ವಿರಹದೆದೆಯೊಳಗೇ ಜಗತ್ತನ್ನು ಕಾಣುವ ಕವಿ ನಾನು: ಎಂಬುದನ್ನು ತಮ್ಮ ಆಕರ್ಷಕ ಶೀರ್ಷಿಕೆಯಿಂದಲೇ ಅರ್ಥೈಸಿಕೊಳ್ಳುವ ಸಿಪಿಲೆ ಸತೀಶ್ ಜೀವಮುಖೀ ಸಮಾನತಾವಾದವನ್ನು ಒಪ್ಪುವ ಅಪರೂಪದ ದಲಿತಪರ ಯೋಚಿಸುವ ಶೂದ್ರ ಕವಿ.

ಒಬ್ಬಂಟಿ ನಡೆಯುವಾಗ ಏನೆಲ್ಲಾ ಭಾವನೆಗಳು, ಆಲೋಚನೆಗಳು, ಒಳಗಿನ ಕುದಿ ಆಚೆ ಬಂದಂತೆ ನಾವೇ ಮಾತಾಡಿಕೊಳ್ಳುವುದೂ ಇದೆ. ಜನರ ಸಣ್ಣತನ, ಉದ್ಧಟತನ, ಕೆಲವೊಮ್ಮೆ ಓಕರಿಕೆ ತರಿಸುತ್ತದೆ. ಬದುಕಿನ ಗುರಿ ಕೇವಲ ಹಣವಾಗಿದೆ. ಹಣ ಬಿಟ್ಟರೆ ಬದುಕಿಲ್ಲ ಎಂಬಂತಾಗಿದೆ. ಹಣ ಬರದಿದ್ದರೆ ಪುಸ್ತಕ ಓದುವುದಿಲ್ಲ, ಕವಿತೆ ಬರೆಯುವುದಿಲ್ಲ, ಎಲ್ಲ ಲೆಕ್ಕಾಚಾರ. ದಿನ ಬೆಳಗಾಯಿತೆಂದರೆ ಲೆಕ್ಕಾಚಾರದ ಅಮಲಿನಲಿ ಜನ ತೇಲುತ್ತಾರೆ. ಇದು ಒಂದು ಹಂತಕ್ಕೆ ಸರಿ. ಮಿತಿಮೀರಿದ ಲೆಕ್ಕ, ಬದುಕಿನ ಬಗೆಗಿನ ಮೂಲ ನಂಬಿಕೆಯನ್ನೇ ಹಾಳುಗೆಡುವುತ್ತದೆ. ಎಲ್ಲ ಲೆಕ್ಕದಿಂದಾಚೆಗೆ ಬದುಕನ್ನು ಅನುಭವಿಸುವುದು ಸಾಧ್ಯವಿಲ್ಲವೆ ಎನ್ನುವ ಅನುಮಾನ ಬರುತ್ತದೆ. ಕಾವ್ಯ ಮನಸ್ಸಿಗೆ ಉಲ್ಲಾಸ ನೀಡಿದರಷ್ಟೇ ಸಾಕೇ? ಶತಮಾನದಿಂದ ಅದೆಷ್ಟೋ ಮನಸುಗಳು ಲಿಂಗದ ಹೆಸರಲ್ಲಿ ಜಾತಿ ಹೆಸರಲಿ; ವರ್ಗದ ಹೆಸರಲಿ ಅನುಭವಿಸುತ್ತಿರುವ ನರಕಯಾತನೆ ಮಾನಸಿಕ ಹಿಂಸೆಗೆ ಒಂದಿಷ್ಟು ಮನೋವೈಜ್ಞಾನಿಕ ನೆಲೆಯಲ್ಲಿ ಯಾಥಾಸ್ಥಿತಿ ಮನದ ಪಾಕೆಟ್ಟಿನಿಂದ ಕೊಡುವ ಶಬ್ದಗಳು ಪರಿಹಾರವಾಗುವುದಿಲ್ಲ. ಹಾಗೆ ಭಾವಿಸುವುದು ನೀರ ಮೇಲಿನ ಗುಳ್ಳೆಯೇ ಸರಿ. ಪ್ರೀತಿಯನ್ನು ವ್ಯಾಖ್ಯಾನಿಸುವುದು ಸುಲಭದ ಮಾತಲ್ಲ ಎನ್ನುವ ಕವಿ ಅನೇಕ ಮುಖವಾಡಗಳ ಕಾರಣವನ್ನು ಕೊಡುತ್ತಾರೆ. ಅರ್ಥಾತ್ ಸಹಜ ಪ್ರೀತಿಗೆ ವ್ಯಾಖ್ಯಾನವಾಗಲಿ ಹೊಗಳಿಕೆಯಾಗಲಿ ಬೇಕಿಲ್ಲ, ಅದು ಕಣ್ಣಿಗೂ ಕಣ್ಣಾಗಿ ಅಂತರಂಗಕ್ಕೆ ಸ್ಫುಟವಾಗಿ ಗೋಚರಿಸುತ್ತದೆ. ಎಲ್ಲವನ್ನೂ ವಿವರಿಸಿಕೊಳ್ಳಲಾಗುವುದಿಲ್ಲ. ಅದು ಉಚಿತವೂ ಸುಖವೂ ಅಲ್ಲ; ಅದರಿಂದಲೇ ಅದನ್ನು ಕಾವ್ಯದಲ್ಲಿ ಧ್ವನಿಯುಕ್ತವಾಗಿಸುವ ಜಾಡು ಕವಿಯಾದವನಿಗೆ ಸಿದ್ಧಿಸಿರುವುದು. ಪ್ರೀತಿಯನ್ನು ಸಾವಿರಸಾವಿರ ಪುಟಗಳಲ್ಲಿ ವ್ಯಾಖ್ಯಾನಿಸಿದಾಗಲೂ ಅದು ಅಸ್ಪಷ್ಟವೇ ಗಾಳಿ ಥರಾ; ಪ್ರೀತಿ ಕೇವಲ ಅರಿವಿಗೆ ಮಾತ್ರ ಬರುವಂತದ್ದು; ಅರಿವಿಗೆ ತರುವಂತದ್ದು; ಅರ್ಥಮಾಡಿಸುವಂತಹುದಲ್ಲ. ಪ್ರೀತಿ ಶಬ್ದಾತೀತವಾದುದು. ಇಂದಿನ ಕವಿತ್ವ

ಪಾರಂಪರಿಕ ಪ್ರೇಮ ಕಾಮರಸ ಮೀಮಾಂಸೆಯಿಂದ ಹಿಂದಿರುಗಬೇಕಾದ ತುರ್ತಿದೆ. ವರ್ತಮಾನದ ಆಗುಹೋಗುಗಳ ಬಗೆಗೆ, ಬದಲಾವಣೆ ಬೆಳವಣಿಗೆ ಬಗೆಗೆ ಸೂಕ್ಷ್ಮದೃಷ್ಟಿಯ ಅಗತ್ಯವಿದೆ. ಆ ಥರದ ತೀಕ್ಷ್ಣತೆಯ ಅರಿವಿನೊಂದಿಗೆ ಸಮಾಜಮುಖಿ ಚಿಂತನೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಆಧುನಿಕೋತ್ತರ ಕನ್ನಡ ಕಾವ್ಯ ಈ ಹಿಂದಿನವರಿಂದಾದ ಕೊರತೆಯನ್ನು ಸರಿದೂಗಿಸಬಲ್ಲದು.

'ಕೊಂಬೆ ಕೊಂಬೆಯೂ ಚಿಗುರಿ' ಕಾವ್ಯವನ್ನು ಹೊಕ್ಕಾಗ: 'ಕ್ರೌರ್ಯವೇ ಇವತ್ತಿನ ಸಂದರ್ಭದ ಸಾಮಾಜಿಕ ಮೌಲ್ಯವಾಗಿ ವಿಜೃಂಭಿಸುವಾಗ, ಮಾನವೀಯತೆಯೆಂಬ ಜೀವಜಲದ ಒರತೆಯೇ ಬತ್ತಿಹೋಗಿ ಇಡೀ ಮಾನವ ಸಂತತಿಯೇ ಪ್ರಸಕ್ತ ಸನ್ನಿವೇಶದಲ್ಲಿ ವಿಲವಿಲನೆ ಒದ್ದಾಡುತ್ತಿರುವಾಗ ಬದುಕನ್ನು ಅದರ ಗಂಭೀರ ನೆಲೆಯಲ್ಲಿ ಪರಿಭಾವಿಸುವ ಮತ್ತು ಕಾಲಗರ್ಭದಲ್ಲಿ ಹುದುಗಿ ಹೋಗುತ್ತಿರುವ ಮನುಷ್ಯತ್ವವನ್ನು ಮರುಸ್ಥಾಪಿಸುವ ವಿಶಿಷ್ಟ ವ್ಯಕ್ತಿತ್ವಗಳ ಅಗತ್ಯ ಇಂದು ಬಹಳಷ್ಟಿದೆ. ಇಂತಹ ವಿಶಿಷ್ಟ ವ್ಯಕ್ತಿತ್ವಗಳು ಇವತ್ತಿನ ಸಾಮಾಜಿಕ ಸಂದರ್ಭದಲ್ಲಿ ವಿಫುಲವಾಗಿ ರೂಪುಗೊಳ್ಳಬೇಕಾಗಿದೆ. ಆಗ ಮಾತ್ರ ಸುಂದರ ಸಮಾಜವೊಂದು ಸಾಕಾರಗೊಳ್ಳಲು ಸಾಧ್ಯ. ಇದಲ್ಲದೆ, ಬದುಕನ್ನು ಅದರ ಸಹಜತೆಗೆ ಅನುಸಾರವಾಗಿ ಅರ್ಥೈಸಿಕೊಂಡಿರುವ ಮತ್ತು ಬದುಕಿನ ನಿಜ ಮೌಲ್ಯಗಳನ್ನು ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡು ಬಾಳುತ್ತಿರುವ ಗಂಭೀರ ವ್ಯಕ್ತಿಯೊಬ್ಬನಲ್ಲಿ ಮಾತ್ರ ಮತ್ತಷ್ಟು ವಿಶೇಷ ಮಾನವೀಯ ಗುಣಗಳು ಮೇಳೈಸಿಕೊಂಡಿರುತ್ತವೆ. ಸಿಪಿಲೆ ಸತೀಶ್ ಅವರು ಕಾವ್ಯದ ದಾಟಿಯನ್ನು ನಡೆಸಿಕೊಂಡು ಹೋಗುವ ಪರಿ ಸಹಜವೂ ಸ್ಪಷ್ಟವೂ ಆಗಿದೆ. ಪ್ರೀತಿ ಪ್ರೇಮದ ಬಗೆಗಿನ ಕಾವ್ಯಗಳು ತುಸು ಬಿಂಕ ಬಿಗುಮಾನಕ್ಕೆ ಎಡೆಮಾಡಿಕೊಳ್ಳುತ್ತವೆ. ಅಹಂಪ್ರೇಮಾಗ್ನಿಯ ಶಿಖರವಾಣಿ ಮೊಳಗಿಸಿಬಿಡುವ ಬೊಗಳೆ ಕವಿಗಳು ನಮ್ಮಲ್ಲಿ ನೂರಾರು ಸಂಖ್ಯೆಯಲ್ಲಿರುತ್ತಾರೆ. ಅನಗತ್ಯ–ಅವಿವೇಕದ ಚಿಂತನೆಗಳಿಗೆ ತಲೆ ಕೆಡಿಸಿಕೊಳ್ಳದ ಇವರ ಸಹೃದಯತೆ ಕಂಡು ಬೆರಗು ಮೂಡುತ್ತದೆ. ಒಳ್ಳೆಯ ಸ್ನೇಹಿತರ ಒಡನಾಟದಲ್ಲಿ ಮತ್ತು ಉತ್ತಮ ಹವ್ಯಾಸಗಳ ಸಾಹಚರ್ಯದಲ್ಲಿ ಗಂಭೀರ ವ್ಯಕ್ತಿತ್ವವೊಂದನ್ನು ರೂಪಿಸಿಕೊಂಡು ಬಾಳುತ್ತಿರುವ ಜೀವನ ಪ್ರೀತಿಯ ಜೀವತತ್ವದ ಧೋರಣೆ ಇವರ ಕಾವ್ಯತತ್ವದಲ್ಲಿ ಧ್ವನಿಸುತ್ತದೆ. ಈ ಕಾರಣಕ್ಕಾಗಿಯೇ ಇಂತವರಿಂದ ಸಾಮಾಜಿಕ ಜವಾಬ್ಧಾರಿಯುಳ್ಳ ಸಾಹಿತ್ಯ ಪರಿಚಾರಿಕೆಯನ್ನು ವ್ಯವಸ್ಥೆ ಬಯಸುವುದು ಮತ್ತು ಕವಿತ್ವವನ್ನು ಒಪ್ಪುವುದು.

'ಕೊಂಬೆಕೊಂಬೆಯೂ ಚಿಗುರಿ' ಕೃತಿ 'ಸುತ್ತಾಡುತ್ತಾ' ಎನ್ನುವ ಕವಿತೆಯೊಂದಿಗೆ ಆರಂಭಗೊಳ್ಳುವ ಇವರ ಕಾವ್ಯಲಹರಿಯು 'ಅಳಲು' ಕವಿತೆಯೊಂದಿಗೆ ಪೂರ್ಣಗೊಳ್ಳುತ್ತದೆ. ನಿರಂತರ ಕಾಡುವ ಮಧುರ ನೆನಪುಗಳು, ಮನಸೆಳೆವ ಕೊಳಲಿಂಪಿನ ನಾದ ತರಂಗಗಳು, ಮೈ–ಮನ ಮರೆಸುವ ಶೃಂಗಾರ ರಸಲಹರಿಯ ಭಾವದಲೆಗಳು, ಸೃಷ್ಟಿ ವೈಚಿತ್ರ್ಯದ ವಿಸ್ಮಯಗಳು, ಬದುಕಿನೊಳಗಿನ ಹೋರಾಟದ ತರಾವರಿಯ ಮಾದರಿಗಳು, ಪ್ರೀತಿ–ಪ್ರೇಮ–ಪ್ರಣಯದ ವಿಶಿಷ್ಟ ಭಾವಲಹರಿಗಳು ಮಾತ್ರವಲ್ಲದೆ ಸಾಮಾಜಿಕ ಕಳಕಳಿ ಬಿಂಬಿಸುವ ಚಿಂತನಾ ಲಹರಿಗಳು ಇವರ ಕಾವ್ಯವಸ್ತುವಿನೊಳಗಿನ ದನಿಗಳಾಗಿ ಅನುರಣಿಸಿವೆ.

ಬಡತನದ ಅಂತರಾಳದಲ್ಲಿ ಅಡಗಿರುವ ಹೃದಯ ಶ್ರೀಮಂತಿಕೆ ಮತ್ತು ಸರಿತನದ ಪರಿವೃತ್ತದೊಳಗೆ ಕಂಡುಬರುವ ಮಾನವೀಯತೆಯ ಕೊರತೆ–ಇವು ಕವಿಯನ್ನು ಬಹುವಾಗಿ ಕಾಡಿವೆ. ಮಾನವೀಯತೆಯ ಅಸ್ತಿತ್ವದ ಪ್ರಜ್ಞೆ 'ವ್ಯತ್ಯಾಸ' ಕವಿತೆಯೊಳಗೆ ಒಂದು ರೂಪಕವಾಗಿ ಚಿತ್ರಿತವಾಗಿದೆ.

ಮನುಷ್ಯತ್ವವಿಲ್ಲದ ಬದುಕಿಗೆ ಸುದೀರ್ಘ ಅಸ್ತಿತ್ವವಿಲ್ಲವೆಂಬುದು ಕವಿಯ ಪ್ರತಿಪಾದನೆ. 'ಟೀಕೆಯಲ್ಲಿ ಅನೇಕ ತಿವಿತವಿದೆ. ಟೀಕಿಸುವವ ಅಡ್ನಾಡಿಯಂತಾಡಿ ಛೇಡಿಕೆಯ ರೂಕ್ಷ ಮಾತಿನಲಿ...' ಅನಗತ್ಯ ವಿಷಯಗಳಲ್ಲಿ ತಲೆಹಾಕುವ, ಅವರಿವರನ್ನು ಲೇವಡಿ ಮಾಡುವುದರಲ್ಲೇ ವಿಚಿತ್ರ ಆನಂದ ಅನುಭವಿಸುವ ಟೀಕಾಸುರರ ನಡಾವಳಿಯನ್ನೂ ಕವಿ ಇಲ್ಲಿ ವಿಡಂಬಿಸಿದ್ದಾರೆ. ಲೋಕದ ಡೊಂಕ ತಿದ್ದುವಷ್ಟು ನಾವು ದೊಡ್ಡವರೇ?! ಎಂಬ ಪ್ರಶ್ನೆ ಮತ್ತು ತನ್ನ ಬೆನ್ನ ಹಿಂದಿನ ಗುರುತಿನ ಅರಿವಿಲ್ಲದವರು ಮನಬಂದಂತೆ ಮಾತನಾಡುವುದು ಸರಿಯಲ್ಲವೆಂಬ ಪ್ರಧಾನ ಆಶಯವಿಲ್ಲಿದೆ.

'ಬಾಂಬು-ಬಂದೂಕಿನ ಪ್ರೇತ ನರ್ತನಕ್ಕೆ
ಸಾವಿರಾರು ಹೆಣ ಸಾಲು;
ದಿನ ಬೆಳಗಾಗುತ್ತಲೇ ಸುದ್ದಿ:
ಹುಟ್ಟಿಸುವಾಗಿನ ಅದಮ್ಯ ಉತ್ಸಾಹ
ಕೊಲ್ಲುವಾಗಲೂ ಮಿಡಿವ ಚಿತ್ತಾರ'[26]

ಇಂದಿನ ಧರ್ಮಾಂಧ ಸಮಾಜ ತನ್ನೊಳಗೆ ಅಂತರ್ಗತವಾಗಿ ಇರಲೇಬೇಕಾದ ಮಾನವೀಯತೆಯ ಜೀವಸೆಲೆ ಬತ್ತಿಹೋಗದಂತೆ ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ಸೋಲುವಂತೆ ಮಾಡಿದ್ದಾರೆ. ಮಾನವತೆಯ ಜೀವಸೆಲೆ ಸಂಪೂರ್ಣವಾಗಿ ಬತ್ತಿಹೋದಲ್ಲಿ ಮನುಷ್ಯ ಸಂತತಿಯ ವಿನಾಶಕ್ಕೆ ಮತ್ತಾವ ಮಹಾಪ್ರಳಯವೂ ಆಗಲೇಬೇಕಾಗಿಲ್ಲ. ಬುದ್ಧಿಪೂರ್ಣ ಜಗತ್ತು ಭಾವಪೂರ್ಣ ಜಗತ್ತಿನ ಗೈರುಹಾಜರಿಯಲ್ಲಿ ತನ್ನ ಮುಂದಿನ ಪೀಳಿಗೆಯವರಿಗೆ ತಮ್ಮ ಕೈಯಾರೆ ಭವಿಷ್ಯದ ಸಮಾಧಿಯನ್ನು ಮುಂಚಿತವಾಗಿಯೇ ಕಟ್ಟಿಕೊಡುತ್ತಿರುವುದು ದುರಂತವೇ ಆಗಿದೆ. ಇಂತಹ ಸನ್ನಿವೇಶಗಳು ಕವಿಯ ಲೇಖನಿಯಲ್ಲಿ ಅರ್ಥವತ್ತಾದ ಸಾಲುಗಳಾಗಿ ರೂಪು ತಳೆದಿವೆ. ಮನೋವಲಯವು ಒಂದು ವಿಸ್ಮಯ ತಾಣ, ಏನು ಬಿತ್ತುವೆವೋ ಅದೇ ಬೆಳೆ ಪುಟಿಯುತ್ತದೆ. ಬಿತ್ತುವ ಆಲೋಚನೆಗಳು ಸದಾ ಶುದ್ಧವಿದ್ದರೆ ಅದರ ಬೆಳಸು ಕೂಡ ಸುಖ ಸಮೃದ್ಧಿಯದೆ ಆಗಿರುತ್ತದೆ.

ಸಮಾಜದಲ್ಲಿ ದಿನನಿತ್ಯವೂ ನಡೆಯುತ್ತಿರುವ ವಿಧ್ವಂಸಕ ಕೃತ್ಯಗಳು ಮಾನವತೆಯ ಮಿಡಿತವುಳ್ಳ ಮನುಷ್ಯನನ್ನು ಕಂಗೆಡಿಸುತ್ತವೆ. ವಿಷಣ್ಣ ಮುಖಿಯಾಗಿರು ಮನುಷ್ಯನ ಇನ್ನಿಲ್ಲದಂತಹ ವಿಷಾದತೆಯೇ ಇಲ್ಲಿ ಕಾವ್ಯ ರೂಪ ಪಡೆದಿದೆ. ಮಾನವನ ನಡೆ-ನುಡಿ ಶುದ್ಧವಾಗಬೇಕಾದರೆ ಮೊದಲು ಅವರ ಭಾವ-ವಲಯ ಶುದ್ಧವಾಗಬೇಕು. ಅಂತರಂಗ ಶುದ್ಧತೆಯೇ ಬಹಿರಂಗ ಶುದ್ಧತೆಗಿರುವೇ ಏಕೈಕ ಮಾರ್ಗವೆಂಬುದು ಹಲವು ದಾರ್ಶನಿಕರ ಚಿಂತನೆಯೂ ಆಗಿದೆ. ಅದಕ್ಕಾಗಿಯೇ ಕವಿ ಹೇಳುತ್ತಾರೆ.

'ಕಲಿತ ಹತ್ತಾರು ಅಕ್ಷರ
ಬದುಕಿಸಿತು ನನ್ನ
ಹಲವು ಭ್ರಮೆಗಳ ಒಳಗೆ
ಮುಳುಗಿ ಹೋದವನನ್ನ!'[27]

ಅಕ್ಷರವು ಜ್ಞಾನ ನೀಡುವ ಸಾಧನವಾಗುವುದರ ಜೊತೆಗೆ, ಅನ್ನ ಕೊಡುವ ಆಸರೆಯೂ ಆಗಬಲ್ಲುದು ಎಂಬ ನಂಬಿಕೆ ಕವಿಯದು. ಅಕ್ಷರವನ್ನು ತಾತ್ಸಾರದಿಂದ ಕಾಣುವವರ ಬಗೆಗೆ ಕವಿಗೆ ಅಪಾರವಾದ ಅಸಹನೆಯಿದೆ. ಹೀಗಾಗಿಯೇ, ಅಕ್ಷರವನ್ನು ಕಡೆಗಣಿಸಿ ಅನ್ನಕ್ಕಾಗಿ ಪರಿತಪಿಸುವ ಜನರ ಅವಿವೇಕವನ್ನು ಇವರು 'ಉತ್ತರ' ಎನ್ನುವ ಕವಿತೆಯ ಮೂಲಕ ವಿಡಂಬಿಸುತ್ತಾರೆ. ಅಕ್ಷರವು ಅನ್ನ

ಕೊಡಬಲ್ಲುದೇ ಎಂಬ ಪ್ರಶ್ನೆಗೆ ಸ್ವತಃ ಕವಿಯೇ ಉತ್ತರ ಹುಡುಕಿಕೊಳ್ಳುವ ಪ್ರಯತ್ನ ಇಲ್ಲಿದೆ. ಕವಿ ತಮ್ಮ ಜೀವನಾನುಭವವನ್ನೇ ನಿದರ್ಶನವಾಗಿಸಿ, ಅಕ್ಷರವು ತಮ್ಮ ಕೈಹಿಡಿದು ಕಾಪಾಡಿದ ಬಗೆಯನ್ನು ನೆನೆಯುವ ಮೂಲಕ ಜಗತ್ತಿನ ಕತ್ತಲ ಹೃದಯವನ್ನು ಬೆಳಕಾಗಿಸಿದ ಮೊದಲ ತಲೆಮಾರಿನ ಅಕ್ಷರದ ಅರಿವು ಮನುಜರ ಮುಖದ ಅಂದದ ಆನಂದವನ್ನು ಎಲ್ಲ ಓದುಗರ ಮುಖದ ಕೆಂಪಾಗುವಿಕೆಗೆ ಕಾರಣವಾಗುತ್ತದೆ ಎನ್ನುತ್ತಾರೆ.

'ಮೈಲಿಗೆಯ ಸೋಂಕಿಲ್ಲ;
ಜಾತಿ ಕುಲ ಧರ್ಮಗಳ ಪಹರೆಗಳಿಲ್ಲ
ಅಹಮಿಕೆಯ ಸುಳಿಮಿಂಚಿಲ್ಲ
ತೇಲುವ ಬೂಟಾಟಿಕೆ ಕಿಂಚಿತ್ತೂ ಇಲ್ಲ
ಹಣದ ಸರ್ಪಕಾವಲಲಿ ಬದುಕುತ್ತ
ಶಕ್ತಿ ಹೀರುವ ಜಿಗಣೆಗಳಂತಲ್ಲ..'[28]

ಎನ್ನುವ ಮೂಲಕ, ಸಮಾಜವನ್ನು ಬಾಧಿಸುತ್ತಿರುವ ಬಹುತೇಕ ಸಮಸ್ಯೆಗಳಲ್ಲಿ ಜಾತಿ–ಮತ–ಧರ್ಮಗಳನ್ನು ಕುರಿತ ರೋಗಗ್ರಸ್ಥ ಮನಸ್ಥಿತಿಯೇ ಪ್ರಮುಖವಾದುದು. ಈ ಸಮಸ್ಯೆಯು ಜಗತ್ತಿನ ಮಾನವ ಕುಲವನ್ನು ಪರಸ್ಪರ ಬೇರ್ಪಡಿಸಿದೆ. ಮನುಷ್ಯರಲ್ಲಿ ಪ್ರತ್ಯೇಕತೆ ಸೃಷ್ಟಿಸಿ ಆಳುತ್ತಿದೆ. ಸಾರ್ವಕಾಲಿಕವೂ ಸಾವಿಲ್ಲದ ದೀರ್ಘಾಯುಷಿಯೂ ಆಗಿ ಅಟ್ಟಹಾಸ ಮಾಡುತ್ತಿದೆ, ಎಂದಿಗೂ ವಾಸಿಯಾಗದ ವ್ರಣದಂತಾಗಿ ಈ ಸಮಾಜವನ್ನು ನಿರಂತರ ಬಾಧಿಸುತ್ತಿದೆ. ಇದು ಜನತೆಯ ಮನೋವಲಯದಲ್ಲಿ ಜಡ್ಡುಗಟ್ಟಿ ಕುಳಿತಿರುವ ವೈಚಾರಿಕ ಜಡತ್ವಕ್ಕೆ ಸಾಕ್ಷಿಯಾಗಿದೆ. ಇಂತಹ ಯಾವುದೇ ಕಟ್ಟುಪಾಡುಗಳಿಗೆ ಒಳಪಡದ, ಕಲುಷಿತ ಭಾವನೆಗಳಿಂದ ಅತೀತವಾದ ಒಂದು ಸ್ವಚ್ಛಂದ ಪ್ರೇಮದ ಮಾದರಿಯನ್ನು 'ಹೂ ಬನದ ತುಂಬೆಲ್ಲ' ಕವಿತೆಯಲ್ಲಿ ಚಿತ್ರಿಸಲಾಗಿದೆ.

ಜಾತಿ, ಮತ, ಧರ್ಮಗಳ ಕಲ್ಪನೆಯ ಪೊಳ್ಳುತನದಿಂದ ಅತೀತವಾಗಿ ಚಿಂತಿಸುವ ಬಗೆಯನ್ನು ಪ್ರಕೃತಿಯೇ ಬೋಧಿಸುತ್ತದೆಂಬ ಅಂಶವನ್ನು ಇಲ್ಲಿ ಪ್ರತಿಪಾಧಿಸಲಾಗಿದೆ. ಆದರೆ, ಪ್ರಕೃತಿಯು ನಿರಂತರವಾಗಿ ನೀಡುತ್ತಿರುವ ಈ ನೀತಿಪಾಠಗಳು ಮನುಷ್ಯನಿಗೆ ಅಪಥ್ಯವಾಗಿರುವುದು ಮಾತ್ರ ಈ ಜಗತ್ತಿನ ಘೋರ ದುರಂತವೂ; ವಿಚಿತ್ರವೂ ಆಗಿದೆ.

'ಸೆರಗು ಜಾರುತಲಿದ್ದರೂ
ತನ್ನ ಪಾಡಿಗೆ ತಾನು ನಡೆದು
ಪೇಟೆ ಬೀದಿಯಲಿ ಲ್ಯಾಂಪು
ಚಿಮ್ಮಿದಂತೆ ಬೆಳಕ
ಸೂಸುತಿರುವಳು ಬೆಡಗಿ!'[29]

ಶೀರ್ಷಿಕೆ ಮಹಿಳಾಪರ ದನಿಯಾದರೂ ಸಾಲಿನಲ್ಲಿ ಮೂಡುವ ಭಾವ ಓದುಗರಲ್ಲಿ ರೊಮ್ಯಾಂಟಿಕ್ ಅನ್ನಬಹುದಾದ ಬಣ್ಣದ ಹೆಜ್ಜೆಯವಳ ಮೋಡಿಯ ಕಡೆಗೆ ಬೊಟ್ಟುಮಾಡಿ ತೋರಿಸುತ್ತಿರುವ ಈ ಸಾಲು ಕಾಮಕೇಂದ್ರಿತ ಮೂಸೆಯಿಂದ ಬರಬಹುದಲ್ಲದೆ ಶೋಷಿತಳು ಎಂಬ ಸಂವೇದನೆಯಿಂದಲ್ಲ. ಈ ಕಾರಣ ಪರಿಣಾಮದ ದೃಷ್ಟಿಯಲ್ಲಿ ಕವಿತೆ ಜೀವತತ್ವದ ನೆಲೆಯಲ್ಲಿ

ಸೋಲುತ್ತದೆ. ದಲಿತೇತರ ಕವಿಗಳು ದಲಿತ ಸಂವೇದನೆಯನ್ನು ಅರ್ಥೈಸಿಕೊಳ್ಳಬಹುದೇ ಹೊರತು ವಿವರಿಸಿಕೊಳ್ಳಲಾಗುವುದಿಲ್ಲ. ಹಸಿವನ್ನು ಹೇಳಬಲ್ಲರೇ ಹೊರತು ಅವರ ಅವಮಾನವನ್ನು ಅಭಿವ್ಯಕ್ತಿಸಲು ಅದರ ಅನುಭವವಿರುವ ದಮನಿತನೊಬ್ಬನಿಂದ ಮಾತ್ರ ಸಾಧ್ಯ. ಹಾಗಾಗಿ ದಲಿತರ ಬಗೆಗೆ ದಲಿತರಿಂದಲೇ ಮೂಡಿದ ಸಾಹಿತ್ಯದಷ್ಟು ಹದ ದಲಿತೇತರರಿಂದ ಅನಾವರಣಗೊಳ್ಳುವುದಿಲ್ಲ ಎನ್ನುವುದು ಈಕ್ಷಣದ ಸತ್ಯ.

ಈ ದೃಷ್ಟಿಯಿಂದ ಕವಿಯ ಅನುಭವ, ಭಾವನೆ, ಕಾಮ, ಕಾಮಾಂಧತೆ, ಹಾದರ, ಅನೈತಿಕತೆ, ಸಹಜ ಪ್ರಕೃತಿ ಪ್ರೇಮ, ಪ್ರೀತಿ ಇದರೊಂದಿಗೇ ಒಡನಾಡುವ ಕವಿ ಅಚಾನಕ್ಕಾಗಿ ತುಸು ಸಾಮಾಜಿಕತೆ ಬಗೆಗೆ ದಲಿತಪರ ಕಾಳಜಿಯಿಂದ ತಮ್ಮ ಲೇಖನಿಯನ್ನು ಓರೆಯಾಗಿ ಇಣುಕಿಸಿದ್ದಾರೆ ಎಂದಷ್ಟೇ ಹೇಳಬಹುದು. ಪ್ರಕೃತಿಯ ಮುನಿಸಿಗೆ ದಿಗಿಲಾಗುವ ಕವಿ ಇನ್ನು ಧರ್ಮಾಂಧ; ಮತಾಂಧ; ವರ್ಣಾಶ್ರಮ ವ್ಯವಸ್ಥೆಯನ್ನು ಒತ್ತಿ ಹೇಳುವ ಮನುಷ್ಯರು ಸಹಜ ಮನುಷ್ಯರೊಂದಿಗೆ ನಡೆಸುವ ತಾರತಮ್ಯದ ಕಡೆಗೆ ಕಣ್ಣು ಹಾಯಿಸಿದಲ್ಲಿ ಇನ್ನೆಷ್ಟು ದಿಗಿಲಾಗಬಹುದಿತ್ತು ಎನಿಸುತ್ತದೆ. ಜೊತೆಗೆ ಕಾವ್ಯದುದ್ದಕ್ಕೂ ಪ್ರೀತಿಯ ಭಿನ್ನತೆಗಳನ್ನು ಕಾಮದ ಪಿಶಾಚತ್ವವನ್ನು ವಿಭಿನ್ನವಾಗಿ ಬಿಚ್ಚಿಡುವ ವರ್ಣಿಸುವ ಕವಿಗಳು ಇಂದು ಹೆಚ್ಚಾಗಿದ್ದಾರೆ. ಅಂತೆಯೆ ಸಿಪಿಲೆಯವರು ತಮ್ಮ ಕಾವ್ಯದ ಪದಗಳಲ್ಲಿ ಎಳೆಯ ಓದುಗರ ಪರೋಕ್ಷ ಕುತೂಹಲವನ್ನು ಆಗ್ರಾಣಿಸುವಂತೆ ಮಾಡಿಬಿಡುತ್ತಾರೆ. ಈ ಬಗೆಗಿನ ವಾಂಛೆ ಇಂದಿನ ದಿಗಳಲ್ಲಿ ಯುವಕರಲ್ಲಿ ಕೊಬ್ಬಿಹೋಗಿದೆ. ಪ್ರೇಮ ಪುರಾಣ, ಕಾಮ ರಾಜಕಾರಣದ ಸುತ್ತಲೇ ಸುತ್ತುವ ಇಂದಿನ ಲೇಖನಿ ಶೂದ್ರತ್ವ–ದಲಿತತ್ವ–ಸ್ತ್ರೀತ್ವದ ಇಂದಿನ ಸಂದಿಗ್ಧ ಸಾಮಾಜಿಕ ಉರಳನ್ನು ಶೋಧಿಸುವ ಹೆಚ್ಚಿನ ಆಸ್ಥೆಯನ್ನು ವಹಿಸುವುದು ಕಡಿಮೆಯಾಗಿದೆ.

ಹಾಗೆಂದಾಕ್ಷಣ ಕವಿಯು ಸಂಪೂರ್ಣ ಎಚ್ಚರ ತಪ್ಪಿ ಇದಕ್ಕೆ ಅಂಟಿಕೊಂಡಿದ್ದಾರೆ ಎಂದರ್ಥವಲ್ಲ. ಆದರೆ ಪ್ರೀತಿ ಪ್ರೇಮಕ್ಕೇ ಹೆಚ್ಚು ಒತ್ತುಕೊಟ್ಟರೆ ಅದರ ಪರಿಣಾಮವೇನು? ಇಂದಿನ ಸಂದರ್ಭದಲ್ಲಿ ಆಧುನಿಕೋತ್ತರ ಕವಿಗೆ ಕಾವ್ಯದ ಪರಿಣಾಮದ ಬಗೆಗೆ ಸದಾ ಜಾಗೃತವಾಗಿರುವ ತೀವ್ರತೆ ಎಷ್ಟಿದ್ದರೂ ಕಡಿಮೆಯೇ. ಜೀವವಿರೋಧಿ ನೆಲೆಯ ಬಹುಮುಖದ ಬಹುಬಗೆಯ ಸಾಧ್ಯವಾದಷ್ಟು ಸಮಸ್ಯೆಗೆ ಪರಿಹಾರವನ್ನು ವರ್ತಮಾನದ ಕಾವ್ಯಧಾರೆಯಲ್ಲಿ ತಮ್ಮದೇ ಧಾಟಿಯಲ್ಲಿ ದಾಖಲಿಸುವ ವಿಶ್ವತೋಮುಖ ಕವಿಯಾಗಬಲ್ಲವನ ಮೂರನೆಯ ಕಣ್ಣು ಸದಾ ಜಾಗೃತವಾಗಿರಬೇಕು ಎಂಬುದು ಶಾಸನ ಬದ್ಧ ನಿಷಿದ್ಧವೇನೂ ಅಲ್ಲ; ಸಾಮಾಜಿಕ ಕಳಕಳಿಯಷ್ಟೇ.

2. ಮಹೂವಾ' ಕಾವ್ಯ ಚಿಮ್ಮಿಸುವ ಬಂಜಗೆರೆ ಜಯಪ್ರಕಾಶರ ದಲಿತಪರ ಕಾಳಜಿ:

ಕುವೆಂಪು, ಬೇಂದ್ರೆ, ಕಾರಂತ ಮೊದಲುಗೊಂಡು ಕನ್ನಡ ಕಾವ್ಯದಲ್ಲಿ ಇಲ್ಲಿಯವರೆಗೆ ತುಳಿತಕ್ಕೊಳಗಾದವರ ಪರವಾಗಿ ಸಾಹಿತ್ಯ 'ಸೃಷ್ಟಿ'! ಮಾಡಿರುವ ಎಷ್ಟೋ ಬರಹಗಾರರಿದ್ದಾರೆ ಎಂಬುದು ನಿಜ. ಆದರೆ ಬಿಡುಗಡೆಗಾಗಿ ಆಶಿಸುವ ಸಮಾನತೆಯ ಸಮಾಜವನ್ನು ಕಟ್ಟುವ ಆಶಯವನ್ನುಳ್ಳ ವಾಸ್ತವದ ನೆಲೆಯ ಕವಿತೆಗಳು ಸಿದ್ದಲಿಂಗಯ್ಯ, ರಂಜಾನ್‌ದರ್ಗಾ, ಅರವಿಂದ ಮಾಲಗತ್ತಿ ಇಂತಹ ಎಡಪಂಥೀಯ ಲೇಖಕರಲ್ಲಿ ಮಾತ್ರ ಕಾಣಸಿಗುತ್ತದೆ. ಹಾಗೆಯೇ ದಲಿತೇತರರಾದ ಬಂಜಗೆರೆ ಜಯಪ್ರಕಾಶರ ಕಾವ್ಯವೂ ಈ ಗುಂಪಿಗೆ ಸೇರಿದ್ದು. ಜಯಪ್ರಕಾಶರು ಕಾಣುವ ಜೀವಪರತೆ, ವರ್ಗತಾರತಮ್ಯದ ವಿರುದ್ಧದ ಸಿಟ್ಟು, ಆಕ್ರೋಶಗಳು ಕೇವಲ ಸಾಂದರ್ಭಿಕ ಪ್ರತಿಕ್ರಿಯೆಗಳಾಗದೆ ನಿರ್ದಿಷ್ಟ ತಾತ್ವಿಕ ಗ್ರಹಿಕೆ ಮತ್ತು ಬದ್ಧತೆಯಿಂದ ಬಂದವುಗಳಾಗಿವೆ. ಜಯಪ್ರಕಾಶರ ಕಾವ್ಯದ ತಾತ್ವಿಕತೆಯನ್ನು ಅವರ ಕವಿತೆಗಳ ಹಿನ್ನೆಲೆಯಲ್ಲಿ ಅರ್ಥೈಸಬಹುದು. ಈಗಾಗಲೇ ಹಲವರು ಬಂಜಗೆರೆ ಕಾವ್ಯದ ಹಿಂಗಿತವನ್ನು ವಿವರಿಸಿ ಅರ್ಥೈಸಿಕೊಂಡಿರುವ ರೀತಿ ಆಧುನಿಕೋತ್ತರ ಕನ್ನಡ ಕವಿಗಳಿಗೆ ಹಾಗೂ ಚಳುವಳಿಯ ಆಸಕ್ತರಿಗೆ ಒಪ್ಪಿಗೆಯಾಗುತ್ತವೆ ಎನ್ನುವಂತಹ ಕೆಲವು ವಿವರಣೆಯನ್ನು ನೇರವಾಗಿ ನಿಬಂಧದ ಆವರಣದಲ್ಲಿ ದಾಖಲಿಸಿಕೊಳ್ಳುವುದರ ಮೂಲಕ ವಿವರಿಸಲಾಗಿದೆ. ಜೊತೆಗೆ ಕೆಲವರ ವ್ಯಾಖ್ಯಾನಗಳು ಹೆಚ್ಚು ಪ್ರೇರೇಪಿಸಿದ ಕಾರಣ ಅದಕ್ಕೆ ಮತ್ತಷ್ಟು ಪೂರಕ ಅಭಿಪ್ರಾಯಗಳನ್ನು ಸೇರಿಸಲಾಗಿದೆ. ಸಮಾಜ ಕೇಂದ್ರಿತವಾದ ಬಂಜಗೆರೆಯವರ 'ಮಹೂವಾ' (ದಂಡಕಾರಣ್ಯ ಹಾಗೂ ಝೂರ್ಕಂಡ್ ಪ್ರಾಂತ್ಯದಲ್ಲಿ ಅರಳುವ ಹೂ) ಕಾವ್ಯದ ನೆಲೆಯನ್ನು ಅಧ್ಯಯನದ ದೃಷ್ಟಿಯಿಂದ ಆದಿವಾಸಿ ಕೇಂದ್ರಿತ ಕಾವ್ಯ, ಸ್ತ್ರೀ ಕೇಂದ್ರಿತ ಕಾವ್ಯ, ಇತಿಹಾಸಿ ಕೇಂದ್ರಿತ ಕಾವ್ಯ, ಪುರಾಣ ಕೇಂದ್ರಿತ ಕಾವ್ಯ ಮತ್ತು ವರ್ತಮಾನ ಕೇಂದ್ರಿತ ಕಾವ್ಯ ಎಂದು ವಿಂಗಡಿಸಿಕೊಳ್ಳಬಹುದು.

'ಶೋಕ ಶ್ಲೋಕವಾಗುವ ಮಾತು ಹಳತು ಈ ಭೂಮಿಗೆ
ಶೋಕ ಶಸ್ತ್ರವಾಗುವ ಗಳಿಗೆ ಬಂದಿದೆ ಈಗ ಭುವಿಗೆ'[30]

ಎಂದು ನಂಬಿ ಹೊರಟಿರುವ ಕವಿ, ಭೂಮಿ ತೂಕದ ಮಹಾಕಾವ್ಯಗಳನ್ನು ಹೊತ್ತರೂ ಅದನ್ನೇ ನಿತ್ಯ ಪಾರಾಯಣ ಮಾಡುವವರು ಅದರೊಳಗಿನ ಒಳಿತನ್ನು ಕಿಂಚಿತ್ತಾದರೂ ಅನುಸರಿಸಿದ್ದರೆ ಈ ಮೊದಲೇ ನಮ್ಮ ದೇಶ ಜಗತ್ತಿನ ದೊಡ್ಡಣ್ಣನ ಸ್ಥಾನದಲ್ಲಿರ ಬೇಕಿತ್ತು. ಪುರಾಣ ಕೇವಲ ಹೇಳೋಕೆ ಬದನೆಕಾಯಿ ತಿನ್ನೋಕೆ ಎನ್ನುವಂತೆ ಮಹಾಭಾರತವನ್ನು ಓದಿಓದಿ ಭಂಡರಾದರೇ ಹೊರತು ತಮ್ಮೊಳಗಿನ ಹೊಲಸು ಮನಸ್ಸನ್ನು ಶುದ್ಧೀಕರಿಸುವ ಮನೋಧರ್ಮ ಮಹಾಕಾವ್ಯವನ್ನು ಹೇಳುವವರಿಗಾಗಲೀ; ಮಡಿಯುಟ್ಟು ಕೇಳಿದವರಿಗಾಗಲೀ ಬಾರದಿದ್ದುದರಿಂದ ವೈಚಾರಿಕತೆಯಿಲ್ಲದೆ; ಇತಿಹಾಸ ಪ್ರಜ್ಞೆಯಿಲ್ಲದೆ; ಸಂಘರ್ಷವಿಲ್ಲ. ಸಂಘರ್ಷವಿಲ್ಲದೆ ಸಮಾನತೆ ಸಾಧ್ಯವಿಲ್ಲವೆಂಬುದನ್ನು ಕವಿ ಒತ್ತಿಹೇಳಿದ್ದಾರೆ.

"ಹಾಗೇ ಸಹೃದಯನೆ
ಮಿಂಚುಗೊಂಚಲು ಹಿಡಿದ
ತಾರೆಗಳ ಸಖ ಕವಿಗೆ ಕೆಲವೊಮ್ಮೆ
ಹರಿದ ಚಪ್ಪಲಿಗೆ ಮೊಳೆ
ಹುಡುಕುವ ಕಾಯಕ"[31]

ಹೊಲಸೊಳಗೆ ಹುಟ್ಟಿ; ಹೊಲಸೊಳಗೆ ಕ್ರೀಡಿಸುತ್ತಲೇ: ಹೊಲಸು ತಿನ್ನುವವ; ಹೊಲೆಯ; ಹೊರಗಿನವರು ಎಂದೆಲ್ಲಾ ಛೇಡಿಸುತ್ತಾ ಅಡಿಗಡಿಗೂ ಮಡಿಮಾಡುವವರ ಹುಟ್ಟಿನ ಮೂಲವೇನೆಂಬುದನ್ನು ಅರಿತಿಹರೆ. ದೊಡ್ಡ ಮತ್ತು ಚಿಕ್ಕ ಕೆಲಸವೆಂಬ ತಾರತಮ್ಯದ ಮನುಜರಿಗೆ ಚಮ್ಮಾರನು ತನ್ನ ಹೊಲಿಯುವ ಕಾಯಕ ಕ್ರಿಯೆಯ ಮೂಲಕ ಬುದ್ಧನ ಬ್ರಾತೃತ್ವದ ಆಶಯವನ್ನು ಮುರಿದು ಸವಕಲಾದ ಸಂಬಂಧವನ್ನು ಕೂಡಿಸುವುದನ್ನು ನಿತ್ಯ ತೋರಿಸುತ್ತಾ ಸಂಕೇತಿಸುತ್ತಾನೆ.

'ಅಯ್ಯಾ! ಶೂನ್ಯ ಸಿಂಹಾಸನಾಧಿಪತಿಯೇ
ಕತ್ತಲಲೆಗಳ ಈಂಟುತ್ತಿವೆ
ಬೆಳಕ ಬಾಹುಗಳು; ಯಾವುದದಗಾಧ
ಜ್ವಾಲೆನಾಲಿಗೆ ಹೆಣೆದು ಹಾಡಿದ
ನಿಗಿನಿಗಿ ಅಗ್ನಿ ಕಾವ್ಯ
ಆಗಸದೆತ್ತರ ಎತ್ತಿದ ಮಾನವತೆ ಪಂಜು'[32]

ಪುರಾಣ; ಹರಿಕಥೆ; ರಾಮ ಭಜನೆ; ಸಂಧ್ಯಾವಂದನೆ; ಸತ್ಯನಾರಾಯಣ ವ್ರತ; ಗುರು ಪೌರ್ಣಮಿ; ವಾರ; ತಿಥಿ; ಸೂತಕ; ಪೌರೋಹಿತ್ಯ; ಶಾಸ್ತ್ರ; ಸೂತ್ರ; ಜನಿವಾರ ಮಣ್ಣು-ಮಸಿ ಎಂದು ಹುಟ್ಟಿನಿಂದ ತಮ್ಮ ಚಟ್ಟದವರೆಗೂ ಅರ್ಥವಿಲ್ಲದ ನಿಯಮಗಳನ್ನೇ ಬಜಾಯಿಸುವ ದೊಡ್ಡವರ ಮಾತು ಕೇವಲ ಗಾಳಿಗೋಪುರವೇ!? ಅಯ್ಯಾ ಎಂದರೆ 'ಹ್ಞಾಂ' ಎಂದು ಹೂಂಗುಟ್ಟುವ ಶೂರರು ಹಸಿದ ಹೊಟ್ಟೆಗೆ ತುತ್ತನ್ನವನು ಕೇಳಿದೊಡನೆ ಮೂಗುಮುರಿಯುವ ಸಣ್ಣತನ; ಅಂಟುತನವನ್ನು ತೋರುವರು. ಈ ತೋರಿಕೆಯ ಪ್ರಪಂಚದ ತೀರ್ಥ; ಆರತಿ; ಫಲ-ಪುಷ್ಪಗಳಿಂದ ಬದಲಾವಣೆ ಸಾಧ್ಯವಾಗದೆ ಇರುವುದರಿಂದ ತಕ್ಕ ಅಸ್ತ್ರಗಳೇ ಮಾನವತೆಯ ಪಂಜನ್ನು ಬೆಳಗಿಸಲು ಸವಾಲಾಗಬೇಕೆಂಬುದು ಇಲ್ಲಿನ ಆಶಯವಾಗಿದೆ. 'ಸುಂದರ ಸುಳ್ಳುಗಳ ಸಂವಿಧಾನ ಸರ್ಕಸ್ಸಿನ ಚಾರ್ಲಿಗಳೇ..ಎಲ್ಲ ಭಕ್ತರಿಗೊಂದೆ ದಕ್ಕುವ ನೈವೇದ್ಯ ಕೂಳಿಗೆ' ಎಂಬ ಕವಿತೆಗಳು ತಾರತಮ್ಯವಿಲ್ಲದ ಸರ್ವರ ಉದ್ಧಾರವನ್ನು, ಜೀವಧರ್ಮದ ನೆಲೆಯಲ್ಲಿ ಕರುಣಿಸಿರುವ ಸಂವಿಧಾನದ ಆಶಯವನ್ನು ದುರ್ಲಾಭಮಾಡಿಕೊಳ್ಳುವ ಪುರೋಹಿತಾಶಾಹಿಗಳಿಗೆ ಕಾವ್ಯದ ಮೂಲಕ ತಿವಿದಿದೆ. ಜೊತೆಗೆ ಮನುವಾದಿಗಳ ದಮನ ಪ್ರವೃತ್ತಿಯನ್ನು ದಮನಿತರು ಪ್ರತಿಭಟಿಸುವ ಬದಲಾಗಿ ಭಿಕ್ಷುಕರ ಪ್ರತಿನಿಧಿಗಳಂತೆ ವರ್ತಿಸುವುದನ್ನು ಕವಿ ವಿಡಂಭಿಸಿದ್ದಾರೆ.

'ಭಕ್ತಿಯಿಂದ ಬಿಚ್ಚಿದರು ಬಾವುಟದ ಲಾಡಿ
'ಜನಗಣ ಮನ' ನುಡಿಯಿತು
ಕಾದಿದ್ದ ಜನ ಬಾಡಿಗೆ ಬ್ಯಾಂಡ್‌ಸೆಟ್...
ಪಟಪಟ ಬಾವುಟ
ಮೆರೆದಿತು ದಿಟ.."[33]

ಕೇವಲ ತೋರಿಕೆಯ ಬುದ್ಧಿಪೂರ್ಣ ಗೋಸುಂಬೆ ಬುದ್ಧಿಯ ನಾಯಕನಟರುಗಳ ಕಪಿಮುಷ್ಟಿಯಲ್ಲಿ ದೇಶ ನಲುಗುತ್ತಿರುವ ನಗ್ನ ಚಿತ್ರಣ ಇಲ್ಲಿದೆ. 'ಸಾಕ್ಷಿಗಳು ಸಿಗದ ಸಾಲು ಕೊಲೆಗಳು ಸಿಂಗರಿಸಿಕೊಂಡಿದ್ದಾಳೆ ಜಾತಿವಂತರ ಮಗಳು ಸೀರೆ ತುಂಬಾ ಸಂಪ್ರದಾಯ ಕೂರೆಗಳು' ಕಳ್ಳ ಮನಸಿನ ಮುಗ್ಧ ಹೆಣ್ಣಿನ ವೇಶದ ನಯವಂಚಕರು ಇಂದು ದೇಶಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಕಾಮುಕರು ನಡುಹಗಲಲ್ಲೆ ಅಮಾಯಕರನ್ನು ಬೆತ್ತಲಾಗಿಸಿದರೂ; ನೇರವಾಗಿಯೇ ಒಂದು ಸಮುದಾಯದವರೊಂದಿಗೆ ಬಯೋತ್ಪಾದನೆಯ ಸುರಿಮಳೆಗೈದರೂ; ಕಾನೂನಿಗೆ ಕಪ್ಪು ಕನ್ನಡಕ ತೊಡಿಸಿ ತಮ್ಮ ಕಡೆಗೆ ನ್ಯಾಯವನ್ನು ಕೊಂಡುಕೊಳ್ಳುವ ಮೂಲಕ ನ್ಯಾಯದೇವತೆಯನ್ನೇ ಅಪಹಾಸ್ಯಮಾಡುವ ದುರಳರೂ ನ್ಯಾಯದ ಮಹಾಚೋರರೂ ದೇಶದ ಕೇಂದ್ರ ಪೀಠದಲ್ಲಿ ಕುಳಿತಿರುವುದರಿಂದ ಯಾವ ಲಾಭವೂ ಇಲ್ಲ, ಇದರ ಬಗೆಗೆ ಎಚ್ಚರ ವಹಿಸಬೇಕಾದ ಅಗತ್ಯವಿದೆ ಎನ್ನುವ ಅಭಿಪ್ರಾಯ ಕವಿಯದ್ದಾಗಿದೆ. 'ಮರಳಿ ಚಿಗುರುವುದೆಂದು ಮರ ಅರಳಿ ಎಲೆ ಹೃದಯಾಕಾರ?' ಎಂಬ ತಾಯ್ತನದ ಕಸುವು; ಬುದ್ಧನ ನಗುವು ಜಗತ್ತಿನ ಎಲ್ಲಾ ಕವಿಗಳ ಹೃದಯದಲ್ಲಿ ಜೀವಂತವಾಗಿರುತ್ತದೆ ಎನ್ನಲು ನಿತ್ಯ ಅಸಮಾನತೆಯ ವಿಷವನ್ನೇ ಉಗುಳುವ ದುರುಳರ ಮತಾಂಧರ ನಡುವೆ ನೂರಾರು ವರ್ಷಗಳ ಕಾಲ ಜೀವಿಸುತ್ತಾ ಎಲ್ಲರಿಗೂ ತಣ್ಣನೆಯ ಶುದ್ಧವಾದ ಜೀವದುಸಿರನ್ನು ನೀಡುವ ಅರಳಿಮರ 'ಎಂದಾದರೂ ಕಲ್ಲೆದೆ ಕರಗದೇ ಎನ್ನುವ ಸದಾಶಯದಲ್ಲಿ ಜೀವಿಸುತ್ತಲೇ' ಸರ್ವರಿಗೂ ಸಮನಾಗಿ ತಂಪೆರೆಯುತ್ತದೆ.

'ಏನು ಕುಶಲವೆ ಕಪ್ಪು ಹುಡುಗ
ದಿನಕ್ಕೆಷ್ಟು ಜೈಲು ಎಷ್ಟು ನೇಣು
ಗಳಿಗೆಗೆಷ್ಟು ಅತ್ಯಾಚಾರ ಮಾನವತೆಗೆ'[34]

ಅಸಹಾಯಕ; ಅಮಾಯಕ; ಶತಮಾನಗಳ ಸತ್ಯಚರಿತ್ರೆಯ ನಿಜ ಅರಿವಿನ, ಅವ್ಯಕ್ತ ಭಾವದೊಳಗಿನ ಅಂತಃಕರಣದ ಕುದಿತ ನಿಟ್ಟುಸಿರು ಹೆಪ್ಪುಗಟ್ಟಿ ತಡೆಯಲಾಗದೆ ಹೊಡೆದಾಗಿನ ಭಾವದ ಹೆಜ್ಜೆಗುರುತು ಈ ನಿಶ್ಯಬ್ದದ ಶಬ್ದ. 'ಹಾಸಿಕೋ ಹಗಲು ಹೊದ್ದುಕೋ ಕತ್ತಲು ಭರವಸೆ ಆತುಕೊಂಡು ನಿಂತುಕೋ 'ಜನಗಣ ಮನ' ಹಾಡುತ್ತಾರೆ.. ಒಂದು ಕಣ್ಣಿಗೆ ಬೆಣ್ಣೆ ಒಂದು ಹೊಟ್ಟೆಗೆ ಕುದಿವ ಎಣ್ಣೆ ಇಕೋ ಲಾಟಿ ಬೂಟಿನ ಎಕೋ ಗಟ್ಟಿಯಾಗಿ ಹಾಡಿಕೋ ಸರ್ವತಂತ್ರ ಸ್ವತಂತ್ರ ಗೀತೆಯನ್ನೆ! ಎಂದು ಮುಂದುವರಿಯುವ ಕಾವ್ಯ ಒಟ್ಟು ಸಾಮಾಜಿಕ ವ್ಯವಸ್ಥೆಯನ್ನು ಗೇಲಿಗೊಳಪಡಿಸಿದೆ. ಇವರ ಕವಿತೆಯಲ್ಲಿ ರಾಷ್ಟ್ರಗೀತೆಯಿದೆ, ಯುಗಾದಿ ಹಬ್ಬವಿದೆ, ಪಂಪನಿದ್ದಾನೆ. ಬೇಂದ್ರೆ, ಪು.ತಿ.ನ. ಕುವೆಂಪು ಸಹ ನೆನಪಾಗುತ್ತಾರೆ. ಹಾಸಿಕೋ ಹಗಲು..ಕವಿತೆಯಲ್ಲಿ ಸ್ವಾತಂತ್ರ್ಯದ ನಂತರವೂ ಸುಧಾರಣೆಯಾಗದ ಭಾರತೀಯರ ಜನಜೀವನದ ಬಗೆಗೆ ನೋವಿದೆ. ಹಸಿವು, ಹಿಂಸೆ ತುಂಬಿಹೋಗಿರುವ ನೆಲದಲ್ಲಿ 'ಆರಂಕುಶವಿಟ್ಟೊಡೇಂ'ಎಂದು ಹೇಳುವ ಮೂಲಕ ಪಂಪನ ಭಾವಪೂರ್ಣವಾದ ದೇಶಾಭಿಮಾನವೇ ಇಲ್ಲಿ ವಿಡಂಬನೆಗೆ ಗುರಿಯಾಗಿದೆ.

'ವ್ಯಥೆಯೆಂದರೆ ಈ ಯುದ್ಧ...
ಇನ್ನು ದುರಂತವೆಂದರೆ
ಯುದ್ಧವನ್ನು ಯುದ್ಧದಿಂದಲೇ
ಕೊನೆಗಾಣಿಸಬೇಕಾಗಿರುವುದು'[35]

ಯಾವ ಮಗುವೂ ತನ್ನ ತಂದೆಯೊಂದಿಗಿನ ಅವಿನಾಭಾವ ಸಂಬಂಧವನ್ನು ಕತ್ತರಿಸಿಕೊಳ್ಳಲು ಸಾಧ್ಯ. ಈ ತಾಯ್ತನ ಮತ್ತು ಮಗುವಿನ ಕೋಮಲ ಮನದ ಆಳದಿಂದ ಹೊರತಾದವರು ಯುದ್ಧ

ಪಿಪಾಸುಗಳಾಗಲು ಮಾತ್ರ ಸಾಧ್ಯ. ವರ್ತಮಾನ ಕೇಂದ್ರಿತವಾದ 'ಹೊರಡುವಾಗಿನ ಮಾತು' ಕವಿತೆ ಜಾಗತಿಕವಾಗಿ ಮನುಷ್ಯನನ್ನು ಪಣಕ್ಕಿಟ್ಟಿರುವ ಯುದ್ಧವನ್ನು ಕುರಿತದ್ದಾಗಿದೆ. ಯುದ್ಧವನ್ನು ಯುದ್ಧದಿಂದಲೇ ಕೊನೆನಾಣಿಸಬೇಕಾಗಿದೆ ಎನ್ನುವುದು ಹೊರಟು ನಿಂತಿರುವ ಈ ಸೈನಿಕನಿಗೆ ಗೊತ್ತಿದೆ. ಆದರೂ, ಅವನು ಹೇಳುವುದೇನೆಂದರೆ; 'ಪ್ರಿಯೆ ನನ್ನ ಬೇಡಿಕೆ ಇಷ್ಟೆ ಸತ್ತ ಶಪಥಕ್ಕೆ ಕ್ಷಮೆ ನೀಡು ಯುದ್ಧ ವಿರೋಧಿ ಕವಿತೆ ಬರೆದಿಡು, ಮತ್ತೆ ಹಿಂತಿರುಗಿ ಬರಬಲ್ಲ ಪರಮವೀರನಿಗೆ ನಿನ್ನ ಹೃದಯ ಕೊಡು' ಎಂದು ವಿಶ್ವಬ್ರಾತೃತ್ವವನ್ನು ಸಾವಿನ ಸೂತಕದ ವಾಸನೆಯ ತಾಣದಲ್ಲಿ ನಿಂತುಮಾತನಾಡುವ ದೇಶಪ್ರೇಮಿಯು ಮಾನವ ಜಗತ್ತಿನ ಕಳಕಳಿ ಇರುವ ಎಂತಹವರ ಅಂತರಂಗದ ಕಣ್ಣನ್ನು ತೇವಗೊಳಿಸದೆ ಇರುವುದಿಲ್ಲ. ಜಗತ್ತಿನ ಯಾವ ತಾಯಿಯೂ ಯುದ್ಧವನ್ನು ಬಯಸುವುದಿಲ್ಲ; ಒಂದು ವೇಳೆ ಜೀವಸಹಿತ ಬರಲಾರದ ಸನ್ನಿವೇಶದಲ್ಲಿ 'ಹಗಲು ವಿಧವೆಯಾದರೆ' ಎಂಬ ಮಾತಿನಲ್ಲಿ ಯುದ್ಧ ಹೋರಾಟದಲ್ಲಿ ತನ್ನ ಸಂಗಾತಿಗೆ ಬರಬಹುದಾದ ವೈಧವ್ಯದ ಸೂಚನೆಯೂ ಇದೆ. 'ಹಗಲು ವಿಧವೆಯಾದರೆ' ಎಂಬ ಒಂದೇ ಸಾಲಿನಲ್ಲಿ ಯುದ್ಧದ ಕ್ರೌರ್ಯವಿದೆ. 'ಬಂಡಾಯ ಕಾವ್ಯದಲ್ಲಿ ಯುದ್ಧ ವಿರೋಧಿ ನಿಲುವಿನ ಒಂದು ದೊಡ್ಡ ಪರಂಪರೆಯೇ ಇರುವುದು; ದರ್ಗಾ ತಮ್ಮ ಕಾವ್ಯವನ್ನು ಜಗತ್ತಿನ ಸಮಸ್ತ ಯುದ್ಧ ದ್ವೇಷಿಗಳಿಗೆ ಅರ್ಪಿಸುತ್ತಾರೆ. ಜಗತ್ತಿನ ನಿದ್ದೆಗೆಡಿಸುವ ಯುದ್ಧವನ್ನು ಕುರಿತು ಅದರ ವಿಕೃತಗಳು ಬಂಡಾಯ ಕಾವ್ಯದಲ್ಲಿ ಹೆಚ್ಚು ಘೋಷಣಾತ್ಮಕವಾಗಿ ಕಾಣಿಸಿಕೊಂಡರೆ, ಬಂಜಗೆರೆಯವರ ಈ ಕವಿತೆ ಸಂಯಮದಲ್ಲಿ ಸಂಗಾತಿಗೆ ತೋಡಿಕೊಳ್ಳುವ ನಿವೇದನೆಯಾಗಿದೆ.

'ಪ್ರೀತಿಯೆಂಬ ನವಿರು ಗರಿಕೆಯ ಮೇಲೆ ಜಾತಿ ಕವಾಯತು ಮಾನವತೆ ಮಡಕೆ ತೂತುತೂತಾಗಿಸಿದೆ. ಮಾನವ ಸಂಬಂಜ ಅನ್ನೋದು ದೊಡ್ಡು ಕನಾ ಎನ್ನುವ ದೇವನೂರರ ಕುಸುಮ ಬಾಲೆ ಕಾದಂಬರಿಯ ಕೊನೆ ಸಾಲು ಜಗದ ಆದಿಯೇ ಆದ ಈ ಪ್ರೀತಿಯನ್ನು ಗರಿಕೆ ಎನ್ನುವ ಪ್ರತಿಮೆ ಇಲ್ಲಿ ಚೆನ್ನಾಗಿ ಅಡಕಗೊಂಡಿದೆ. ಎಷ್ಟು ಕಿತ್ತೊಗೆದರೂ ಗರಿಕೆ ಮತ್ತೆ ಮತ್ತೆ ಚಿಗುರುವ, ಪುಟಿದೇಳುವ ಶಕ್ತಿಯು ಪ್ರೀತಿಯಲ್ಲಿರುವುದನ್ನು ಕವಿ ಕಂಡುಕೊಂಡಿದ್ದಾರೆ. ಆದರೆ ಸಮಾನತೆಗೆ ವಿರುದ್ಧವಾಗಿರುವ, ಪ್ರೀತಿಗೆ ಮುಳುವಾಗಿರುವ ಜಾತಿಯ ಮುನುಷ್ಯತ್ವದ ಮಡಕೆಯನ್ನೇ ತೂತು ಮಾಡುತ್ತಿದೆ ಎನ್ನುವಲ್ಲಿ ಚಿಕಿತ್ಸಕವಾದ ಸಾಮಾಜಿಕ ಒಳನೋಟವಿದೆ.

'ಇಲ್ಲು ಮಹಲುಗಳಲ್ಲೇ ಬಂಧೀಖಾನೆಗಳಿವೆ
ಹೃದಯಗಳು ಬೆಳದು ಹಾಯದೆ ಗುಹೆಗಳಾಗಿವೆ
....ಎಷ್ಟು ಸಾವು ಚೆಲ್ಲುತ್ತವೋ ಈ ನೆಲದ ಪಾತ್ರೆಗೆ
ಬದುಕು ಅಳೆಯುವಾಗ ಈ ಭೂಲೋಕವನ್ನು,
ಚೆಲ್ಲಿದಾಗಲೂ ಕೆಲವು ಸಾವು
ಹೆಚ್ಚಿಸುತ್ತವೆ ಬದುಕಿನ ಅಳತೆಯನ್ನು'[36]

ಆರಂಭದಿಂದಲೂ ಕವಿ ಮಾಡುವ ವ್ಯಂಗ್ಯ ವಿಡಂಬನೆಗೆ ಈ ಸಾಲುಗಳು ತಾತ್ವಿಕ ಅರ್ಥವನ್ನು ನೀಡುತ್ತವೆ. ಮೂಲಭೂತ ಹಕ್ಕು ವಂಚಿತರ, ದಮನಿತರ ಜನರ ನಡುವೆ ಇರುವ ಢಾಂಭಿಕ ವ್ಯವಸ್ಥೆಯನ್ನು, ವರ್ಗ ಅಸಮಾನತೆಯನ್ನು ಸೂಚಿಸಿ ಸೋಗಿನ ಸ್ವಾತಂತ್ರ್ಯದ ಅಣಕು ಮಾಡುವ ಕಾವ್ಯದ ಗುಣದಿಂದ ಈ ಆಧುನಿಕೋತ್ತರ ಕಾಲದಲ್ಲಿ ಶೂನ್ಯಾವಸ್ಥೆಗೆ ಸರಿಯುತ್ತಿರುವ ದಲಿತ–ಬಂಡಾಯ ಸಾಹಿತ್ಯದ ರಾಜಕಾರಣಕ್ಕೆ ಪುನಶ್ಚೇತನವಾಗಿ ಬಂಜಗೆರೆಯಂತವರ ಕಾವ್ಯ ಕಸುವು ಮಾರ್ಗದರ್ಶಿಯಾಗುತ್ತದೆ.

ಕೊನೆ ಟಿಪ್ಪಣಿ

1. ಲಕ್ಷ್ಮೀ ನಾರಾಯಣಸ್ವಾಮಿ ಎಚ್: 'ಗೆಳತಿ ಮತ್ತೊಮ್ಮೆ ಯೋಚಿಸು' ಕ.ಸಂ. (ಫ್ರೆಂಡ್ಸ್ ಪಬ್ಲಿಕೇಷನ್ಸ್: 2011) ಮುನ್ನುಡಿ.
2. ಸುರೇಶ್ ಗೌತಮ್: 'ಬೆಳ್ಳಿಗೆರೆಯ ದೀವಿಗೆ' ಕ.ಸಂ.(ವಿಧೀಶಾ ಪ್ರಕಾಶನ: 2007) 'ಹಸಿದವರ ಹಾಡು' ಪು. 23.
3. ಸುರೇಶ್ ಗೌತಮ್: 'ಮಾತು ಕೊಂದ ಭಾರತ' ಕ.ಸಂ. (ವಿಧೀಶಾ ಪ್ರಕಾಶನ: 2013) ಮುನ್ನುಡಿ
4. ಅದೇ: 'ಅವ್ವ' ಪು. 17.
5. ಅದೇ: 'ಅವ್ವ' ಪು. 17.
6. ಅದೇ: 'ಮುಟ್ಟಿನ ನೆತ್ತರಲಿ' ಪು. 27.
7. ಅದೇ: ಬೆನ್ನುಡಿ.
8. ಲಕ್ಕೂರು ಆನಂದ: 'ಇತಿ ನಿನ್ನ ವಿಧೇಯನು' ಕ.ಸಂ.(ಕಣ್ವ ಪ್ರಕಾಶನ: 2010) 'ಜಾಜಿ ಹೂ' ಪು. 2.
9. ಅದೇ: 'ಬಟವಾಡೆಯಾಗದ ರಸೀತಿ' ಪು. 75.
10. ಅದೇ: 'ಮಣ್ಣು' ಪು .89.
11. ಅದೇ: 'ಅಗುಳ ಮೇಲಿನ ಋಣದ ಮಾತು' ಪು. 91.
12. ಅದೇ: 'ಅಲ್ಲಿ ಸಂತೈಸುವ ಕೈ ಒಂದೂ ಇರಲಿಲ್ಲ' ಪು. 93.
13. ಹನಸೋಗೆ ಸೋಮಶೇಖರ್: 'ಭೀಮ ಪಲ್ಲವಿ' ಕ.ಸಂ. (ಸ್ವಯಂ ಪ್ರಕಾಶನ: ಮೈಸೂರು, 2002) 'ಬಹುಜನ' ಪು. 2.
14. ಅದೇ: 'ಜೈ ಭೀಮ' ಪು. 14.
15. ಅದೇ: 'ಚರಮ ಗೀತೆ' ಪು. 28.

16. ಅದೇ: 'ಸುಮ್ಮನಿರಲಾರ' ಪು. 29.
17. ಅದೇ. 'ನೀತಿ' ಪು. 64.
18. ಅದೇ: 'ಮೊದಲ ಮಾತು'
19. ಕುಶಾಲ ಬರಗೂರು: 'ಅರವಿಂದ ಮಾಲಗತ್ತಿ ಅವರ ಕಾವ್ಯಾನುಸಂಧಾನ' (ಈಶ್ವರಿ ಪ್ರಕಾಶನ: 2005) ಮುನ್ನುಡಿ.
20. ಅರವಿಂದ ಮಾಲಗತ್ತಿ: 'ನಾದ-ನಿನಾದ' (1999) ಕ.ಸಂ. 'ಒಬ್ಬ ತಂದೆಯ ಹಾಡು'
21. ಅದೇ: 'ಮಾನವಂತರ ಹಾಡು'.
22. ಅರವಿಂದ ಮಾಲಗತ್ತಿ: 'ಸಿಲಿಕಾನ್ ಸಿಟಿ ಮತ್ತು ಕೋಗಿಲೆ' ಕ.ಸಂ. (2003) 'ಜ್ಞಾನ ಜೋಳಿಗೆಯಲಿ ಹೊನ್ನ ಕಡೆಗೋಲು'
23. ಸಿದ್ಧಲಿಂಗಯ್ಯ: 'ಹೊಲೆಮಾದಿಗರ ಹಾಡು' ಕ.ಸಂ. (1975) 'ಒಂದು ಪದ'
24. ಅದೇ: 'ಒಂದು ಮೂಳೆಯ ಹಾಡು'

25. ಅರವಿಂದ ಮಾಲಗತ್ತಿ: ಶ್ರೀ ಚಂಡಾಲ ಸ್ವರ್ಗಾರೋಹಣಂ' ಮಹಾಕಾವ್ಯ (2004)
26. ಅದೇ: 'ಬೆಂದ ಮನದ ಸುತ್ತ ಮುತ್ತ' ಪು. 45.
27. ಅದೇ: 'ಉತ್ತರ' ಪುಟ. 82.
28. ಅದೇ: 'ಹೂ ಬನದ ತುಂಬೆಲ್ಲ' ಪು. 142.
29. ಅದೇ: 'ಮೈ ಹಿಂಡುತ ಬದುಕಿ' ಪು. 93.
30. ಬಂಜಗೆರೆ ಜಯಪ್ರಕಾಶ್: 'ಮಹೂವಾ' ಕ.ಸಂ. (ಚರ ಪ್ರಕಾಶನ: ಹಾರೋಹಳ್ಳಿ, 1992) 'ಇದ್ದಲಿಗೊಂದು ಪಾಡ್ದನ' ಪು. 54.
31. ಅದೇ: 'ಬುದ್ಧಿವಾದ' ಪು. 24.
32. ಅದೇ: 'ಏನ ಹೇಳಲಿ ನಾನು' ಪು. 57.
33. ಅದೇ: 'ಅರ್ಥಾಂತರ' ಪುಟ. 48.
34. ಅದೇ: 'ಸತ್ತು ಬದುಕುವ ಹುಡುಗನಿಗೆ ಚರಮಗೀತಿ' ಪು. 35.
35. ಅದೇ: 'ಹೊರಡುವಾಗಿನ ಮಾತು' ಪು. 16
36. ಅದೇ: 'ಎನ್ಕೋಸಿ ಸಿಕಲೆಲೆ ಆಫ್ರಿಕಾ' ಪು. 5.

ಅಧ್ಯಾಯ–3

ಆಧುನಿಕೋತ್ತರ ದಲಿತ ಕಾವ್ಯಗಳಲ್ಲಿನ ತಾತ್ವಿಕ ಚಿಂತನೆ

ಅ. ಸುರೇಶ್ ಗೌತಮ್ ಕಾವ್ಯದೊಳಗಿನ ತಾತ್ವಿಕತೆಯ ವಿಶ್ಲೇಷಣೆ:

ನಿರಂತರ ಹತ್ತು ಹಲವು ಸಮಾಜಮುಖೀ ಚಿಂತಕರೊಂದಿಗೆ ತಮ್ಮ ಪಂಚೇಂದ್ರಿಯಗಳನ್ನು ತೆರೆದಿಡುವ ಕವಿ ಸುರೇಶ್‌ಗೌತಮ್‌ರ ಮಾತುಗಳಲ್ಲೇ ಹೇಳವುದಾದರೆ "ಸಮಾಜ ಪರಿವರ್ತನ ಶಿಬಿರಗಳಲ್ಲಿ ಪಂಚೇಂದ್ರಿಯಗಳ ಕಣ್ಣು ತೆರೆಯಿತು. ಸಹಸ್ರಾರು ವರ್ಷಗಳಿಂದಲೂ ಈ ನೆಲದ ವಾರಸುದಾರರ ಕಣ್ಕಟ್ಟಿ, ನೆಲಕಟ್ಟಿದ ನೆಲದೊಡೆಯರನ್ನು ನೆಲದಿಂದ ಒರಗಿಟ್ಟು ನಡೆಸಿಕೊಳ್ಳುತ್ತಿರುವ ರೀತಿ ಮಾನವಲೋಕದ ಮಹಾ ದುರಂತ ಎಂದೆನಿಸಿತು. ಅಸ್ಪೃಶ್ಯರ ಮನೆಯ ಹೆಣ್ಣು ಮಗಳನ್ನು ನಡುಬೀದಿಯಲ್ಲಿ ಅತ್ಯಾಚಾರ ಮಾಡಿದ ದುಷ್ಕೃತ್ಯವನ್ನು ಪ್ರತಿಭಟಿಸಿ ಪ್ರಶ್ನಿಸುವ ಸಂದರ್ಭದಲ್ಲಿ ನೊಂದು ಹತಾಸೆಗೊಂಡ ಅಸ್ಪೃಶ್ಯ ಮನಸ್ಸುಗಳು ಬೈದ ಬೈಗುಳವನ್ನೂ ಸಹ ಅತ್ಯಾಚಾರ ಮಾಡಿದವರು ಸಹಸಿಕೊಳ್ಳಲು ಸಾಧ್ಯವಾಗದೆ ಊರಿಗೆ ಊರೇ ಹೊತ್ತಿ ಉರಿದ ಘಟನೆ ನಮ್ಮ ಮುಂದಿದೆ.[1] 'ಮುಟ್ಟಿನೊಂದಿಗೆ ಹುಟ್ಟಿದವರು ನಾವು!' ಮಾನವ ಸಂಬಂಧಿ ನಾಗರೀಕತೆಯನ್ನು ಕಟ್ಟಿ, ಹುಟ್ಟುತ್ತಲೇ ಎಲ್ಲರೆದೆಯ ಮುಟ್ಟಿ, ಸಹೋದರತೆಯ ಬಿಚ್ಚಿ ಹೇಳಿದವರು. ಆದರೆ ಇವತ್ತು ನಾಗರೀಕತೆಯೇ ನಾಚಿ ತಲೆತಗ್ಗಿಸುವ ದುಸ್ಥಿತಿಗೆ ತಳ್ಳಲ್ಪಟ್ಟಿದ್ದೇವೆ. ನನ್ನೊಳಗಿನ ನನಗೇ ಸಂಘರ್ಷವಿದೆ. ಎಷ್ಟೋ ಸಾರಿ ನನ್ನನ್ನು ನಾನೇ ಬೈದುಕೊಂಡಿದ್ದೇನೆ. ಕೋಳಿ ಮಾತಿಗಾಗಿ ಹೊಡೆದಾಡಿ ಜೈಲಿಗೋದ ನೆರೆಯವರ ಕಂಡು ಮರುಕಪಟ್ಟಿದ್ದೇನೆ. ನಲ್ಲಿ ನೀರಿಗಾಗಿ ಕಿತ್ತಾಡಿ ಊರು ಬಿಟ್ಟವರ ಹತ್ತಿರದಿಂದ ನೋಡುತ್ತಲೇ ಇದ್ದೇನೆ"[2]

ಎನ್ನುವ ಸುರೇಶ್ ಒಳಗೆ ಅಂಬೇಡ್ಕರ್ ಮನಸಿನ ಧ್ವನಿ ಜಾಗೃತಾವಸ್ಥೆಯಲ್ಲಿ ಇಡೀ ವ್ಯಸ್ಥೆಯೊಂದಿಗೆ ಕಾವ್ಯದ ಮುಖ್ಯೇನ ಸಂವಾದಿಸುತ್ತದೆ. ಇಲ್ಲಿನ ಅಸಮಾನತೆಯ ವಿರುದ್ಧ ಬರಹದ ಮೂಲಕ ಮಾತನಾಡುವ, ಆ ರೀತಿಯಿಂದ ಬದಲಾವಣೆಯನ್ನು ನಿರೀಕ್ಷಿಸುತ್ತಾರೆ. ಕಾವ್ಯದಲ್ಲಿನ ಸಾಲುಗಳಲ್ಲಿ ತನ್ನವ್ವ ಸಮುದಾಯದವರೊಂದಿಗೆ ಸಂವಾದಿಸುತ್ತಿದ್ದ ರೀತಿಯಿಂದ ಸಮಾನತೆಯಿಂದ ಬದುಕಬೇಕೆಂಬುದನ್ನು ಮೊದಲು ಕವಿ ಕಲಿತುಕೊಳ್ಳುತ್ತಾರೆ. ಅವಳ ಮನಸ್ಸೆಂಬ ಪಠ್ಯ ಪುಸ್ತಕದಲ್ಲಿನ ಮುಗ್ಧತೆ, ಪಾರದರ್ಶಕತೆ, ಅನುಕಂಪ ಮತ್ತು ಜೀವಪರತೆ ಕವಿಯನ್ನು ಎಚ್ಚರಿಸಿವೆ. ಅವಳು ತನ್ನನ್ನು ಹೆತ್ತುಹೊತ್ತವಳು ಮಾತ್ರವಲ್ಲ ಪ್ರಿಯತಮೆಯೂ ಹೌದು. ಸರಿತಪ್ಪುಗಳ ಹುಡುಕಾಟದಲ್ಲಿ ಸದಾ ನಡೆದಾಡುತ್ತಿರಲು ಬಯಸುವ ತನ್ನ ಜನರ ಒಡಲಾಳದ ಮಾತುಗಳನ್ನು ಕಾವ್ಯ–ವಿಚಾರ–ಚರ್ಚೆ–ಅರಿವಿನ ಶಿಬಿರದ ಮೂಲಕ ಹಿಡಿಯಾಗಿ ಹೇಳಲು ಹೊರಟಿದ್ದಾರೆ. ಸಂವಿಧಾನ ತಿರುಚುವವರ ವಿರೋಧಿಸುವ ಕವಿ ತನ್ನ ಅರಿವನ್ನು ವಿಸ್ತರಿಸಿದ ಎಲ್ಲರನ್ನು ನೆನೆಯುತ್ತಾ ಮನದೊಳಗೆ ಮೆಲುಕು ಹಾಕುತ್ತಾರೆ. ಎಲ್ಲೋ ಕಳೆದು ಹೋಗಿ ತೆವಳುತ್ತಿರುವ ಅವ್ವಳನ್ನು ಅಕ್ಷರದ ಗೆರೆಗಳಲ್ಲಿ ಸದಾ ತಡಕುವ ಸುರೇಶ್ ಗೌತಮ್ ಮಾನವತೆಗೆ ವಿರುದ್ಧವಾದ ಧರ್ಮಾಂಧತೆ; ಅಮಾನುಷತೆಯನ್ನು ವಿರೋಧಿಸುತ್ತಾ ಬುದ್ಧತ್ವದೆಡೆಗೆ ಸದಾ ತುಡಿಯುವ ತಾಯ್ತನ ಕಸುವನ್ನು ಅವರ ಕಾವ್ಯತ್ವದಲ್ಲಿ ಉಳಿ ಸಿದ್ದಾರೆ.

ಆ. ಲಕ್ಕೂರು ಆನಂದ ಕಾವ್ಯದ ತಾತ್ವಿಕತೆ:

ಬದುಕಿನ ಬೇಕಾದಷ್ಟು ಅವಕಾಶಗಳನ್ನು ಉಪಯೋಗಿಸಿಕೊಳ್ಳದೆ, ಪ್ರಕೃತಿದತ್ತ ಸಹಜ ಬದುಕಿನ ಸೌಂದರ್ಯವನ್ನು ಒಳಗಣ್ಣಿನಿಂದ ನೋಡದೆ ಇಂದು ದಲಿತರು ಜಾತಿ ಬಗೆಗೆ ಬರೆಯುವುದೇ ಒಂದು ಸಾಮಾಜಿಕ ಕಾಯಿಲೆಯಾಗಿದೆ. ಬರೆಯುವ ರೋಗಿಗಳೇ ಹೆಚ್ಚಾಗಿದ್ದಾರೆ. ಇರುವ ಗಾಯವನ್ನೇ ಕಿತ್ತುಕೊಂಡು ದೊಡ್ಡಗಾಯ ಮಾಡಿಕೊಳ್ಳುವವರು ಇದ್ದಾರೆ...ಎಂಬ ಅಭಿಪ್ರಾಯ ಇಂದು ಕೆಲವರಲ್ಲಿದೆ; ಆದರೆ, ಈ ಅಭಿಪ್ರಾಯ ಸರಿಯಲ್ಲ ಎನ್ನಲು ಇಂದಿನ ಸಂದಿಗ್ಧತೆಗಳೇ ಅರ್ಥೈಸುತ್ತವೆ. ದಲಿತರ ಸಾಂಸ್ಕೃತಿಕ, ರಾಜಕೀಯ, ಸಮಾಜಿಕ ದಿವಾಳಿತನಕ್ಕೆ ಕಾವ್ಯಗಳು ಪರಿಣಾಮಕಾರಿಯಾದ ಚುಚ್ಚುಮದ್ದಾಗಿವೆ. ಇಂದು ನಾಡಿನಲ್ಲಿ ಹತ್ತಾರು ಸಂಘ ಸಂಸ್ಥೆಗಳು, ಪರಿಷತ್ತುಗಳಂತೆ ದಲಿತ ಕವಿಗಳ ಕಾವ್ಯ ಪರಿಷತ್ತು ಎಂದು ಮಾಡಿಕೊಂಡು ಅದನ್ನು ರಾಜಕೀಯವಾಗಿ ಬೆಳೆಸಬಹುದಾದ ಸಾಧ್ಯತೆಯನ್ನು ಸಾಧಿಸಬಹುದಿತ್ತೇನೋ. ಆದರೆ ಇಂದು ಯಾವೊಬ್ಬ ದಲಿತ ಸಾಹಿತಿಯೂ ಸಾಮುದಾಯಿಕವಾಗಿ ಒಟ್ಟುಗೂಡಿಸಿ ಅವರ ಸುತ್ತ ಮಾನಸಿಕವಾದ, ಧರ್ಮದ, ಜಾತಿಯ, ಮತದ ಕೋಟೆ ಕಟ್ಟಿಲ್ಲವೆಂಬುದು ಸಂತಸದಾಯಕ ವಿಚಾರ.

ಕಾವ್ಯದ ಧೋರಣೆ ಮುಖ್ಯವಾಗಿ ಜನಸಾಮಾನ್ಯರ ಭಾಷೆಯಾಗಬೇಕಾಗಿದೆ. 'ಶಬ್ದ'ವೆಂದರೆ ಅದಕ್ಕೆ 'ಅರ್ಥ'ವೆಂದೂ ವ್ಯಾಖ್ಯಾನವಿದೆ. ಹಾಗೇಯೇ ಈ 'ಮಾತು' ಅನ್ನೊದಕ್ಕೆ 'ಅರ್ಥ' ಇದ್ದಾಗ ಅದು 'ಒಳ್ಳೇ ಶಬ್ದವೂ' 'ಸಾಹಿತ್ಯವೂ' ಆಗಲು ಸಾಧ್ಯ. ಜನ ಸಾಮಾನ್ಯರಿಗೆ ಅರ್ಥವಾಗದಿದ್ದ ಮೇಲೆ ಏನು ಬರೆದರೂ ಅದು ಅನರ್ಥವೇ ಸರಿ. ಕನ್ನಡ ಸಾಹಿತ್ಯದಲ್ಲಿ ಜನಸಾಮಾನ್ಯರಿಗೂ; ಪಂಡಿತರಿಗೂ ಎಟುಕಿದ ವಚನಸಾಹಿತ್ಯವೊಂದನ್ನು ಒರತುಪಡಿಸಿ ಉಳಿದ ಬಹು ಸಾಹಿತ್ಯ ಕಬ್ಬಿಣ ಕಡಲೆಯಾಗಿದ್ದೇ ಜಾಸ್ತಿ. ಇವತ್ತಿನವರೆಗಿನ ದಲಿತ ಸಾಹಿತ್ಯವನ್ನು ಪರಾಮರ್ಶಿಸಿದಾಗ ಹಿಂದಿನವರಂತೆ ಗಟ್ಟಿ ಅನಿಸದಿದ್ದರೂ ಮಿತಿಯೊಳಗೆ ಪಯಣಿಸಿದೆ ಮತ್ತು ಆ ಪಯಣ ಸುಲಭ ಸಾಧ್ಯವಾಗಿರಲಿಲ್ಲ ಎಂಬುದು ಸತ್ಯಸ್ಯ ಸತ್ಯ. ಅಂದಿನ ಸಿದ್ಧಲಿಂಗಯ್ಯರ ಕಾವ್ಯ 'ಇಕ್ಕರ್ಲಾ ವದಿರ್ಲಾ ಇವ್ರ ಚರ್ಮ ಎಬ್ರುಲಾ'[3] ಎಂಬಂತಹ ಸಾಹಿತ್ಯ ಅವರಿಂದ ಇಂದು ಸಾಧ್ಯವಿಲ್ಲ. ಅದು ಗುಡಿಸಲ ಹಾಡಾಗದೆ ಇನೋವಾದಲ್ಲಿ ಕುಳಿತು ನೋವಿರದೆ ಬರೆದ ಹುಸಿ ಕವಿತೆಯಾಗುತ್ತದೆ. ಅದಕ್ಕೆ ರೊಮ್ಯಾಂಟಿಕ್ ಆಗಿ ಬರೆಯಲು ತಿರುಗಿದ ಬಗೆಯನ್ನೇ ಉದಾಹರಿಸಬಹುದು. ಅವರ ಮೊದಲ ಎರಡು ಸಂಕಲನಗಳು ಮಾಡಿದ ಪರಿಣಾಮ ಮೂರನೆಯ ಕಾವ್ಯ ಮಾಡದೆ ಹೋದದ್ದು ಅದನ್ನು ಬಯಲಾಗಿಸಿದೆ, ಅಂಹ ಕಾವ್ಯ ಸಮುದಾಯದ ನೋವಿನ ಕವಿತೆಯಾಗಲು; ಅವರ ಪ್ರತಿನಿಧಿತ್ವದ ಕವಿತೆಯಾಗಿಸಲು ಸಾಧ್ಯವಾಗುವುದೇ ಇಲ್ಲ. ವೈಯುಕ್ತಿಕ ಬದುಕಿಗೆ ತಿರುಗಿದ ತಮ್ಮ ಮಿತಿಯನ್ನು ತಾವೇ ಘೋಷಿಸಿಕೊಂಡ ಮತ್ತೂ ಅಲ್ಪಾಯುಷ್ಯದ ಕವಿತ್ವದ ಸೂಚನೆಯಾಗುತ್ತದೆ.

ಇ. ಹನಸೋಗೆ ಸೋಮಶೇಖರ್ ಕಾವ್ಯದ ತಾತ್ವಿಕ ಚಿಂತನೆ:

ಕಾವ್ಯವೆಂದರೇನು, ಅದು ಹೇಗಿರಬೇಕು, ಅದರಿಂದ ಬರುವ ಪ್ರಯೋಜನವೇನು ಎಂಬಿವೇ ಮೊದಲಾದ ಪ್ರಶ್ನೆಗಳು ಕಾಲದಿಂದ ಕಾಲಕ್ಕೆ ಭಿನ್ನಭಿನ್ನ ಉತ್ತರಗಳನ್ನು ಪಡೆದುಕೊಳ್ಳುತ್ತಾ ಬಂದಿರುವುದನ್ನು ಸಾಹಿತ್ಯ ಚರಿತ್ರೆಯಲ್ಲಿ ನಾವು ಗುರುತಿಸಬಹುದಾಗಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಇಲ್ಲಿ ಕಲುಷಿತಗೊಳ್ಳದ ಕ್ಷೇತ್ರಗಳೇ ಇಲ್ಲವೆನ್ನಬಹುದು. ಕಲೆ, ಸಾಹಿತ್ಯ, ಇತಿಹಾಸ ಇವೇ ಮೊದಲಾದ ಮುಖ್ಯ ಕ್ಷೇತ್ರಗಳು ಎಷ್ಟೊಂದು ತಿರುಚಲ್ಪಟ್ಟಿವೆ. ಈ ದೇಶದ ಕೋಟ್ಯಾನುಕೋಟಿ ಮೂಲನಿವಾಸಿ ಬಹುಜನರ ಬದುಕೇ ಅದರಲ್ಲಿ ಇಲ್ಲವಾಗಿದೆ! ಇದ್ದರೂ ಅದು ಸತ್ತಿದೆ ಅಥವಾ ವಿಕಾರಗೊಂಡಿದೆ. ಮಾನವೋನ್ನತಿಗಾಗಿ ಶ್ರಮಿಸಿದ ಮಹಾಚೇತನಗಳನ್ನು ಮರೆಮಾಚಿ ಬ್ರಾಹ್ಮಣೋನ್ನತಿಗಾಗಿ ಶ್ರಮಿಸಿದ ಕುಬ್ಜ ಮನುಷ್ಯರನ್ನು ಮಹಾಮಾನವರೆಂಬಂತೆ ಮನುವಾದಿ ಲೇಖಕರು ಚಿತ್ರಿಸಿಬಿಟ್ಟಿದ್ದಾರೆ. ಎರೆಡು ಸಾವಿರ ವರ್ಷಗಳಿಗೂ ಹೆಚ್ಚುಕಾಲ ಸತತವಾಗಿ ಭಾರತದ ಬಹುಜನರಿಂದ ವಿದ್ಯೆ–ಅಧಿಕಾರ–ಆಸ್ತಿಗಳನ್ನು ಕಿತ್ತುಕೊಳ್ಳುವ ಕೆಲಸವನ್ನು ಬ್ರಾಹ್ಮಣರು ಲೀಲಾಜಾಲವಾಗಿ ಮಾಡಿಕೊಂಡು ಬಂದಿದ್ದಾರೆ. ಹೀಗಾಗಿ ಇಡೀ ದೇಶದ ತುಂಬ "ಸತ್ಯವನ್ನು ಸತ್ಯವೆಂದೂ, ಸುಳ್ಳನ್ನು ಸುಳ್ಳೆಂದೂ" ಜನ ನಿರ್ದಿಷ್ಟವಾಗಿ ಗುರುತಿಸುವುದೇ ಒಂದು ದೊಡ್ಡ ಪ್ರಯಾಸದ ಕೆಲಸವಂಬಂತಾಗಿದೆ.

ಇಂಥಹ ದೊಡ್ಡ ಗೊಂದಲದ ವಾತಾವರಣದಲ್ಲಿ ಹನಸೋಗೆ ಸೋಮಶೇಖರ್ ಅವರ "ಭೀಮ ಪಲ್ಲವಿ" ಕವನ ಸಂಕಲನದ ಮೂಲಕ ಅದೆಷ್ಟೋ ಕತ್ತಲ ಗರ್ಭದಲ್ಲಿ ಹುದುಗಿಹೋಗಿದ್ದ ಸತ್ಯ ವಿಚಾರಗಳನ್ನು ಕವನಗಳಾಗಿಸಿದ್ದಾರೆ. ಅಷ್ಟೇ ಅಲ್ಲದೆ, ಈ ಮನುವಾದದ ಕ್ರೂರ ಹಿಡಿತದಿಂದ ಭಾರತದ ಬಹುಜನಕೋಟಿಯನ್ನು ಬಿಡಿಸುತ್ತಾ ಅವರನ್ನು ಈ ದೇಶದ ಆಳುವ ವರ್ಗವಾಗಿಸಲು ಶ್ರಮಿಸುತ್ತಾ ಬಂದ ಸಾಮಾಜಿಕ ಪರಿವರ್ತನಕಾರರಾದ ಗೌತಮ ಬುದ್ಧ, ಮಹಾತ್ಮ ಫುಲೆ, ಮಾತೆ ಸಾವಿತ್ರಿ ಬಾಯಿಫುಲೆ, ಛತ್ರಪತಿ ಶಾಹು ಮಹಾರಾಜ್, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ತಂದೆ ಪೆರಿಯಾರ್, ಶ್ರೀ ನಾರಾಯಣಗುರು, ಬಾಬಾ ಸಾಹೇಬ್ ಅಂಬೇಡ್ಕರ್ ಇವರೆಲ್ಲರೂ ಬಹುಜನರಿಗೆ ನೀಡಿದ ಮಾರ್ಗ–ಸಂದೇಶಗಳನ್ನು ಕಾವ್ಯರೂಪದಲ್ಲಿ ತಲುಪಿಸಲು ಹನಸೋಗೆ ಮುಂದಾಗಿದ್ದಾರೆ. ಹೀಗಾಗಿ ಇವರ ಕಾವ್ಯಕ್ಕೆ ಅಪಾರವಾದ, ಅರ್ಥಪೂರ್ಣವಾದ ಕೆಚ್ಚು ಸಹಜವಾಗಿಯೇ ಮೂಡಿಬಂದಿದೆ. ಸತ್ಯ ಹೇಳುವವನ ಧೈರ್ಯ ಸಾಹಸಗಳನ್ನು ನಾವು ಇಲ್ಲಿನ ಕವನಗಳಲ್ಲಿ ಗುರುತಿಸಬಹುದಾಗಿದೆ. ಇದಕ್ಕೆ ಕಾರಣವಾದ ಮತ್ತೊಂದು ಅಂಶವೆಂದರೆ:

ಬಾಬಾ ಸಾಹೇಬರು 1956ರಲ್ಲಿ ಪರಿನಿಬ್ಬಾಣವಾದ ನಂತರ ದಲಿತರಲ್ಲಿ ಹುಟ್ಟಿಕೊಂಡಿದ್ದ ಚಮಚಾ ರಾಜಕಾರಣಕ್ಕೆ ತಡೆಯಿಲ್ಲದಂತಾಗಿ; ಅದು ವೇಗವಾಗಿ ಹಾಗೂ ನಾನಾ ಕವಲುಗಳಾಗಿ ಬೆಳೆದು ಈ ದಲಿತರಿಗೆ ವಿಮೋಚನೆಯೇ ಇಲ್ಲವೇನೋ ಎಂಬಂಥ ಹತಾಶ ವಾತಾವರಣ ಸೃಷ್ಟಿಯನ್ನುಂಟುಮಾಡಿತು. ಆದರೆ, ದಲಿತ ಚಳವಳಿಯ ಕಾವು 1971ರಿಂದ ಅರ್ಥಪೂರ್ಣವಾಗಿ ಮೇಲೆತ್ತಲ್ಪಟ್ಟು ಮುನ್ನಡೆಯತೊಡಗಿತು. ಉತ್ತರ ಭಾರತದಾದ್ಯಂಥ ಮನುವಾದದ ಧಾಳಿಯಿಂದ ಆರು

ಸಾವಿರ ಜಾತಿಗಳಾಗಿ ಒಡೆದುಹೋಗಿದ್ದ ಹಾಗೂ ಕ್ರೂರ ಶೋಷಣೆಗೊಳಗಾಗಿದ್ದ ದಲಿತರು, ಹಿಂದುಳಿದ ವರ್ಗಗಳು ಮತ್ತು ಧಾರ್ಮಿಕ ಅಲ್ಪಸಂಖ್ಯಾತರು, ಈ ಎಲ್ಲರನ್ನೂ ಜಾಗೃತಿಗೊಳಿಸುತ್ತಾ ಮತ್ತು "ಅಧಿಕಾರ ಹೀನತೆಯೇ ಅಸ್ಪೃಶ್ಯತೆ" "ಅಧಿಕಾರವೇ ಅಭಿವೃದ್ಧಿಯ ಎಲ್ಲ ಬಾಗಿಲುಗಳನ್ನು ತೆರೆಯಬಲ್ಲ ಮುಖ್ಯ ಕೀಲಿಕೈ" ಎಂಬಂತಹ ಬಾಬಾ ಸಾಹೇಬರ ಸಂದೇಶಗಳನ್ನು ಮುಂದಿಟ್ಟುಕೊಂಡು ಹೋರಾಡುತ್ತಿರುವುದು; ಕಾವ್ಯದ ಮೂಲಕ ಅಭಿವ್ಯಕ್ತಿಸುತ್ತಿರುವುದು ಇವರ ಕಾವ್ಯದ ಪ್ರೇರಣೆಯ ವಿಶೇಷವೂ ಆಗಿದೆ.

ಇವರ ಕೃತಿಯಲ್ಲಿ ಮುಖ್ಯವಾಗಿ ಭಾರತದ ಬಹುಜನರ ಇತಿಹಾಸ, ಸಂಸ್ಕೃತಿಗಳನ್ನು ಬಿಂಬಿಸುವ ಕವನಗಳು, ಸಾಮಾಜಿಕ ಪರಿವರ್ತನಕಾರರ, ಮಹಾಪುರುಷರ ಸಾಧನೆಗಳನ್ನು ಸ್ಮರಿಸುವ ಕವನಗಳಿವೆ. ಮನುವಾದಿಗಳ ತಂತ್ರಗಳನ್ನು ಬಿಂಬಿಸುವ, ಬಹುಜನರನ್ನು ಜಾಗೃತಗೊಳಿಸುವ ಹಾಗೂ ಬಹುಜನರ ಗುಣ ನಡತೆಗಳನ್ನು ಹೆಮ್ಮೆಯಿಂದ ಹೇಳುವ ಪದಗಳು ಹೊಸ ಆಲೋಚನೆಯಿಂದ ಪ್ರಜ್ವಲಿಸುತ್ತವೆ. ಬಹುಪಾಲು ಕವನಗಳೂ ಜನಸಾಮಾನ್ಯರು ಹಾಡಿಕೊಳ್ಳುವಂತೆ ರಚಿತವಾಗಿವೆ. "ನನ್ನ ಜನ ಈ ದೇಶದ ಆಳುವ ವರ್ಗವಾಗಬೇಕು". ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ದೊರೆಯಬೇಕೆಂಬ ಮಹದಾಸೆ ಕವಿತ್ವಕ್ಕಿದೆ. 'ಪೂನಾ ಒಪ್ಪಂದ' ಎನ್ನುವ ಹಾಡಿನಲ್ಲಿ ಹನಸೋಗೆ ಸೋಮಶೇಖರ್ ಇತಿಹಾಸದ ಘಟನೆಯೊಂದನ್ನು ಜಾನಪದ ಕಾವ್ಯದ ಶೈಲಿಯಲ್ಲಿ ರಚಿಸಿರುವ ಕಾವ್ಯಾಶಕ್ತಿ ಓದುಗರನ್ನು ಬೆರಗುಗೊಳಿಸುತ್ತದೆ. ಜೊತೆಗೆ ಇತಿಹಾಸದಲ್ಲಿ ಆಗಿಹೋದ ಅನ್ಯಾಯವನ್ನು ಮುಂದೆ ಸರಿಪಡಿಸಿಕೊಳ್ಳಲು ಮುನ್ನುಗ್ಗುವಂತೆ ಅದು ಪ್ರೇರೇಪಿಸುವ ರೀತಿ ಕೂಡ ಶಕ್ತಿಯುತವಾಗಿದೆ.

ಸಿದ್ಧಲಿಂಗಯ್ಯರ 'ಹೊಲೆ ಮಾದಿಗರ ಹಾಡು' ಕೃತಿಯ(1975), "ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ"[4] ಕವಿತೆ ಇಡೀ ದಲಿತ ಸಾಹಿತ್ಯ ಲೋಕದಲ್ಲಿ ಇಂದಿಗೂ ಪ್ರಸ್ತುತವೂ ಪ್ರಭಾವಯುತವೂ ಆಗಿದೆ. ಅಂತೆಯೇ "ನಾಡ ನಡುವಿನಿಂದ ಸಿಡಿದ ನೋವಿನ ಕೂಗೇ। ಆಕಾಶದ ಅಗಲಕ್ಕೂ ನಿಂತ ಆಲವೇ.. ಮಲಗಿದವರ ಕೂರಿಸಿದೆ ನಿಲಿಸುವವರು ಯಾರೋ? ಛಲದ ಜೊತೆಗೆ ಬಲದ ಪಾಠ ಕಲಿಸುವವರು ಯಾರೋ?" ಎನ್ನುವ ಅವರು, ಅಂಬೇಡ್ಕರರನ್ನು ಸರಿಯಾಗಿ ಗ್ರಹಿಸಿಲ್ಲ, ಅವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಅಂಬೇಡ್ಕರರ ವಿಚಾರದ ವಿರುದ್ಧವಾಗಿದ್ದಾರೆ. ಅಂಬೇಡ್ಕರರನ್ನು ಪ್ರಶ್ನೆ ಮಾಡಿದ ಅವರ ತಿಳಿವಳಿಕೆಯ ಮಟ್ಟ ಯಾವ ಪ್ರಮಾಣದಲ್ಲಿತ್ತು ಎಂಬುದನ್ನು ವಿಮರ್ಶೆಯ ಚೌಕಟ್ಟಿನೊಳಗೆ ತೆಗೆದುಕೊಂಡು ಬಂದಾಗ ಮಾತ್ರ ನಿಜಾಂಶ ಏನೆಂಬುದು ಗೊತ್ತಾಗುತ್ತದೆ ಎಂದು ಸಾತ್ವಿಕವಾಗಿ ಕಾವ್ಯದ ಮೂಲಕ ಆಗ್ರಹಿಸುವ ಹನಸೋಗೆ ಸೋಮಶೇಖರ್ ಆಧುನಿಕೋತ್ತರ ಕಾಲಘಟ್ಟದಲ್ಲಿ 21ನೇ ಶತಮಾನದ ದಮನಿತರ ಆದಿ ಕವಿಯೆಂದು ಹೆಸರಾಗಿದ್ದಾರೆ.

ಈ. ಅರವಿಂದ ಮಾಲಗತ್ತಿಯವರ ಕಾವ್ಯದ ತಾತ್ವಿಕ ಚಿಂತನೆ:

ಸಣ್ಣ ಕೇರಿಯಿಂದ ವಿಶ್ವ ಭ್ರಾತೃತ್ವದ ಕಡೆಗೆ ಚಿಂತನೆಗಳನ್ನು ಹೊಸೆಯಲು ಹೊರಟ ಮಾಲಗತ್ತಿ ಇಂದಿನ ಜಾಗತೀಕರಣ ಯುಗವನ್ನು ವಿರೋಧಿಸುತ್ತಲೇ ಅದನ್ನೇ ಅಸ್ತ್ರವಾಗಿಸಿಕೊಳ್ಳಬೇಕಾಗಿದೆ ಎನ್ನುತ್ತಾರೆ. ಜಾಗತಿಕ ಮಟ್ಟದಲ್ಲಿ ಪ್ರಸಿದ್ಧವಾಗುವ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ಚಿಂತನೆಯನ್ನು ಶಾಶ್ವತವಾಗಿ ದಾಖಲಿಸುವ ಪರಿಯನ್ನು ಪ್ರಾಯೋಗಿಕವಾಗಿ ನೋಡಲು ಭಿನ್ನ ಗುಣಗಳಿಂದ ಕೂಡಿದ ತಮ್ಮ 'ವಿಶ್ವತೋಮುಖ ಹೂ ಬಲು ಭಾರ' ಕೃತಿ ಮೂಲಕ ಸಾಹಿತ್ಯ ಸಲಹೆಯನ್ನು ಕೊಡುತ್ತಾ; ಮಾಲಗತ್ತಿ ತಮ್ಮ ಕಾವ್ಯದ ತಾತ್ವಿಕತೆಯನ್ನು ರಾಮನಗರದ ಸಹಸ್ರವರ್ಷಗಳಿಂದ ಉಳಿದು ಇತಿಹಾಸವನ್ನು ಸಾರುವ ಹೆಬ್ಬಂಡೆಗಳನ್ನು ಕ್ಷಣಾರ್ಧದಲ್ಲಿ ಉರುಳಿಸುತ್ತಾ ಲೂಟಿ ಮಾಡುವ ಗಣಿದಂಧೆಕೋರರ ಬಗೆಗೆ ನೋವಿನಿಂದ ಬರೆದ ಕಾವ್ಯ ಅವರ ತಾತ್ವಿಕತೆಯನ್ನು ಬಹುವಾಗಿ ಪ್ರಚುರಪಡಿಸುತ್ತದೆ.

ಈ ಸತ್ವವನ್ನು ಜೀರ್ಣಿಸಿಕೊಂಡ ಮಾಲಗತ್ತಿಯವರ ಔಚಿತ್ಯ ಪ್ರಜ್ಞೆ ಮತ್ತು ಕಾವ್ಯ ಪ್ರತಿಭೆ ಓದುಗರನ್ನು ಆಕರ್ಷಿಸಿ ಚಿಂತನೆಗೆ ಹಚ್ಚುತ್ತದೆ. ಆದ್ದರಿಂದಲೇ ಎಚ್.ಎಸ್. ರಾಘವೇಂದ್ರರಾವ್ ಅವರು "ಕನ್ನಡ ಕವಿಗಳು ಇದುವರೆಗೆ ಮುಖಾಮುಖಿಯಾಗುವ ಎಚ್ಚರ ಮತ್ತು ಸಾಮರ್ಥ್ಯವನ್ನು ಇವರ ಹಲವು ಕವಿತೆಗಳು ತೋರಿಸುತ್ತವೆ"[5] ಎನ್ನುವುದು. ಏಕೆಂದರೆ ಇಲ್ಲಿಯ ಕವಿ ತಮ್ಮ ಮೂರು ಮತ್ತು ಐದನೆಯ ಸಂಕಲನಗಳ ಕಾವ್ಯ ವಸ್ತುವಿನ ಆಯ್ಕೆಯಲ್ಲೆ ಹೊಸತನವಿದ್ದು ಅದನ್ನು ಕಾವ್ಯವಾಗಿಸಲು ಬಳಸಿಕೊಂಡ ಭಾಷೆ, ಶೈಲಿ, ನಿರೂಪಣೆಗಳು ವಿಶಿಷ್ಟ ಮಹತ್ವ ಪಡೆದಿವೆ. ಜೊತೆಗೆ ಅಡಿಗರ, ಬೇಂದ್ರೆಯವರ ಕಾವ್ಯ ಪ್ರಭಾವ ಇಲ್ಲಿಯ ಹಲವಾರು ಕವನಗಳಲ್ಲಿ ಕಂಡುಬಂದರೂ ಅಡಿಗರ ಕಾವ್ಯದಂತೆ ಒಂದೇ ಸ್ವರೂಪದ ಪಡಿಯಚ್ಚಾಗಿಲ್ಲ. ಅವು ಎಲ್ಲರ ಬದುಕನ್ನು ಕುರಿತು ವಿಭಿನ್ನ ರೀತಿಯಲ್ಲಿ ವಿಶ್ಲೇಷಿಸುತ್ತವೆ. ಅಡಿಗರಂತೆ ಇಲ್ಲಿಯೂ ಪುರಾಣ, ಪ್ರತಿಮೆಗಳ ಪಡಿಯಚ್ಚಿದೆ ನಿಜ. ಆದರೆ, ಅವರ ಕಾವ್ಯದಂತೆ ನಿಲ್ಲದೆ ಮಾಲಗತ್ತಿಯವರ ಕಾವ್ಯಗಳು ಚಲನಶೀಲ ಗುಣ ಹೊಂದಿವೆ. ಕವಿಯ ಸಂಕಲನಗಳಲ್ಲಿ ಜಟಿಲವಾದ ಅಂತಸ್ಸತ್ವವುಳ್ಳ ಸಂಕೀರ್ಣ ಕವಿತೆಗಳಿವೆ. ಇಂತಹ ಕವಿತೆಗಳ ಬಗ್ಗೆ ಈ ಹಿಂದೆ ಚರ್ಚಿಸಲಾಗಿದೆ. ಇವುಗಳನ್ನು ಕವಿ ಉದ್ದೇಶ ಪೂರ್ವಕವಾಗಿ ಬಳಸಿಕೊಂಡಂತಿವೆ. ಸಾಮಾಜಿಕ ಬದುಕಿನ ಏರಿಳಿತಗಳಿಂದ ಸಾಗುವ ಕಾವ್ಯಗಳು ಸಿಂಹಾವಲೋಕನ, ಆತ್ಮ ವಿಮರ್ಶೆಯಿಂದ ಬದುಕಿನ ಎಲ್ಲೆಗಳನ್ನು ಮೀರಿ ಬೆಳೆಯುತ್ತವೆ. ಕವಿಗೆ ವಸ್ತುನಿಷ್ಠತೆ ಇದ್ದಾಗ ಮಾತ್ರ ಕಾವ್ಯದೊಳಗೆ ಮಾತನಾಡುವ ಗುಣಬರುತ್ತದೆ ಎಂಬುದನ್ನು ಇವರ ಕಾವ್ಯವೇ ತಿಳಿಸುತ್ತದೆ.

"ಪರಿಸರ ಪ್ರೇಮಿಗಳು ಇಂತಹ ವಿಷಯವನ್ನು ಏಕೆ ಗಂಭೀರವಾಗಿ ಪರಿಗಣಿಸುವುದಿಲ್ಲ?" ಎನ್ನುವ ಮಾಲಗತ್ತಿ: "ರಾಮನಗರದಲ್ಲಿ ರಾಮನಿಲ್ಲ" 'ಮೈಸೂರಿನಿಂದ ಬೆಂಗಳೂರಿಗೆ ಹೋಗುವಾಗಲೆಲ್ಲ ದಾರಿಯುದ್ದಕ್ಕೂ ಸಾಯುತ್ತಲೇ ಹೋಗುತ್ತೇನೆ; ಕೈಲಾಗದ್ದಕ್ಕೆ ಹಿಡಿಶಾಪ ಹಾಕಿ ಜನರ ನಡುವೆ ಹೆಣವಾಗಿ ಬಿಡುತ್ತೇನೆ ಧ್ವನಿಗೆ ಪ್ರತ್ಯುತ್ತರವಿಲ್ಲದೆ. ರಾಮನಗರದಲಿ ರಾಮನಿಲ್ಲ ತೋಳಗಳು ಹೆಬ್ಬಂಡೆಗಳನ್ನು ತಿನ್ನುತ್ತಿವೆ, ಬೆಟ್ಟಕ್ಕೆ ಬೆಟ್ಟವೇ ಬೆಣ್ಣೆಯಂತೆ ಕರಗಿಸುತ್ತಿವೆ, ರಾಮನಪಾದ

ಸೀತೆಯ ಸೆರಗು ಹನುಮನ ಉಂಗುರ ಎಲ್ಲವೂ ಮಾಯ. ಗಣಿಧಣಿಗಳ ಬಿಸಿಗೆ ರಕ್ಕಸ ಯಂತ್ರದೊಂದಿಗೆ ನರಿ-ಕಿರುಬ-ತೋಳಗಳೆಲ್ಲ ಸೇರಿ ಹಿಂಸಿಸುತ್ತಿವೆ, ಭೂಮಾತೆಯ ಶಿರದಲಿ ಹೇನಾಗಿ ರಾಮಲಕ್ಷ್ಮಣ ಸೀತೆಯರ ವೇಷ ಧರಿಸಿ ಜಾಗತೀಕರಣದ ಜಾತ್ರೆಯಲ್ಲಿ ಗರಿಗೆದರಿ ಕುಣಿತ ತಮ್ಮದೆ ಆಟ ತಮ್ಮದೆ ನೋಟ ತಮ್ಮದೆ ಎಲ್ಲ ಕತ್ತಲೆಯ ಕೂಪ ಮಾಡಿದೆ. ಹಣ ಅಧಿಕಾರದ ಮದ. ಗಣಿಗಾರಿಕೆಯ ಬೆಣ್ಣೆಯ ಲೋಕದಿ ನಾ-ತೋಳ, ನೀ-ನರಿ, ಅವ-ಕಿರುಬ, ನಿನ್ನದು ಆಳುವ ಪಕ್ಷ, ನನ್ನದು ತೆಗಳುವ ಪಕ್ಷ, ಕುರ್ಚಿಯಲ್ಲಿ ಯಾರಿದ್ದರೇನು? ಕತ್ತಲ ಜಗದಲಿ ಸಮಪಾಲು ಸಮಬಾಳ ನೀತಿ ಹಿಂದೆ ಬಾಲ ಬಡಿಯುತ ತಿರುಗುತಿರೆ ನೌಕರಶಾಹಿ ನಾಯಿ ಅಬ್ಬಾ ಎಂಥ ನಿಯತ್ತಿನ ಸಮತಾಲೋಕ! ಎನ್ನುತ್ತಿದೆ. ರಾತ್ರಿ ಹಾರುವ ತೋಪುಗಳ ಸದ್ದಿಗೆ ಹಕ್ಕಿಗಳೆಲ್ಲ ಮಾಯ, ರಸ್ತೆ ಮನೆ ಶಾಲೆಗಳೆಲ್ಲ ಬಿರುಕುಬಿರುಕು, ಪುಡಿ ಮಾಡುವ ಕಲ್ಲಿನ ಧೂಳಿನಲಿ ಬೆಳೆಗಳು ಅಸುನೀಗುತ್ತಿವೆ. ಹಸಿರ ಮೇಯದೆ ಸೊರಗುತ್ತಿವ ದನಕರು, ಪಶುಪಕ್ಷಿ ಸಂಕುಲ ಹಿಕ್ಕೆ ಹಾಕಲಾಗದೆ ತಿಣಕುತಿವೆ, ಎಲ್ಲೆಂದರಲ್ಲೆ ಕರಿಚಂಡಾಲರ ಬಲ, ರಾಮನಗರದಲಿ ರಾಮನಿಲ್ಲ... ತಾಳು ತಾಳೆಲೆ ಭೂರಮೆ ಮೈ ಕೊಡವಿದರೆ ನೀ ತರಗೆಲೆಯಾಗಿ ಉದುರುವವು ದುರಾಸೆಯ ಹಣದಲಿ ತೇಲುತಿವೆ ಸರಕಾರ. ವಿಕೃತದ ಲಂಚ ಮಂಚದಲಿ ಹರಿಯುತ್ತಿವೆ ಕುರ್ಚಿಗಳು. ನರಹುಳುವೆ ನರನಿಗೆ ಕಂಟಕವು ಜಗಕೊ ವಿಷ ಜಂತುಗಳು ಸೃಷ್ಟಿಯ ಸೆರಗಲಿ ಬಾಳುವುದನರಿಯದೆ ಸೆರಗನೆ ಹರಿದು ಭೂ ದೇವಿಗೆ ಬೆತ್ತಲೆ ಮಾಡಿ ಅಟ್ಟಹಾಸದಿ ನಗುತಿಹರು ಪ್ರಜಾಪ್ರಭುತ್ವದ ಭೂಪರು. ದೇವಾನುದೇವತೆಗಳೆಲ್ಲ ಕಲ್ಲು ಹುಡಿಯಲೆ ಅಸುನೀಗುತಿವೆ: **ರಾಮನಗರದಲಿ ರಾಮನಿಲ್ಲ ರಾಮನಿಲ್ಲ.**[6]

ಎನ್ನುವ ಮಾಲಗತ್ತಿಯವರ ಕಾವ್ಯದ ಆಸಕ್ತಿ ಪ್ರಕೃತಿಯ ಮಾರಣ ಹೋಮವನ್ನು, ಇತ್ತಿಚೆಗೆ ರಾಮನಗರದ ಬಂಡೆಯ ಕ್ಷೇತ್ರದಲ್ಲಿ ಬುದ್ಧನ ಪ್ರತಿಮೆಯನ್ನು ಅಲ್ಲಿರುವ ಬಂಡೆಗಳಲ್ಲಿಯೇ ಕೆತ್ತಬೇಕು ಎನ್ನುವಂತಹ ಯೋಜನೆಯೊಂದು ರೂಪಗೊಂಡಿದ್ದು ಮತ್ತು ಅದಕ್ಕೆ ಸಿದ್ಧತೆಯು ನಡೆಯುತ್ತಿದೆ ಎನ್ನುವುದನ್ನು ಮತ್ತು ಇದಕ್ಕೆ ಪರಿಸರ ಪ್ರೇಮಿಗಳು ಇದಕ್ಕೆ ವಿರೋಧಿಸುವುದನ್ನೂ ಕಂಡಿದ್ದೆವು. ಇದೇ ಹಿನ್ನೆಲೆಯಲ್ಲಿ ಕಾವ್ಯದ ಮೂಲಕ ಬಂಡೆಗಳ ಬಗೆಗೆ ಆಸಕ್ತಿ ತಳೆದಿರುವ ಇವರ ಸೂಕ್ಷ್ಮ ಗ್ರಹಿಕೆಯಿಂದ ಮತ್ತು ಆ ಬಗೆಗೆ ಸುದೀರ್ಘವಾದ ಖಂಡಕಾವ್ಯವನ್ನೇ ಬರೆಯುವ ಅವರ ತವಕದ ಹಿಂದಿನ ತಾತ್ವಿಕತೆ ಜೀವತತ್ವದ್ದು. ಜೀವಧರ್ಮದಲ್ಲಿ ಜೀವ ನಿರ್ಜೀವ ಎಲ್ಲಕ್ಕೂ ಸಮಾನವಾದ ಹಕ್ಕಿದೆ ಎಂಬುದು ಬುದ್ಧನ ಜೀವತತ್ವದ ಮಹದಾಶವೂ ಹೌದು. ಅದು ಅರವಿಂದ ಮಾಲಗತ್ತಿಯವರ ಕಾವ್ಯತತ್ವವೂ ಹೌದು.

ಆಧುನಿಕೋತ್ತರ ಕಾಲಘಟ್ಟದ 'ದಲಿತೇತರ' ಕಾವ್ಯಗಳಲ್ಲಿನ ತಾತ್ವಿಕ ಚಿಂತನೆ

ಅ. ಸಿಪಿಲೆ ಸತೀಶ್ ಅವರ ಕಾವ್ಯದ ತಾತ್ವಿಕತೆಯ ಒಳನೋಟ:

'ಲೆಕ್ಕಾಚಾರ' ಬದುಕನ್ನು ಒಂದು ಸ್ಥಿಮಿತದಲ್ಲಿ ನಿಲ್ಲಿಸುತ್ತದೆ. ಆದರೆ ಪ್ರತಿಯೊಂದರಲ್ಲೂ ಸ್ಥಿಮಿತ ರೂಢಿಯಾಗಿಸಿ ಸ್ವಾತಂತ್ರ್ಯ ಹರಣವಾಗುತ್ತದೆ. ಈ ಬಗೆಯ ಬದುಕನ್ನು ಎಲ್ಲ ಎಲ್ಲೆಗಳಿಂದ ದೂರ ತಳ್ಳಿ ಆಸ್ವಾಧಿಸುವ ಪ್ರೀತಿ ಪಡೆಯಬೇಕಾಗುತ್ತದೆ. ಯಾವುದನ್ನು ದಿನನಿತ್ಯ ರೂಢಿಸಿಕೊಳ್ಳುತ್ತೇವೆಯೋ ಅದೇ ಬದುಕಾಗುತ್ತದೆ. ಬದುಕನ್ನು ಸೃಜನಾತ್ಮಕವಾಗಿ ಆಸ್ವಾದಿಸುವ ಮನಸ್ಸನ್ನು ಕೊಂಚ ಉದ್ದೀಪಿಸಿಕೊಂಡರೆ ತಪ್ಪೇನು? ಅದರಿಂದ ನಮ್ಮ ಲೆಕ್ಕಾಚಾರವೇನೂ ತಲೆಕೆಳಕಾಗುವುದಿಲ್ಲ. ರಸ್ತೆಯಲ್ಲಿ ಒಬ್ಬಂಟಿ ನಡೆಯುವಾಗ ಕತ್ತಲು, ಚಂದಿರ, ನಕ್ಷತ್ರ ಬೇಲಿ ಮರೆಯ ಕ್ರಿಕೆಟ್ಸ್ ಹುಳುಗಳ ನಿನಾದ, ಸರಕ್ಕನೆ ಏನೋ ಹರಿದಂತೆ ಒಣಗಿದ ಎಲೆ ತರಗಿನ ಮುರಮುರ ಸದ್ದು ಅತೀವ ಆನಂದ ನೀಡುತ್ತವೆ! ಕತ್ತಲ ಭಯವನ್ನು ಹೋಗಲಾಡಿಸುತ್ತವೆ. ಆಗ ನಾನು ಒಬ್ಬಂಟಿಯಲ್ಲ. ಇದೆಲ್ಲದರೊಂದಿಗೆ ಇರುವ ಜೀವ ನನ್ನದು ಎಂಬ ಭಾವ ಮೂಡುತ್ತದೆ. ಇದರಿಂದ ಸಾಮೂಹಿಕತೆಯ ಸಂಧಿಯಲ್ಲಿ ನಾನಿರುತ್ತೇನೆ. ಅರ್ಥಾಥ್ ಬದುಕು ಭರವಸೆ ಮತ್ತು ನಂಬಿಕೆಯ ನೆರಳಲ್ಲಿ ಸದಾ ಇರಬಯಸುತ್ತದೆ. ಈ ಬದುಕು ನಮಗೆ ಬಹಳಷ್ಟನ್ನು ನೀಡುತ್ತದೆ; ಆದರೆ ಸ್ವೀರಿಸಲು ಅನುಭವಿಸಲು ನಾವು ಮುಂದೆ ಬರುವುದಿಲ್ಲ. ಬದುಕಿನ ಕಡೆಗಿನ ನಮ್ಮ ದೃಷ್ಟಿಕೋನವೇ ಬೇರೆ. ಬರೀ ಲಾಭದ ನಿರೀಕ್ಷೆಯಲ್ಲಿ ಹೆಜ್ಜೆ ಇಡುವವನಿಗೆ ಬದುಕಿನ ಸ್ವಾರಸ್ಯ ಅರ್ಥವಾಗುವುದಿಲ್ಲ. ತನಗೆ ಬೇಕಾದ್ದನ್ನು ಬದುಕು ನೀಡದಿದ್ದರೆ, ಕೆಚ್ಚಿನಿಂದ ಬದುಕನ್ನು ನೋಡುವುದು ಸರಿಯೇ? ಬದುಕಿನ ನಿಯಮವೇ ಹಾಗೆ. ಬೇಕಾದ್ದನ್ನು ಪ್ರತಿಸಲವೂ ನೀಡುವುದಿಲ್ಲ. ಕೆಲವೊಮ್ಮೆ ಮಾತ್ರ ನಮ್ಮ ನಿರೀಕ್ಷೆ ಫಲ ಕೊಡಬಹುದು. ಆದರೆ ಮನಃಪೂರ್ತಿಯ ಪ್ರಯತ್ನವಿದೆಯಲ್ಲ, ಅದು ನೀಡುವ ಆನಂದ ಇಲ್ಲಿ ಮುಖ್ಯ, ಹೀಗಾಗಿ ನಾವು ಏಕೆ ಬದುಕಬೇಕೆಂದರೆ ಗುರಿಯೆಡೆಗೆ ಸಾಗುವಾಗಿನ ಪ್ರಯಾಣದ ಅನುಭವಕ್ಕಾಗಿ, ಅದು ಕೊಡುವ ಎಲ್ಲ ಸಂತಸ–ನೋವುಗಳೂ ಉದ್ದೇಶಪೂರಿತ ಶಿಕ್ಷಣವೇ. ಸ್ವೀಕರಿಸುವುದಷ್ಟೇ ನಮ್ಮ ಕೆಲಸವಾದಾಗ ಆ ಬದುಕಿಗೊಂದು ಅರ್ಥವಿರುತ್ತದೆ.

ಬದುಕನ್ನು ಅರ್ಥ ಮಾಡಿಕೊಳ್ಳುವ ವಿಚಾರದಲ್ಲಿ ಸಾಕಷ್ಟು ಗೊಂದಲಗಳಿವೆ. ನಮ್ಮ ಸುತ್ತಲಿನ ಜನರ ವರ್ತನೆಯ ಮೂಲಕ, ಬದುಕು ಅವರಿಗೆ ಹೇಗೆ ಕಾಣಿಸುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ದಾಹಕ್ಕೆ ಬಿದ್ದವರಂತೆ ಹೆಚ್ಚು ಹೆಚ್ಚು ಕಬಳಿಸುವುದನ್ನೇ ಬದುಕು ಮಾಡಿಕೊಂಡವರು ಒಂದೆಡೆಯಾದರೆ, ಯಾವುದೇ ಆಸೆಗಳಿಲ್ಲದೆ ನಿರಾಶಾವಾದಿಗಳಾಗಿ, ಸಿನಿಕರಾಗಿ ಎಲ್ಲರನ್ನೂ ಬೈದುಕೊಳ್ಳುತ್ತಾ ಕಾಲ ಕಳೆಯುವವರು ಮತ್ತೊಂದೆಡೆ ಇರುತ್ತಾರೆ. ಇವರೆಲ್ಲರ ನಡುವೆ ಬದುಕು ಹಂಚಿಕೊಂಡ ನಾವು ಬಹು ಎಚ್ಚರಿಕೆಯಿಂದ ಹೆಜೆ ಇಡಬೇಕಾಗಿದೆ. ಕೊಂಚ ಪ್ರಭಾವವನ್ನು ನಮ್ಮ ಒಡಲಿಗೆ ಇಳಿಸಿಕೊಂಡರೂ, ನಾವು ಅವರಂತೆ ಸಿನಿಕರಾಗಿಯೋ, ಕಬಳಿಸುವವರೋ ಆಗಿಬಿಡುತ್ತೇವೆ. ದಾರಿಯ ಆರಂಭದಲ್ಲಿಯೇ ಮುಳ್ಳು-ಕಲ್ಲು ಗುರುತಿಸಿ ಬೇರೊಂದು ಹಾದಿ ಆಯ್ದುಕೊಳ್ಳುವುದು ಸೂಕ್ತ.

'ಯಾತನೆ, ನಿರಾಸೆ, ದ್ವೇಷ, ಮತ್ಸರ, ಸೇಡು, ಅಹಮಿಕೆ, ಕ್ರೋಧಗಳು ಮನಸ್ಸಿನ ದುರ್ಬಲ ಅಂಶಗಳು, ಇವುಗಳಲ್ಲೊಂದು ಹೊಕ್ಕಿ ಬಿಟ್ಟರೂ, ಕುರುಚಲು ಗಿಡಗಳಂತೆ ಹಬ್ಬುತ್ತ ಹೋಗುವುದೇ ಕಾಯಕ. ಇವುಗಳ ಕಪಿಮುಷ್ಠಿಗೆ ಸಿಲುಕಿದ ಮನುಷ್ಯನ ಪಾಡಂತೂ ಹೇಳತೀರದು. ವಿಷ ಕುಡಿದವನು ಚಡಪಡಿಸುವಂತೆ ಬದುಕಿನ ತುಂಬ ಹೊಯ್ದಾಟವೇ ಆತನ ಕೆಲಸವಾಗುತ್ತದೆ. ಒಂದರ ನಂತರ ಒಂದು ವಿಷಮ ಪರಿಸ್ಥಿತಿಗಳು ಅಣಕಿಸುವುದರಿಂದ ಮತ್ತೆಮತ್ತೆ ಕ್ರುದ್ಧನಾಗಿ ಮನಸ್ಸಿನ ಶಾಂತಿ-ಸಮಾಧಾನ ಕಳೆದುಕೊಳ್ಳುತ್ತಾನೆ. ಬದುಕಿನ ಮೇಲಿನ ಪ್ರೀತಿ ಅಳಿಸಿಹೋಗಿ ಕಾಡುಪ್ರಾಣಿಯ ಹಾಗೆ ವರ್ತಿಸತೊಡಗುತ್ತಾನೆ'[7] ಎಂಬುದು ಸಿಪಿಲೆ ಸತೀಶರ ಕಾವ್ಯಸಮಾಜದ ತಾತ್ವಿಕ ಚಿಂತನೆಯಾಗಿದೆ.

ಆ. ಬಂಜಗೆರೆ ಜಯಪ್ರಕಾಶರ ತಾತ್ವಿಕತೆ:

ಬಂಜಗೆರೆ ಜಯಪ್ರಕಾಶರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕನ್ನಡದ ಕವಿಯಾಗಿ ಯಥಾಸ್ಥಿತವಾದದ; ಬಂಡವಾಳಗಾರರ; ಬ್ರಾಹ್ಮಣ್ಯದ ಆವರಣದೊಳಗೆ ನರಳುತ್ತಿರುವ ಬಹುಜನರ ಹಪಾಹಪಿಯನ್ನು ಕಣ್ಣಾರೆ ಕಂಡು ಅವರೊಂದಿಗೆ ಜೀವಿಸುತ್ತಾ ಅದಕ್ಕೆ ಕಾರಣ ಹುಡುಕುತ್ತಾ ಪರಿಹಾರ ದೊರಕಿಸಿಕೊಡುವ ನಿಜನೆಲದ ಕವಿ. ನಿಜಹುಟ್ಟಿನ ಅರಿವಿಲ್ಲದ ಅಯೋನಿಜರ ಬುಡಕ್ಕೆ ತಾವು ಕೊಟ್ಟ ಕಾವ್ಯದ ಕೊಡಲಿ ಪೆಟ್ಟಿನಿಂದ ಇಡೀ ಪುರೋಹಿತ ಶಾಹಿ ಬೆಚ್ಚಿಬಿದ್ದದ್ದು ಈ ಹಿಂದಿನ ಅವರ 'ಆನುದೇವ ಹೊರಗಣವನು' ಕೃತಿ ಸಾಕ್ಷೀಕರಿಸುತ್ತದೆ. ಆಧುನಿಕೋತ್ತರ ಕಾಲಘಟ್ಟದ ಕವಿಗಳಿಗೆ ನಿಜ ನೆಲದ ಬೇರಿನ ಸತ್ವವನ್ನು ಸದಾ ಉಣಬಡಿಸಿದ ಕವಿ ಬಂಜಗೆರೆ ಅದೆಷ್ಟೋ ಕವಿಹೃದಯಗಳಿಗೆ ಪದಗಳಾಗಿರುವುದು ವಿಶೇಷ. ಬಂಜಗೆರೆ ಜಯಪ್ರಕಾಶ್ ಇತಿಹಾಸ, ಜಾನಪದ, ಪುರಾಣಗಳ ಬೇರು ಮೂಲದ ರೂಪಕ ಜಗತ್ತಿನ ಸ್ಥಳೀಯ ಸಂವೇದನೆಯ ಜೊತೆಗೆ ಜಾರ್ಖಂಡ್, ದೆಹಲಿ, ದಕ್ಷಿಣ ಅಮೆರಿಕ, ಕ್ಯೂಬಾ, ಅಮೆರಿಕ ಮೊದಲಾದ ಜಾಗತಿಕ ಖಂಡಾಂತರಗಳ ವಿದ್ಯಮಾನಗಳು ಇವರ ಕಾವ್ಯದಲ್ಲಿ ಉಸಿರಾಡಿವೆ. ಹಸಿವು, ದಬ್ಬಾಳಿಕೆ, ನೋವು, ನರಳಿಕೆ, ಪ್ರೀತಿ ಹಂಬಲಿಕೆಗಳು, ಜಾತಿವರ್ಣ ಮತಗಳಾಚೆಗಿನ ಮಾನವೀಯ ಅಂತಃಕರಣದ ಆರ್ದ್ರತೆಯಲ್ಲಿ ಸಂವೇದಿಸುವ ಜೆಪಿ ಭಾರತದ ನಿಜ ನೆಲೆಯ ವಿಶೇಷ ಮಾನವ ಪ್ರೇಮದ ಕವಿಯೆನಿಸುತ್ತಾರೆ.

ಇವರ ಕಾವ್ಯದ ಪ್ರತೀ ಸಾಲಿನಲ್ಲಿ ಅಂಬೇಡ್ಕರರ 'ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸ್' (ಉಳಿವಿಗಾಗಿ ಹೋರಾಟ) ಅನುರಣಿಸಿದೆ. ಶಸ್ತ್ರಸಜ್ಜಿತ ಹೋರಾಟ ಮುಖ್ಯ ಎನ್ನುವಾಗ 'ನಕ್ಸಲೈಟ್ಸ್' ತರಹದ 'ಧೋರಣೆ' ಎಂದು ಕೆಲವರ ಮನಸ್ಸಿನಲ್ಲಿ ಒಂದು ಆಲೋಚನೆ ದೊಪ್ಪನೆ ಬಂದು ಆ ಕ್ರೌರ್ಯ ಥಳಾಯಿಸಿ ಕಣ್ಣಿಗೆ ರಾಚುವಂತೆ ನಿಂತು ಮಾಯವಾಗುತ್ತದೆ. ವಾಸ್ತವಾಗಿ ಬಂಜಗೆರೆ ಜಯಪ್ರಕಾಶ್ ರಕ್ತಕ್ರಾಂತಿಯನ್ನು ಎಂದೂ ಬಯಸಿದವರಲ್ಲ. ಅದರ ವಿರುದ್ಧವಿದ್ದ ಅಂಬೇಡ್ಕರ್ ಸಿದ್ಧಾಂತದ ಪರಿಪಾಲಕರು ಮತ್ತು ಎಡಪಂಥೀಯ ದೃಷ್ಟಿಕೋನಗಳಿರುವ ಬಂಜಗೆರೆ ಪ್ರಧಾನ ಧಾರೆಗಳನ್ನು ಪರಿಶೀಲಿಸುವ, ಪ್ರಜಾಪ್ರಭುತ್ವದ ಮಾದರಿಗಳನ್ನು ಅನುಮಾನಿಸಿ ನೋಡುವ; ಸಮುದಾಯದ ದನಿಯಾಗಿ ಕಾವ್ಯವನ್ನು ನಿರೂಪಿಸುವ ಶೈಲಿಯೂ; ಎಡಪಂಥೀಯ ವಿಚಾರಧಾರೆಗೆ ಹತ್ತಿರವಿರುವ ಇವರು ಮುಖ್ಯವಾಗಿ ವಸಾಹತುಶಾಹಿ, ಪ್ರಭುತ್ವ, ವರ್ಗಶಾಹಿ ಧೋರಣೆಗಳಿಂದ ಹುಟ್ಟುವ ಶೋಷಣೆ, ಅನ್ಯಾಯಗಳನ್ನು ವಿರೋಧಿಸುವ ಪ್ರತಿಭಟನಾತ್ಮಕ ದನಿಯಾಗಿ 'ಕಾವ್ಯ' ತಮ್ಮಿಂದ ಹುಟ್ಟನ್ನು ಪಡೆದುಕೊಳ್ಳುವುದಕ್ಕೆ ವಾಸ್ತವ ಸ್ಥಿತಿಯೂ ಕಾರಣವಾಗಿರುವುದು ಸತ್ಯಸ್ಯ ಸತ್ಯ.

ಬಂಜಗೆರೆ ಜಯಪ್ರಕಾಶ್ (ಜೆಪಿ)ರವರ ಒಟ್ಟು ಕಾವ್ಯದ ಹುಡುಕಾಟವನ್ನು ವಿಮರ್ಶಿಸುತ್ತಾ ನಟರಾಜ್ ಹುಳಿಯಾರ್ ಹೀಗೆ ಗುರುತಿಸುತ್ತಾರೆ. "ಕನ್ನಡದಲ್ಲಿ ಜೇಪಿ ರೀತಿಯ ಕವಿ ಇನ್ನೊಬ್ಬನಿಲ್ಲ. ಹೀಗಿದ್ದೂ ಕೂಡ ಬಂಡಾಯ ಮನೋಧರ್ಮವನ್ನು ತಾತ್ವಿಕ ನೆಲೆಯಲ್ಲಿ ಸ್ವೀಕರಿಸಿದ 'ಪಾತ್ರಧಾರಿ' ಕವಿಗಳೇ ಹೆಚ್ಚು ಕೇಂದ್ರರಂಗದಲ್ಲಿ ಕಾಣಿಸಿಕೊಂಡು, ಜೇಪಿಯಂಥ ನಿಜ ಬಂಡಾಯಗಾರನ ರಾಜಕೀಯ ಕಾವ್ಯ ಕೊಂಚ ಹಿನ್ನೆಲೆಗೆ ಸರಿದಿದ್ದು ವಿಚಿತ್ರವಾಗಿದೆ"[8] ಎನ್ನುವ ನಟರಾಜ್‌ರವರು ಬಂಜಗೆರೆಯವರ ಸಾಹಿತ್ಯ ಓದಿನಿಂದಷ್ಟೇ ಅವರನ್ನು ಅವರ ಕಾವ್ಯ ತಾತ್ವಿಕತೆಯನ್ನು ಅಳೆದಿದ್ದಾರೆ ಎನಿಸುತ್ತದೆ. ಜೆಪಿಯವರ ಆರಂಭದ ಕಾವ್ಯ ಪ್ರವೇಶಕ್ಕೆ ಕಾರಣ ಮತ್ತು ಈವರೆಗಿನ ಅವರ ಸಾಹಿತ್ಯ ಸಂಘಟನೆ–ಹೋರಾಟ–ಅಭಿವ್ಯಕ್ತಿಯನ್ನು ನೋಡುವ ಅಥವಾ ನೋಡುತ್ತಿರುವ ಒಡನಾಡಿಗಳ ಅಭಿಮತಗಳನ್ನು ಅರಿತಲ್ಲಿ ಬಂಜಗೆರೆ ನಿಜನೆಲೆ ಅರ್ಥವಾಗುತ್ತದೆ. ನಿದ್ದೆಯಲ್ಲಿರುವ ದಲಿತ–ಬಂಡಾಯದ ಸಾಹಿತ್ಯದಿಂದ ಆಚೆಗೆ ಹೆಜ್ಜೆಯಿಟ್ಟು ಆಧುನಿಕೋತ್ತರ ಕಾಲದ ಕನ್ನಡ ಕಾವ್ಯಗಳನ್ನು ಸೃಜಿಸುತ್ತಿರುವ ಶೋಷಿತ ವರ್ಗದ ಬಗೆಗಿನ ಲೇಖಕರು; ಚಳುವಳಿಯನ್ನು ಮುಂದುವರೆಸಲು ಸಿದ್ಧರಿರುವ ಯುವ ಉತ್ಸಾಹಿ ಬರಹಗಾರರು; ಕಲಾವಿದರು; ಚಿಂತಕರು; ಸಂಶೋಧಕರು ಮತ್ತು 'ಸ್ತ್ರೀ–ಪುರುಷ ಹೋರಾಟಗಾರರಿಗೆ'! ಬಂಜಗೆರೆ ಮಾದರಿಯಾಗಿದ್ದಾರೆ.

ಜೆಪಿ ಕಾವ್ಯವನ್ನು ಖಾರವಾಗಿ ನೋಡಲು ಕಾವ್ಯ ಹುಟ್ಟಿದ ಸಂದರ್ಭದ ರೋಷವೇ ಕಾರಣವಾಗಿದೆ. ಪರಿಣಾಮದಲ್ಲಿ ಅದು ಶೋಷಕರಿಗೆ ಕಾಷನ್ (ಎಚ್ಚರಿಕೆ)ಆಗಿ ಕಾಣುವಂತೆ ಮಾಡುವ ಉದೇಶವನ್ನಷ್ಟೇ ಹೊಂದಿರುವುದು ಸತ್ಯ. ಆ ಮೂಲಕ ಒಡೆದ ಕನ್ನೆಯನ್ನು ಸವರುತ್ತ ಮತ್ತೊಂದು ಕನ್ನೆಯ ತೋರುವ ಓಬಿರಾಯನ ಸಿದ್ಧಾಂತದಿಂದ ಹೊರನಡೆದು ಅರಿವಿನ(ಶಿಕ್ಷಣ) ಸಂಘಟನೆಯ, ಹೋರಾಟದೊಂದಿಗಿನ ಹರಿತ ಲೇಖನಿಯೇ ಇಲ್ಲಿ ಶಸ್ತ್ರಸಜ್ಜಿತ ಎಂದು ಅರ್ಥವನ್ನು ಸಂಕೇತಿಸುವ ಮೂಲಕ ಬಂಜಗೆರೆ ಜಯಪ್ರಕಾಶ್ ದಮನಿತರಿಗೆ ಸಮಸಮಾಜ ಕಟ್ಟುವ ಕನಸಿನ ದಲಿತ–ಬಂಡಾಯದ ಬರಹಗಾರರಿಗೆ, ಚಿಂತಕರಿಗೆ, ಯುವಸಮುದಾಯದ ತೀರ ಹತ್ತಿರ ನಿಂತು ಸ್ಫೂರ್ತಿಯ ಸಲಹೆ ನೀಡುತ್ತಾರೆ.

ಇದನ್ನು ಈ ಮೇಲಿನ ಅಂಶಗಳೊಂದಿಗೆ ಮತ್ತಷ್ಟು ವಿಶದೀಕರಿಸುತ್ತಾ ಕಳೆದ ಎರೆಡು ದಶಕಗಳಲ್ಲಿ ಬಂಜಗೆರೆ ಜಯಪ್ರಕಾಶರು ರೂಪಿಸಿದ ಮತ್ತು ಸಕ್ರಿಯವಾಗಿ ಪಾಲ್ಗೊಂಡ ಕೆಲವು ಜನಪರ ಹೋರಾಟಗಳಲ್ಲಿ ಮುಖ್ಯವಾಗಿ "ಪ್ರೌಢಶಾಲೆ ಪರೀಕ್ಷೆಗಳಿಗೆ ಹಿಂದಿಯನ್ನು ತೃತೀಯ ಕಡ್ಡಾಯ ಭಾಷೆಯಾಗಿ ಹೇರಿದ ಸರ್ಕಾರದ ಆದೇಶದ ವಿರುದ್ಧ ಹಿಂದಿ ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟದ ರಚನೆ ಹಾಗೂ ಯಶಸ್ವಿ ಹೋರಾಟ. ಸಾತನೂರಿನ ಬಳಿ ಜಪಾನ್ ಟೌನ್‌ಶಿಪ್ ನಿರ್ಮಾಣ ವಿರೋಧಿ ಹೋರಾಟದ ಸಂಚಾಲಕತ್ವ ಹಾಗೂ ಟೌನ್‌ಶಿಪ್ ರದ್ಧತಿ. ತುಂಗಾ ಮೂಲಕ ಗಣಿಗಾರಿಕೆ ವಿರುದ್ಧ ನಡೆಸಿದ ಯಶಸ್ವಿ ಆಂದೋಲನ. ಪರಿಸರ ರಕ್ಷಣೆಗಾಗಿ ತುಂಗಾತೀರ ಜನತೆಯ ಸಮಾವೇಶದ ಸಂಚಾಲಕತ್ವ. ಬೀದರ್‌ನ ಕೋಲಾರ ಕೈಗಾರಿಕೆ ಮಾಲಿನ್ಯ ವಿರೋಧಿ ಹೋರಾಟದ ಮುಖಂಡತ್ವ, ಮಾಲಿನ್ಯಕಾರಕ ಕೈಗಾರಿಕೆಗಳಿಗೆ ಬೀಗಮುದ್ರೆ. ಜಾಗತೀಕರಣ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟದ ಸ್ಥಾಪಕ ಸಂಚಾಲಕ. ಬಿ.ಇ. ಪಠ್ಯಕ್ರಮದಲ್ಲಿ ಕರ್ನಾಟಕ ಇತಿಹಾಸ ಪಾಠಗಳನ್ನು ಉಳಿಸಲಿಕ್ಕಾಗಿ ನಡೆದ ಯಶಸ್ವಿ ಹೋರಾಟದ ಸಂಚಾಲಕತ್ವ. ರಟ್ನಹಳ್ಳಿ ಮತ್ತು ಕೈಗಾ ಅಣುಸ್ಥಾವರ ವಿರೋಧಿ ಹೋರಾಟ ಸಮಿತಿಯ ನಾಯಕತ್ವ. ಚಿತ್ರದುರ್ಗ ಜಿಲ್ಲೆಗೆ ಪರ್ಯಾಯ ನೀರಾವರಿ ಯೋಜನೆ ರೂಪಿಸಲು ರಚನೆಯಾದ ಮುಕ್ತ ವಿಚಾರ ವೇದಿಕೆಯ ಅಧ್ಯಯನ ತಂಡದ ನಾಯಕತ್ವ, ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಜನ ಜಾಗೃತಿ ಜಾಥದ ನಾಯಕತ್ವ,

ಗಣಿಗಾರಿಕೆ ವಿರೋಧಿ ಹೋರಾಟದಲ್ಲಿ ಸಕ್ರಿಯ ಪಾಲುದಾರಿಕೆ. ಜನಮತ–ಕೋಮುವಾದಕ್ಕೆ ವಿರೋಧವಾಗಿ ಕರ್ನಾಟಕ ವೇದಿಕೆಯ ಸಂಚಾಲಕತ್ವ, ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಕನಕಪುರ ತಾಲ್ಲೂಕಿನಲ್ಲಿ ವಶಪಡಿಸಿಕೊಳ್ಳಲು ಉದ್ದೇಶಿಸಿದ್ದ 3000 ಎಕರೆ ಕೃಷಿಭೂಮಿ ಸ್ವಾಧೀನ ವಿರೋಧಿಸಿ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ. ಮಾದಿಗ ಜನಾಂಗಕ್ಕೆ ಪ್ರತ್ಯೇಕ ಮೀಸಲಾತಿ ಹೋರಾಟದಲ್ಲಿ ಸಹಭಾಗಿತ್ವ." ಇನ್ನೂ ಹಲವರಾರು ಸಮಾಜಮುಖಿ ಹೋರಾಟಗಳು ಇವರಿಂದ ಯಶಸ್ಸು ಕಂಡಿರುವುದು ಇವರ ಸಾಮಾಜ ಸೇವಾ ಕಾಳಜಿಯ ತಾತ್ವಿಕತೆಗೆ ಸಾಕ್ಷಿ. ನವ್ಯ ಸಾಹಿತ್ಯದ ನಂತರದ ದಲಿತ ಬಂಡಾಯ ಸಾಹಿತ್ಯದ ಸಾಲಿನಲ್ಲಿ ಕಾಣುವ ಮತ್ತು ಅದನ್ನೂ ಮೀರಿ ಆಧುನಿಕೋತ್ತರ ಕನ್ನಡ ಕಾವ್ಯ ಸಾಹಿತ್ಯದ ಹೊಸ ಹುಡುಕಾಟದ ಬಗೆಗೆ ನಿರಂತರ ಸಂಶೋಧನೆಯಲ್ಲಿರುವ ಬಂಜಗೆರೆ ಕೇವಲ ಬರಹರೂಪದಲ್ಲಿ ಸಮಾಜಮುಖೀ ಚಿಂತನೆಯನ್ನಷ್ಟೇ ಹೊರಗೆಡಹದೆ ಅದನ್ನು ಸಕ್ರಿಯಾಶೀಲವಾಗಿ ಕಾಣಿಸುತ್ತಿರುವುದು ಸಾಹಿತ್ಯಲೋಕದಲ್ಲಿ ಅತೀ ಅಪರೂಪ.

ದಲಿತೇತರ ಕವಿಯಾದರೂ ನಿಜ ಬಂಡಾಯದ ದಲಿತ ಧೋರಣೆಯ ತೀವ್ರಕಾವು ಬಂಜಗೆರೆಯವರ ಕೃತಿಗಳಲ್ಲಿ ದಟ್ಟವಾಗಿ ಕಾಣುತ್ತೇವೆ. 'ಬಂಡಾಯವಿಲ್ಲದ ದಲಿತ ಕವಿ–ಕಾವ್ಯ ಹುಟ್ಟುವ ಮೊದಲೇ ಸಾಯುವುದು ಮೇಲು' ಈ ನೆಲೆಯಲ್ಲಿ ನೋಡಿದಾಗ ಬಂಜಗೆರೆ ಕಾವ್ಯದ ಕಾವು ಅಸಮಾನತೆಯ ವಿರುದ್ಧ ಹೋರಾಡುವ ಕಳಕಳಿಯ ಅದೆಷ್ಟೋ ಹೋರಾಟಗಾರರನ್ನು ಸೃಷ್ಟಿಸಿತು.

'ಕಚ್ಚಿಕೋ ತುಟಿ ಎತ್ತಿಕೋ ಬಿಲ್ಲು ನಿಧಾನ ತೋರುಬೆರಳು ನಡುಬೆರಳ ನಡುವೆ ಹಿಡಿ ಬಾಣ ಹೂಡು ಹೊಡಿ ನಡಿ ಸಲ್ಲಿಸಲು ಭ್ರಾತೃ ರಕ್ಷಣೆ' ಎನ್ನುವುದನ್ನು 'ಹೊಸ ಕಲಿಕೆ' ಕವಿತೆಯೂ; 'ನಾನೊಬ್ಬ ಸೈನಿಕ, ಸಾವಲ್ಲ ನನ್ನ ಗುರಿ ಇಲ್ಲಿ ಕತ್ತಲಿದೆ, ಎಷ್ಟು ದಟ್ಟವಾಗಿದೆ ನೋವಿನ ಕಾಡು, ಭೂಮಿಗೆ ಎಷ್ಟೊಂದು ಗಾಯ'ವೆಂಬ ದುಗುಡವನ್ನು 'ಯುದ್ಧ ರಂಗದಿಂದ ಗೆಳತಿಗೆ' ಕಾವ್ಯವೂ; 'ನಿಮ್ಮ ಹಾಡುಗಳಲ್ಲಿ ಬಂಧಿಸಿಡಬೇಡಿ ನನ್ನ ಹಾಡುಗಳಿರಲಿ ನನಗಾಗಿ; ನಾನಿರಲಾರೆ ಹಾಡುಗಳಿಗಾಗಿ' ಎಂಬ ಜಗತ್ತಿನ ಪ್ರತಿಯೊಬ್ಬನೂ ಬಯಸುವಂತಹ 'ಬಂಧಿ ಹಕ್ಕಿಯ ಆಸೆ' ಕವನವೂ; 'ಜೀವಕ್ಕೆ ಒಂದು ತುತ್ತು ಪ್ರೀತಿ ಒಂದು ಗುಟುಕು ನೀತಿ ಗೂಡು ಕಟ್ಟಲೊಂದು ಮರ ಜೊತೆ ಉಳಿಸಿಕೊಡಿ' ಎಂಬು ಬಿಡುಗಡೆಗೆ ಹಪಹಪಿಸುವಂತಹ 'ಬಂಧಿ ಹಕ್ಕಿಯ ಆಸೆ' ವಿಷಾಧದ ಗೀತೆಯೂ ಮತ್ತು 'ಶೋಕ ಶ್ಲೋಕವಾಗುವ ಮಾತು ಹಳತು ಈ ಭೂಮಿಗೆ ಶೋಕ ಶಸ್ತ್ರವಾಗುವ ಗಳಿಗೆ ಬಂದಿದೆ ಈಗ ಭುವಿಗೆ' ಎಂದು ಶತಮಾನಗಳ ಸತ್ಯಾಗ್ರಹಕ್ಕೆ ಬೇಸತ್ತು ಹೊಟ್ಟೆಯ ಬೆಂಕಿ; ಶ್ರಮದ ಬೆವರಿನ ವಾಸನೆ 'ಇದ್ದಲಿಗೊಂದು ಪಾಡ್ದನ'[9] ಕಾವ್ಯ ಧಾಟಿಯ ಸಾಲು ಕವಿತೆಗಳು: ಈ ಹೊತ್ತಿನ ಸ್ಥಿತಿಗೆ ಏನು ಬೇಕೆಂಬುದನ್ನು ಸಾಚಾ ಮನಸ್ಸಿನಿಂದ ವ್ಯಾಖ್ಯಾನಿಸಿರುವುದು ಕೆಲವು ಮಂಕುದಿಣ್ಣೆ ಮನಸ್ಥಿತಿಯ ಮತ್ತು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಬಲ್ಲ ಕೆಲವು ಶಿಖಂಡಿ ಮನಸ್ಥಿತಿಯವರಿಗೆ ಹೇಗೆ ತಾನೇ ಅರ್ಥವಾಗಬೇಕು. ಕಾವ್ಯ ಕೇವಲ ರಂಜನೆಗಷ್ಟೇ ಅಲ; ಅದು ಬದುಕನ್ನು ಅರಳಿಸುವ ಊರುಗೋಲೂ ಆಗಬೇಕು ಎಂದು ಬಯಸುವ ಇಂದಿನ ಸಂದಿಗ್ಧತೆಯ ಅಸಮಾನ ವಿಷಮ ಸ್ಥಿತಿಯ ದಟ್ಟ ಕಾರ್ಮೋಡದಲ್ಲಿ ಮುಳುಗುತ್ತಿರುವ ನಿಜ ಮನಸುಗಳಿಗೆ ಬಂಜಗೆರೆ (ಜೆಪಿ) ಕಾವ್ಯತ್ವದ ವಿಚಾರ ಸರಿ ಎನಿಸದೆ ಇರುವುದಿಲ್ಲ.

ಕೊನೆ ಟಿಪ್ಪಣಿ

1. ಸುರೇಶ್‌ಗೌತಮ್: 'ಮಾತು ಕೊಂದ ಭಾರತ' ಕ.ಸಂ. (ವಿಧೀಶಾ ಪ್ರಕಾಶನ: 2013) 'ನನ್ನ ನುಡಿ'
2. ಅದೇ: ನನ್ನ ನುಡಿ
3. ಸಿದ್ಧಲಿಂಗಯ್ಯ: 'ಹೊಲೆಮಾದಿಗರ ಹಾಡು' ಕ.ಸಂ. (ಅಂಕಿತ ಪುಸ್ತಕ: 2000) 'ಒಂದು ಪದ' ಪು. 59.
4. ಸಿದ್ಧಲಿಂಗಯ್ಯ: 'ಕಪ್ಪುಕಾಡಿನ ಹಾಡು' ಕ.ಸಂ. (ಅಂಕಿತ ಪುಸ್ತಕ: 2000) 'ನಲವತ್ತೇಳರ ಸ್ವಾತಂತ್ರ್ಯ' ಪು. 138.
5. ಕುಶಾಲ: 'ಅರವಿಂದ ಮಾಲಗತ್ತಿ ಅವರ ಕಾವ್ಯಾನುಸಂಧಾನ' (ಈಶ್ವರಿ ಪ್ರಕಾಶನ: 2005) ಪು. 69.
6. ಅರವಿಂದ ಮಾಲಗತ್ತಿ: 'ವಿಶ್ವತೋಮುಖ ಹೂ ಬಲು ಭಾರ' (ಸಿರಾ ಪಬ್ಲಿಸಿಂಗ್ ಹೌಸ್: 2010) 'ರಾಮನಗರದ ಬಂಡೆಗಳು' ಪು. 36.
7. ಸಿಪಿಲೆ ಸತೀಶ್: 'ಬಿರಿದ ಹೂಗಳ ನಡುವೆ' (ರವಿ ಪ್ರಕಾಶನ: 2011) ನನ್ನ ನುಡಿ
8. ಸುಧೀಂದ್ರಕುಮಾರ್ ಆರ್: 'ಅಕಾವ್ಯಕ್ಕೆ ಅರ್ಥ ಗೊತ್ತಿಲ್ಲ ನನಗೆ' (ಪ್ರಕೀರ್ಣ ಪ್ರಕಾಶನ: 2009) ಪು. 49.
9. ಬಂಜಗೆರೆ ಜಯಪ್ರಕಾಶ: 'ಮಹೂವಾ' (ಚರ ಪ್ರಕಾಶನ: 1992) ಪು. 33/3/12/13/54

ಅಧ್ಯಾಯ–4

ಆಧುನಿಕೋತ್ತರ ದಲಿತ ಕಾವ್ಯಗಳಲ್ಲಿನ ವೈರುಧ್ಯತೆ

ಹಾಗೆ ನೋಡಿದರೆ ಕಾವ್ಯ ಬರೆಯುವ ಕ್ರಿಯೆ ಯಾವ ಕಾಲದಲ್ಲೂ ಸುಗಮವಾಗಿರಲಿಲ್ಲ. ಕತ್ತಲೆಯಲ್ಲಿ ದಾರಿ ಹುಡುಕುತ್ತಾ ಹೊರಟಂತೆ ಎಲ್ಲ ಕಾಲಕ್ಕೂ ಕ್ಲಿಷ್ಟಕರವಾದದ್ದು ಮತ್ತು ಅಂತರಂಗದಲ್ಲಿ ಕವಿಗೆ ಆನಂದದಾಯಕವಾದದ್ದೇ ಆಗಿದೆ. ಈ ನಡುವೆ ಕೆಲವು ಕವಿಗಳು ಸ್ವಯಂ ಸೂರ್ಯರಾಗಿ ತಾವು ನಡೆದದ್ದೇ ದಾರಿ ಎಂದು ಮುನ್ನಡೆದಿದ್ದಾರೆ. ಇನ್ನು ಕೆಲವರು ಬೇರೆಯವರು ನಡೆದು ತೋರಿಸಿದ ಹಾದಿಯನ್ನೇ ಸವೆಸಿದ್ದಾರೆ. ಇನ್ನೂ ಬಹುಪಾಲು ಕವಿಗಳು ಕಾಡಿನ ಕತ್ತಲೆಯಲ್ಲಿ ಕರಗಿ ಎಷ್ಟು ಬೆಳಗಾದರೂ ದಾರಿ ತಲುಪುವುದೇ ಇಲ್ಲ. ವಿಶೇಷವೆಂದರೆ: ಹೊಸ ತಲೆಮಾರಿನ ಕವಿಗಳಿಗೆ ನಾಡಿನ ಕವಿ ಸಿದ್ಧಲಿಂಗಯ್ಯ ಮತ್ತು ದೇಶದ ದಲಿತ ದನಿ ಅಂಬೇಡ್ಕರ್ ಈವರೆಗಿನ ಎಲ್ಲಾ ದಲಿತ ಕವಿಗಳ ಕವಿತ್ವದ ಬೆಳೆಗೆ ಮಳೆ–ಮೋಡದ ಮುಖ್ಯ ಮಾದರಿಯೇ ಆಗಿದ್ದಾರೆ.

ಅ. ಸುರೇಶ್ ಗೌತಮ್‌ರವರ ಕಾವ್ಯದ ವೈರುಧ್ಯತೆ:

ಧರ್ಮಾಂಧತೆ, ಕೋಮುವಾದ ಮತ್ತು ಅನುದಾರತೆಯ ನಡುವೆ ಉಸಿರುಗಟ್ಟಿಸಿರುವ ಇಂದಿನ ವಾತಾವರಣವು ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕನ್ನು ವಿಷಮಯವನ್ನಾಗಿ ಮಾಡುತ್ತಿದೆ. ಇಡೀ ಮಾನವಕುಲದ ಹಿತಕ್ಕಾಗಿ ಮಿಡಿಯಬೇಕಾಗಿದ್ದ ನಮ್ಮ ಕವಿಗಳಲ್ಲಿ ಅನೇಕರು ಕೋಮುವಾದದ ಬೆಂಕಿಗೆ ತುಪ್ಪ ಸುರಿಸುತ್ತಾ, ಜನಾಂಗೀಯ ದ್ವೇಷಕ್ಕೆ ಬೀಜ ಬಿತ್ತುವುದರಲ್ಲಿ ತಲ್ಲೀನರಾಗಿದ್ದಾರೆ. ಮಾನವನತೆಗೆ ಬದ್ಧವಾಗಿರುವ ಹಿಂದಿನ ಕವಿತ್ವವನ್ನು ಒಪ್ಪಿಕೊಂಡು ಅದರ ನೆರಳಿನ ಪ್ರೇರಣೆಯಲ್ಲಿ ಮತ್ತಷ್ಟು ಬಗೆಯಲ್ಲಿ ಬೆಳಕನ್ನು ಕಾಣಿಸುವ ಕಾರಣಕ್ಕಾಗಿ ಕವಿಯು ತನ್ನ ಬದುಕಿನ ಮತ್ತಷ್ಟು ವಾಸ್ತವತೆಗಳನ್ನು ತೆರೆದಿಡುತ್ತಾ ಭರವಸೆಯ ಮಂದಹಾಸವನ್ನು ಬೀರುತ್ತಿರುವುದು ಈ ಆಧುನಿಕೋತ್ತರ ಕಾಲದ ಕನ್ನಡ ಕಾವ್ಯ ಘಟ್ಟದಲ್ಲಿ ಬಹುಮುಖ್ಯವಾಗಿ ಕಾಣಬಹುದಾಗಿದೆ.

ಸುರೇಶ್ ಗೌತಮ್ ತಮ್ಮ ಆರಂಭದ ಕವನ ಸಂಕಲನವಾದ 'ಬೆಳ್ಳಿಗೆರೆಯ ದೀವಿಗೆ ಮತ್ತು ಎರಡನೇ ಸಂಕಲನವಾದ 'ಮಾತು ಕೊಂದ ಭಾರತ'ದ ಮೂಲಕ ಕಾವ್ಯ ಲೋಕವನ್ನು ಪ್ರವೇಶಿಸಿದ್ದಾರೆ. ಇವರ ಕಾವ್ಯ ಪ್ರೇಮಕ್ಕೆ ಮುಖ್ಯ ಕಾರಣ ತಮ್ಮ ಹುಟ್ಟಿನ ಮೂಲವಾದ ಜಾತೀಯತೆಯ ಅಪಹಾಸ್ಯವೇ ಆಗಿದೆ. ದಲಿತ ಲೋಕದ ಆರಂಭದ ಕವಿ ಸಿದ್ಧಲಿಂಗಯ್ಯ ವಾಸ್ತವಾಗಿ ಎಲ್ಲ ದಲಿತ ಲೇಖಕರಿಗೆ, ಕವಿಗಳಿಗೆ, ಸಂಶೋಧಕರಿಗೆ ಮಾದರಿಯಾಗುವಂತೆ ಪ್ರಸ್ತುತ ಇಲ್ಲಿನ ಕವಿಗಳಿಗೂ ಮಾದರಿಯಾಗುತ್ತಾರೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹೊಸದಾಗಿ ಕಣ್ಣು ಬಿಡುತ್ತಿರುವ ಸಮುದಾಯ ದಲಿತ ಸಮುದಾಯವೇ ಆಗಿದ್ದು ನಮ್ಮ ಕವಿಗಳೂ ಅದೇ ವರ್ಗಕ್ಕೆ ಸೇರಿದವರಾಗಿರುವ ಕಾರಣ ಆರಂಭದ ದಲಿತ ಬರಹಗಾರರನ್ನು ಮಾದರಿಯಾಗಿ ಬೆಳೆದು ಅರಿವಿನ ಅಘಾಧತೆ ಹೆಚ್ಚಾದ ನಂತರ ಮಾದರಿಯಾದ ನೆಲೆಯಿಂದಲೇ ಪ್ರಶ್ನೆಯನ್ನು ಹುಟ್ಟುಹಾಕುತ್ತಾರೆ. ಇದು ವಿಚಿತ್ರವೆಂದು ಕಂಡರೂ ದಲಿತ ಲೋಕದ ಕಾವ್ಯದ ತಾಯ್ತನ ಭವಿಷ್ಯದಲ್ಲಿ ಬೃಹದಾಕಾರವಾಗಿ ಹೊಚ್ಚಹೊಸದಾದ ಬದಲಾವಣೆಯ ಬೆಳಕನ್ನು ಚಿಗುರಿಸಬಹುದಾದ ಮರಿ ಮೊಳಕೆಯನ್ನು ಜತನವಾಗಿ ಕಾಪಿಡಲು ಹರ್ಷಿಸುತ್ತದೆ. ಈ ತಾಯ್ತನದ ಕಾವ್ಯ ತಿನಿಸನ್ನು ಅಂದಿನ ದಲಿತ ಕವಿ ಇಂದಿನ ಸಮನ್ವಯ ಕವಿಯಾಗಿರುವ ಸಿದ್ಧಲಿಂಗಯ್ಯನವರು ಹೊಸ ಹುರುಪಿನ

ಕವಿಗಳಿಗೆ ಪ್ರೀತಿಯಿಂದ ಪೋಷಿಸುತ್ತಿದ್ದಾರೆ. ಕಾಲಚಕ್ರದಲ್ಲಿನ ಇತಿಹಾಸ ಹೀಗೆಯೇ ಇದ್ದರೂ ಬುದ್ಧ ಅಂಬೇಡ್ಕರ್ ಜನಾನು ರಾಗಿಗಳಾಗಿದ್ದುದರ ಕಾಣ್ಕೆಗೆ ನಮ್ಮೆಲ್ಲರ ಒತ್ತಾಸೆಯಿಂದ ಮತ್ತೆ ಮನುಷ್ಯತ್ವದ ಬೀಜವನ್ನು ನೆಡುವ ಬಿತ್ತುವ ಕೆಲಸ ಸಾಗಬೇಕೆನಿಸುತ್ತದೆ. ಆಧುನಿಕೋತ್ತರ ಕನ್ನಡ ದಲಿತ ಕವಿಗಳು ಇದನ್ನು ಒಪ್ಪುತ್ತಾರೆ. ಬುದ್ಧನ ಜೀವತತ್ವದ ಪ್ರಕಾರ ಮನುಷ್ಯನನ್ನು ಸಂಸ್ಕಾರಗೊಳಿಸುವುದೇ ಧಮ್ಮ. ಅನಿಮಿಷವಾಗಿ ಏನೊಂದೂ ನಡೆದುಬಿಡುವುದಿಲ್ಲ ಎಂಬುದರಿಂದ ಮೊದಲುಗೊಂಡು ಏನಾದರೂ ಸರಿ 'ಮೊದಲು ಮಾನವನಾಗು' ಎನ್ನುವ ನಿಟ್ಟಿನಲ್ಲಿ ಬದುಕಿನ ಸಾರ್ಥಕತೆಗೆ ಹೆಜ್ಜೆಗುರುತುಗಳನ್ನು ಮೂಡಿಸುವ ಕಾಯಕವಷ್ಟೇ, ಮನುಷ್ಯಪರ ಇರುವವರು ಅಸಮಾನತೆಯ ಬಗೆಗೆ ದಿಗ್ಭ್ರಾಂತರಾಗುವಾಗಲೂ ವ್ಯವಸ್ಥೆಯಲ್ಲಿ ಧನಾತ್ಮಕವಾದ ನಂಬಿಕೆಯೊಂದಿಗೆ ಮುನ್ನಡೆವ ಕಡೆಗೆ ದೃಷ್ಟಿಯನು ತುಸು ಹಿಗ್ಗಲಿಸಿ ನೋಡಬೇಕಾದ ಜವಾಬ್ಧಾರಿಯನ್ನು ಇಂದು ಜರೂರಾಗಿ ಹೊರಬೇಕಾಗುತ್ತದೆ. ಮುಖ್ಯವಾಗಿ ಅಂಬೇಡ್ಕರ್ ವಿಚಾರದ ಜಾಡಿನಲ್ಲಿ ದೇಶಕಟ್ಟುವುದಷ್ಟೇ ನಮ್ಮ ಜವಾಬ್ಧಾರಿ ಆಗಬೇಕು. ಪ್ರಭುತ್ವದ, ಕ್ರೌರ್ಯದ, ಧರ್ಮಾಂಧತೆ, ಸಾಮಾಜಿಕ ವ್ಯವಸ್ಥೆಯಲ್ಲಿನ ಅಸಮಾನತೆ ಹಾಗೂ ವೈಯುಕ್ತಿಕ ಬದುಕಿನಲ್ಲಿನ ತಳಮಳಗಳಿಂದಲೇ ಮಹತ್ವದ ಅಭಿವ್ಯಕ್ತಿಗಳಿಗೆ ಮನಸುಗೊಟ್ಟ ಬಸವಣ್ಣ, ನೆರೂಡ ಮುಂತಾದ ಮಹತ್ವದ ಕವಿಗಳ ರಚನೆಗಳು ನಮಗೆ ಸಮಕಾಲೀನವಾಗುವುದು ಈ ಬಗೆಯ ಅನನ್ಯತೆಯಿಂದಲೇ.

ಆ. ಲಕ್ಕೂರು ಆನಂದರ ಕವಿ–ಕಾವ್ಯದ ಮೇಲೆ ದಲಿತ ಬಂಡಾಯದ ಸಾದೃಶ್ಯತೆ:

ದಲಿತ ಬರಹಗಾರರಿಗೆ ದಮನಿತರ ವಿಚಾರ ಮುಖ್ಯ ಅಭಿವ್ಯಕ್ತಿ ವಿಷಯವಾಗುವುದರ ಜೊತೆಗೆ ದಲಿತೇತರರ ಜೀವನ ವಿಚಾರವೂ; ಅವರ ಕಾವ್ಯಧಾರೆಯೂ ಮುಖ್ಯವಾಗುತ್ತದೆ. ಇಡೀ ಸಮಷ್ಠಿಯೂ ಸಮಾನವಾಗಿ ಜೀವಿಸಬೇಕೆಂಬ ಉದಾರ ಭಾವ ಮೂಡುತ್ತದೆ. ಮತ್ತು ದಲಿತರ ಮನಸಿನ ಅಂಗಳದಲ್ಲಿ ಸಕಲವೂ ಜೀವ ಪಡೆಯುತ್ತವೆ. ಆದರೆ ದಲಿತೇತರರಿಗೆ ದಲಿತರ ವಿಚಾರ ಮೊದಲೇ ವರ್ಜ್ಯ, ಕೆಲವರನ್ನು ಮಾತ್ರ ಹೊರತುಪಡಿಸಿ. ಅದೇ ಸಕಲ ಕೆಲಸಗಳಿಗೆ ದಲಿತರು ಅವಶ್ಯ; ಪ್ರತಿಫಲಗಳ ವಿಚಾರ ಬಂದಾಗ ಅವರು ನಿಶಿದ್ಧ. ದಲಿತರ ಎಲ್ಲ ಕಾವ್ಯದ ಸತ್ವಕ್ಕೂ ದಲಿತ ಸಮುದಾಯದ ನಿತ್ಯ ಬದುಕು–ಬವಣೆಯೇ ಹೋಲಿಕೆಯ ವಸ್ತುವಾಗಿದೆ. ದಲಿತರ ಸಮಾನತಾವಾದ ಮತ್ತು ದುಷ್ಟರ ಅಸಮಾನತೆಯ ನಡುನಡುವೆ ನಿತ್ಯ ಸಂಘರ್ಷ ಇದ್ದದ್ದೇ. ದಮನಿತರ ಬದುಕು ಮತ್ತು ಪ್ರಕೃತಿಯ ನ್ಯಾಯವನ್ನು ಕಾವ್ಯ ಸದಾ ಹೋಲಿಸಿ ನೋಡುತ್ತಿರುತ್ತದೆ.

ಎಂಬತ್ತರ ದಶಕದಲ್ಲಿ ಕನ್ನಡ ನೆಲದಲ್ಲಿ ಮೈದೋರಿದ್ದ ಬಂಡಾಯ ಸಾಹಿತ್ಯ ಚಳವಳಿ, ರೈತ ಮತ್ತು ದಲಿತ ಚಳವಳಿಗಳು ಈಗ ಮಹಾಮೌನದಲ್ಲಿವೆ. ಈಗ ಅವುಗಳ ಜಾಗದಲ್ಲಿ ಸ್ಥಳೀಯ ಸೂಕ್ಷ್ಮಗಳನ್ನೆಲ್ಲ ಏಕಕಾಲಕ್ಕೆ ನಿರ್ನಾಮ ಮಾಡಲು ಟೊಂಕಕಟ್ಟಿಯೇ ನಿಂತಿರುವ ಜಾಗತೀಕರಣ ಮತ್ತು ಕೋಮುವಾದಗಳು ಮೆರೆಯುತ್ತಿವೆ. ಮಾನವ ಮನಸ್ಸುಗಳ ಸಹಜ ಅಭಿವ್ಯಕ್ತಿಗೆ ನಿತ್ಯನಿರಂತರವಾಗಿ ಧಕ್ಕೆ ತರುತ್ತಿರುವ ಈ ಹೀನ ಕಾಲಘಟ್ಟದಲ್ಲಿಯೂ ವೈಯುಕ್ತಿಕ ಬದುಕಿನ ಹತಾಶೆ ಹಾಗೂ ಸಮಾಜಿಕ ಜೀವನದ ವೈರುಧ್ಯಗಳ ಸಂಘರ್ಷದೊಂದಿಗೆ ಹೋರಾಟ ನಡೆಸುವವರಿದ್ದಾರೆ. ಮಾನವ ಸಮಾಜದ ಏಳಿಗೆಗೆ ಧ್ವನಿಯಾದ ಮಹಾ ಮನಸ್ಸುಗಳ ಸಹಜ ಪ್ರೀತಿಯನ್ನೇ ಆದರ್ಶವಾಗಿಸಿಕೊಂಡವರಿದ್ದಾರೆ. ಹೊಸ ಸಮಾಜದ ಉದಯಕ್ಕಾಗಿ; ಹೊಸ ಆಲೋಚನೆಯನ್ನು ಪ್ರೀತಿಯ ಕಣ್ಣುಗಳಿಂದ ಅಕ್ಷರವಾಗಿಸಿದ ಜಾತ್ಯಾತೀತ, ಧರ್ಮಾತೀತವಾಗಿ ಒಡಮೂಡಿದ ಅಪರೂಪದ ಕವಿತ್ವ ಇವರ ಕಾವ್ಯಗಳಿಲ್ಲಿವೆ.

ಇ. ಹನಸೋಗೆಯವರ ಸೋಮಶೇಖರ್ ಅವರ ಕಾವ್ಯ ತೌಲನಿಕತೆ:

"ಭೀಮನಂತಾಗುವ ಆಸೆ
ಭೀಮನ ಆಸೆ ಪೂರೈಸುವಾಸೆ
ಭೀಮನಂತಾಗುವ ಆಸೆ"

'ಅಪ್ರತಿಮ ಜ್ಞಾನಿ ಹುಟ್ಟು ಸ್ವಾಭಿಮಾನಿ ಜೈ ಭೀಮನಂತಾಗುವಾಸೆ ಅದ್ವಿತೀಯ ಲೇಖಕ ಸಂವಿಧಾನದ ಜನಕ ಸ್ಫುಟವಾಗ್ಮಿ ನಿಜಪ್ರೇಮಿ ಭೀಮನೆ ಆಗುವಾಸೆ ಭೀಮನ ಮನದಾಸೆ ಈಡೇರಿಸುವಾಸೆ। ಛಲಬಿಡದ ನಾಯಕ ಬಹುಜನರ ರಕ್ಷಕ ಜೈ ಭೀಮನಂತಾಗುವ ಆಸೆ। ಧಮ್ಮಪಥದಿ ಸಾಗಿ ಬೌದ್ಧ ಭಿಕ್ಕುವೆಯಾಗಿ ನನ್ನಂತೆ ಬಾಳಿರೆಂದ ಭೀಮನೆ ಆಗುವಾಸೆ; ಭೀಮನ ಮನದಾಸೆ ಈಡೇರಿಸುವಾಸೆ। ನನ್ನ ಜನ ಈ ದೇಶ ಆಳಬೇಕೆನ್ನುವುದೆ ಜೈಭೀಮನ ಮಹದಾಸೆ; ಆನೆಗಳಿಂತಾಗಿ ಭೀಮ ಮಾರ್ಗದಿ ಸಾಗಿ ಅಧಿಕಾರದ ರಥವ ಮುನ್ನಡೆಸುವ ಆಸೆ ಭೀಮನ ಮಹದಾಸೆ ಈಡೇರಿಸುವ ಆಸೆ"[1] ಎನ್ನುವ ಶೀರ್ಷಿಕೆ ಪದ್ಯದಲ್ಲಿ ಹನಸೋಗೆ ಸೋಮಶೇಖರ್ ಅಂಬೇಡ್ಕರರ ಮನದಾಸೆಯನ್ನು ತಮ್ಮ ಮನದಾಸೆಯೆನ್ನುವ ಮೂಲಕ ಇಡೀ ದಲಿತ ಲೋಕ ಹಳೆಯ ಹೊಸ ತಲೆಮಾರಿನ ಬರಹಗಾರರೆಲ್ಲರಿಗೂ ಅಂಬೇಡ್ಕರ್ ಮಾದರಿಯಾಗಿರುವರು ಎನ್ನುವ ಸಂದೇಶಮೂಲಕ ದಲಿತ ಲೇಖಕರಿಗೆ ತಮ್ಮ ಸಮುದಾಯದ ಬಗೆಗೆ ಯಾವ ಮತ್ತು ಯಾರ ಗುರುಪರಂಪರೆಯ ಅಗತ್ಯವಿಲ್ಲದಿದ್ದರೂ ತಮ್ಮ ಬದುಕೇ ತಮಗೆ ಆದರ್ಶ, ಪ್ರೇರಕ, ಮಾದರಿ ಎಂಬ ವಾಸ್ತವ ಸಂದೇಶವನ್ನು ಹನಸೋಗೆ ಸೋಮಶೇಖರ್ ಕಾವ್ಯವೇ ಧ್ವನಿಸುತ್ತದೆ.

ಕವಿಗೆ ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿಯವರು ಆರಂಭದಲ್ಲಿ ಹೆಚ್ಚು ಪ್ರಿಯರಾಗಿದ್ದಾರೆ. ಅದು 'ಭೀಮನಂತಾಗುವ ಆಸೆ' ಕವನದಲ್ಲಿ ಕೆ.ಎಸ್.ನರಸಿಂಹಸ್ವಾಮಿ ಏಕಮುಖವಾದ ವೈಯುಕ್ತಿಕ ಆಸೆಯನ್ನು ತೋಡಿಕೊಂಡಿದ್ದಾರೆ. ಕವಿ ಹನಸೋಗೆ ಅದೇ ದಾಟಿಯಲ್ಲಿ ಸಮಷ್ಠಿ ಪ್ರಜ್ಞೆಯ ಮುಖವಾಣಿಯಾಗಿಸುವ ಕಾವ್ಯದ ಬಗೆಯಿಂದ ತಮ್ಮ ದೂರದರ್ಶಿತ್ವವನ್ನು; ವಿಶಾಲತೆಯನ್ನು ಮೆಚ್ಚುವಂತೆ ಮಾಡುತ್ತದೆ. ಅವರೇ ಕಾವ್ಯದಲ್ಲಿ ಹೇಳುವಂತೆ ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಎಲ್ಲರಿಗೂ ಅರ್ಥವಾಗಿಸುವ ವಚನಗಳು, ನಾಟಕ, ಅರಿವಿನ ಶಿಬಿರಗಳು, ಜನ ಸಾಮಾನ್ಯರ ಜನಪದ ಸಾಹಿತ್ಯ–ಸಾಂಸ್ಕೃತಿಕವಾದ ಬಿಡಿಬಿಡಿ ಸಂಘಟನೆಗಳು ಇಂದಿನ ಬಹುಜನರ ದಮನಿತರ ವಯುಕ್ತಿಕ ಬೇಡಿಕೆಗಳನ್ನು ಪೂರೈಸಬಹುದಾಗಿದೆ ಎನ್ನುವುದು ಮುಖ್ಯವಾಗುತ್ತದೆ. ಇಂದಿನ ಗುಣಮಟ್ಟದ ಸಮಾಜಕ್ಕೆ ಅಂಬೇಡ್ಕರ್‌ವಾದವೇ ಏಕೈಕ ಆಧಾರವಾಗಿದೆ. ಅಂತೆಯೇ ಬಹುಜನ ನಾಯಕ ಅಂಬೇಡ್ಕರ್ ಅಭಿಮಾನಿ, ಅನುಯಾಯಿ ಅಣುವಿಜ್ಞಾನಿಗಳಾದ ಕಾನ್ಷಿರಾಂರವರು "ಸಾಹಿತ್ಯದೊಳಗೆ ವಿಜ್ಞಾನವನ್ನು ತರುವ ಮೂಲಕ ದೇಶವನ್ನು ಮುಂದುವರಿಸಬೇಕಾಗುತ್ತದೆ"[2] ಎಂಬ ಅಭಿಪ್ರಾಯವನ್ನು ನೀಡಿದ್ದಾರೆ.

ಇಂದು ಸಂವಿಧಾನದ ಈಡೇರಿಕೆಗೆ ನಾಟಕದಷ್ಟೇ ಕಾವ್ಯ ಪ್ರಮುಖ ಆಕರ್ಷಣೀಯ ಮಾಧ್ಯಮವಾಗಿದ್ದು ವಿಚಾರ ಪ್ರಚಾರ ಸಾಮಾಜಿಕ ಬಹುಮುಖೀ ಒಳನೋಟವನ್ನು ಕಾಣಿಸಲು ಇಂದಿನ ಯುವ ಆಧುನಿಕ ಕಾವ್ಯ ಮನಸುಗಳನ್ನು ಕಟ್ಟುವ ಕೆಲಸ ಮಾಡುತ್ತವೆ. ಆದಾಗ್ಯೂ ಈ ಬಗೆಗೆ ಸುಮಾಸುಮ್ಮನೆ ಪರಂಪರೆಯುದ್ದಕ್ಕೂ ಕೆಸರೆರೆಚಾಟ ನಡೆದಿರುವುದು ಒಂದುಕಡೆಯಾದರೆ; ದೃಷ್ಟಿಯಂತೆಯೇ ಸೃಷ್ಟಿಯೆನ್ನುವವರು ಸಮಾಜವನ್ನು ಕಟ್ಟುವ ಕಾಯಕದೊಂದಿಗೆ ನಡೆದಿದ್ದಾರೆ. ಯಾವ ಕಾಲದಲ್ಲಿಯೂ ಸಮಾನತೆಗೆ ಒಕ್ಕೊರಲಿನ ಧ್ವನಿ ಮೂಡಿಲ್ಲ. ಒಂದು ಕಡೆ ಕಟ್ಟು ಒಂದು ಕಡೆ ಮುರಿಯುವ ಕೆಲಸ ನಡೆದಿದ್ದು; ಸ್ಥಾನಮಾನಗಳನ್ನು ಪಡೆದ ಮೊದಲ ತಲೆಮಾರಿನವರೇ ತಮ್ಮ ಹಿಂದಿನವರನ್ನು ಜತನವಾಗಿ ಕಾಯ್ದುಕೊಂಡು ನಮ್ಮಂತೆಯೇ ಅವರನ್ನೂ ಪೋಷಿಸಬೇಕೆನ್ನುವುದನ್ನು ಮರೆತು ಬಂದದಾರಿಯ ಕಡೆಗೆ ಕಣ್ಣೆತ್ತಿಯೂ ನೋಡದ ಬಲಿತರು ಕಿರಿಯ ದಲಿತರನ್ನು ತಮ್ಮ ಏರುವಿಕೆಯ ಮೆಟ್ಟಿಲನ್ನಾಗಿಸಿಕೊಂಡಿದ್ದಾರೆ. ಹಾಗೆಯೇ ಅವರನ್ನು ಓರೆ ಕಣ್ಣಿನಲ್ಲಿ ನೋಡುತ್ತಾ ಹುಸಿನಗುತ್ತಾ ಅವ್ರು ಅಲ್ಲೇ ಕುಂತವ್ರೆ ಎನ್ನುವುದು ಜಗತ್ತಿನ ಮಹಾ ವಿಷಾಧಗಳಲ್ಲದೆ ಮತ್ತೇನು? ಇವರ ಕವಿತೆಗಳು ಕೇವಲ ಬಹಿರಂಗದ ಆದೇಶಗಳ ನೆಲೆಯಿಂದ ಹೊರಬಂದವುಗಳಾಗಿರದೆ, ವೈಯಕ್ತಿಕ ಬದುಕಿನ ಬಿಕ್ಕಟ್ಟು ಹಾಗೂ ಬಹಿರಂಗದ ನೈರಾಶ್ಯದ ನೆಲೆಯಿಂದ ಬಂದಿವೆ. ಹಾಗೆಯೇ ಇಲ್ಲಿನ ರಚನೆಗಳು ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಡಿ.ಆರ್. ನಾಗರಾಜರ ಆಲೋಚನಾಕ್ರಮ ಮತ್ತು ಇಂದಿನ ದಲಿತ ಹೋರಾಟಗಾರ, ಸಂಘಟಕ ಎನ್.ಮಹೇಶ್‌ರ ಪ್ರಾಭಾವವಿದ್ದು ವಿಚಾರಪೂರಿತವಾಗಿವೆ. ಹಾಗಾಗಿ ಕೇವಲ ಸಂದೇಶಗಳನ್ನು ಸಾರುವ, ಉಪದೇಶಗಳನ್ನು ನೀಡುವ ಕವಿತೆಗಳಾಗದೆ ಪರಿಹಾರವನ್ನೂ ಸೂಚಿಸುವ ಕಾವ್ಯವಾಗಿದೆ.

ಈ. ಅರವಿಂದ ಮಾಲಗತ್ತಿ ಕಾವ್ಯದ ವೈರುಧ್ಯತೆ:

ಕನ್ನಡ ಕಾವ್ಯದ ಇತಿಹಾಸವನ್ನು ತಿರುವಿಹಾಕಿದರೆ, ಪ್ರಾಚೀನ, ಮಧ್ಯಕಾಲೀನ ಕಾವ್ಯಕ್ಕಿಂತ ಆಧುನಿಕೋತ್ತರ ಕನ್ನಡ ಕಾವ್ಯ ವಿಭಿನ್ನ ಮಾದರಿಯ ವಿಶಿಷ್ಟ ಪ್ರಕಾರವೆನಿಸುತ್ತದೆ. ಏಕೆಂದರೆ ಅದು ಪ್ರಾಚೀನ ಕಾವ್ಯ ಪರಂಪರೆಯ ಎಲ್ಲ ಸತ್ವ, ಶೀಲ, ಗುಣಗಳನ್ನು ಹೀರಿಕೊಂಡು ಸಂಪ್ರದಾಯ ಪರಂಪರೆಯ ಜಡತತ್ವಗಳನ್ನು ಬಿಟ್ಟು, ಆಧುನಿಕ ಜಗತ್ತಿನ ವಿಶಾಲ, ವೈವಿಧ್ಯತೆಗೆ ತನ್ನನ್ನು ಅರ್ಪಿಸಿಕೊಂಡು ಬೆಳೆಯತೊಡಗಿದೆ. ಈ ಆಧುನಿಕೋತ್ತರ ಕಾವ್ಯ ತನ್ನ ವಸ್ತು, ವಿಷಯ, ವಿಚಾರಗಳಲ್ಲಿ ಅಷ್ಟೇ ಅಲ್ಲ; ಕಾಲ, ದೇಶ, ಭಾಷೆ, ಶೈಲಿ, ರೂಪ, ರಚನೆಗಳಲ್ಲೆಲ್ಲ ವಿಶಿಷ್ಟವಾದ ಕಾರಣದಿಂದಾಗಿ ಇದನ್ನು ಆಧುನಿಕೋತ್ತರ ಕನ್ನಡ ಕಾವ್ಯವೆಂದು ಕರೆಯಬೇಕಾಗಿದೆ.

ಆಧುನಿಕ ಕನ್ನಡ ಕಾವ್ಯ ನವೋದಯ, ನವ್ಯ, ದಲಿತ–ಬಂಡಾಯ, ಮಹಿಳಾ ಸಾಹಿತ್ಯ ಪಂಥದ ನೂರಾರು ಕವಿಗಳಿಂದ ಶ್ರೀಮಂತವಾಗಿದೆ. ಈ ಸಾಹಿತ್ಯ ಪಂಥದ ಪ್ರಮುಖ ಕವಿಗಳೆಲ್ಲ 20ನೇ ಶತಮಾನದ ಕೊನೆಯ ದಶಕದವರೆಗಿನ ಆಧುನಿಕ ಸಮಾಜದ ನಾನಾ ವಿಷಯ, ವಿಚಾರ, ವೈವಿಧ್ಯಗಳಿಗೆ ಕಾವ್ಯದ ಮೂಲಕ ಸ್ಪಂದಿಸುತ್ತಾ ಬಂದಿದ್ದಾರೆ. ಆದ್ದರಿಂದಲೇ ಆಧುನಿಕ ಕನ್ನಡ ಕಾವ್ಯ ಸಮೃದ್ಧವಾಗಿ ಬೆಳೆದಿದೆ. ಮಹಾಕಾವ್ಯ ಸಂಪ್ರದಾಯವನ್ನು ಬಿಡದೆ ಅದರೊಳಗೆ ಆಧುನಿಕವಾದ ವೈಚಾರಿಕ, ವೈಜ್ಞಾನಿಕ ಚಿಂತನೆಯ ಪರಿಕಲ್ಪನೆಗಳನ್ನು ತಂದು ಮಹಾಛಂದಸ್ಸಿನಿಂದ ಆಧುನಿಕವಾದ ವೈಚಾರಿಕ, ವೈಜ್ಞಾನಿಕ ಚಿಂತನೆಯ ಪರಿಕಲ್ಪನೆಗಳನ್ನು ತಂದು ಮಹಾಛಂದಸ್ಸಿನಿಂದ ಆಧುನಿಕ

ಮಹಾಕಾವ್ಯ ರಚನೆ ಮಾಡಿದವರು. 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕವನ ಸಂಕಲನ ಕುವೆಂಪು ಅವರ ಹಲವಾರು ಕಾವ್ಯ ಕೃತಿಗಳಲ್ಲಿ ಒಂದು. ಈ ಶೀರ್ಷಿಕೆಯ ಕೋಗಿಲೆ ಆಧುನಿಕ ಭಾರತದ ತತ್ವ-ಚಿಂತನೆಯ ಜನಜೀವನದ ಸಂಕೇತವಾದರೆ, ಸೋವಿಯತ್ ರಷ್ಯಾ ಎಂಬುದು ಕಮ್ಯೂನಿಸ್ಟ್ ಸರ್ಕಾರವುಳ್ಳ ಪಾಶ್ಚಾತ್ಯ ರಾಷ್ಟ್ರಗಳ ತತ್ವ-ಚಿಂತನೆಯ ಜನ ಜೀವನದ ಸಂಕೇತವನ್ನು ಪ್ರತಿನಿಧಿಸುವ ಒಂದು ಪದ್ಯ. ಈ ಪದ್ಯವೇ ಇಡೀ ಸಂಕಲವನ್ನು ಪ್ರತಿನಿಧಿಸುವ ಶೀರ್ಷಿಕೆಯಾಗಿದೆ. ಈ ಆಧುನಿಕತೆಯನ್ನು 'ಕಲಿಯುಗ'ವೆಂದು ಕರೆಯುತ್ತಾರೆ. ಈ ಯುಗದ ಭಾರತದಲ್ಲಿ ಇನ್ನೊಂದು ಸಮಾಜದ ಬಡತನ, ಹಿಂಸೆಯ ದುರಂತ ಸ್ಥಿತಿಯನ್ನು ಚಿತ್ರಿಸುವ ಪದ್ಯ 'ಕಲ್ಕಿ' ಈ ಕಲಿಯುಗದ ಪ್ರತಿನಿಧಿ. ಇಂತಹ ದೇಶ, ಸಮಾಜದ ನಾನಾ ಮುಖಗಳನ್ನು ಕಾವ್ಯದ ಮೂಲಕ ತೋರಿಸಿಕೊಟ್ಟ ಕುವೆಂಪು ನವೋದಯ, ನವ್ಯ, ಬಂಡಾಯ, ದಲಿತ, ಮಹಿಳಾ ಸಾಹಿತ್ಯದ ತತ್ವ-ದೋರಣೆಗಳನ್ನು ಆಧುನಿಕ ಚಿಂತನೆಗೆ ತಮ್ಮನ್ನು ಒಗ್ಗಿಸಿಕೊಂಡು ಕಾವ್ಯ ಸೃಷ್ಟಿಸಿ ಮುಂದಿನ ಕಾವ್ಯ-ಕವಿಗಳಿಗೆ ಆದರ್ಶವಾದರು.

ಕುವೆಂಪು ತಲೆಮಾರಿನ ಕವಿಗಳ ಪ್ರೇರಣೆ, ಪ್ರಭಾಕ್ಕೊಳಗಾಗಿ ಸೃಷ್ಟಿಯಾದ ಕುವೆಂಪು ನಂತರದ ಸಾಲಿನ ಕವಿಗಳಾಗಿ ಪ್ರಸಿದ್ಧಿ ಪಡೆದಿರುವ ಡಾ. ಶಿವರುದ್ರಪ್ಪ, ಚನ್ನವೀರ ಕಣವಿ, ಚಂದ್ರಶೇಖರ ಕಂಬಾರ, ಹೆಚ್.ಎಸ್.ಶಿವಪ್ರಕಾಶ್, ಎಚ್.ಎಸ್.ವೆಂಕಟೇಶಮೂರ್ತಿ ಮುಂತಾದವರು. ಹೀಗಿದ್ದೂ ಕೂಡ ಮೇಲಿನ ಈ ಕವಿಗಳು ಇಂದು ತಾವು ನಡೆದು ಬಂದ ದಾರಿಯನ್ನು ಮೆಲುಕು ಹಾಕುತ್ತಿದ್ದಾರೆಯೇ ಹೊರತು; ನವ ಆಧುನಿಕತೆಯ ಬದಲಾವಣೆಗೆ ಸ್ಪಂದಿಸುತ್ತಿಲ್ಲ. ಅವರು ಜಗತ್ತಿನ ಮನೆ ಮಾತಾಗಿ ವಿಶ್ವವ್ಯಾಪಿ ಹರಡಿರುವ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಯ ವಿಷಯ, ವಿಚಾರ, ವಸ್ತು ವೈವಿಧ್ಯತೆಗಳ್ನು ತಮ್ಮ ಕಾವ್ಯ ರಚನೆಗೆ ಬಳಸಿಕೊಳ್ಳಬಹುದಿತ್ತು ಆದರೆ ಇದು ಸಾಧ್ಯವಾಗಿಲ್ಲ.

ಸಿದ್ದಲಿಂಗಯ್ಯ, ಚಂದ್ರಶೇಖರ್ ತಾಳ್ಯ, ಎಸ್.ಜಿ.ಸಿದ್ದರಾಮಯ್ಯ ಮುಂತಾದವರು ಜಾಗತೀಕರಣದ ವಸ್ತು, ವಿಷಯವುಳ್ಳ ಕಾವ್ಯಕ್ರಿಯೆಯಲ್ಲಿ ಮೌನವಹಿಸಿರುವುದು ಆಶ್ಚರ್ಯವೆನಿಸುತ್ತದೆ. ಹಾಗಾಗಿ ಇಂತಹ ವಿಷಯ, ವಿಚಾರಗಳಿಂದ ಆಧುನಿಕ ಕನ್ನಡ ಕಾವ್ಯ ವಂಚಿತವಾಗುತ್ತಿದೆ. ಈ ಕೊರತೆಯನ್ನು ತುಂಬಿಕೊಡಲೆಂದೆ ಜಾಗತೀಕರಣವನ್ನೆ ಪ್ರಧಾನ ವಸ್ತುವನ್ನಾಗಿ ಮಾಡಿಕೊಂಡು ತಮ್ಮ ಕಾವ್ಯದ ಮೂಲಕ ಕಟ್ಟಿಕೊಟ್ಟವರು ಅರವಿಂದ ಮಾಲಗತ್ತಿ. ಅವರ ಕಾವ್ಯಗಳು ಆಧುನಿಕ ಕನ್ನಡ ಕಾವ್ಯ ಪರಂಪರೆಯ ಎಲ್ಲ ಸತ್ವಶೀಲ ಗುಣಗಳನ್ನು ಹೀರಿಕೊಂಡು ರಚನೆಯಾಗಿದೆ. ಇದುವರೆಗಿನ ಕಾವ್ಯ ಪರಂಪರೆಯ ವೈಚಾರಿಕ, ತಾತ್ವಿಕ ನಿಲುವುಗಳಿಗೆ ಇವತ್ತಿನ ಆಧುನಿಕವಾದ ವೈಚಾರಿಕ, ವೈಜ್ಞಾನಿಕ, ತಾತ್ವಿಕ ಚಿಂತನೆಯ ನಿಲುವುಗಳನ್ನು ಒರೆಹಚ್ಚಿ ಶೋಧಿಸಿದ ಕಾವ್ಯಗಳಾಗಿ 'ಮೂರನೆಯ ಕಣ್ಣು' ಮತ್ತು 'ಸಿಲಿಕಾನ್ ಸಿಟಿ ಮತ್ತು ಕೋಗಿಲೆ' ಸ್ಥಾನಪಡೆದಿವೆ. ಇವುಗಳ ಭಾಷೆ, ಶೈಲಿ, ತಂತ್ರ, ವಸ್ತು, ವಿಚಾರ, ಚಿಂತನೆ, ಭಾವನೆಗಳು ಹದವಾಗಿ ತುಂಬಿದ ಇವರ ಕಾವ್ಯ ಸೃಷ್ಟಿಯೊಳಗೆ ಕುವೆಂಪು, ಬೇಂದ್ರೆ, ಪು.ತಿ.ನ., ಅಡಿಗ, ಶಿವರುದ್ರಪ್ಪ, ಚನ್ನವೀರಕಣವಿ ಮುಂತಾದವರ ಕಾವ್ಯ ಸತ್ವವಿದೆ.

'ಚಟ್ಟ ತೊಟ್ಟಿಲ ಭೂಮಿ' ಕಾವ್ಯ ಆರಂಭದಲ್ಲಿ ತನ್ನ ಕಾವ್ಯದ ಬಗ್ಗೆ ಮಾತನಾಡ ಹೊರಟು ಗರಿಬಿಚ್ಚಿಕೊಳ್ಳುತ್ತದೆ. ದಲಿತ-ಬಂಡಾಯ ಚಳುವಳಿ ಈ ದೇಶದ ಸಾಮಾಜಿಕ-ಆರ್ಥಿಕ ಅಸಮಾನತೆ, ಶೋಷಣೆಯನ್ನು ತೆರೆದಿಡುತ್ತದೆ. ಜಾತಿ, ಧರ್ಮಗಳಿಂದ ರಕ್ತಕೋಡಿ ಹರಿದಿದ್ದನ್ನು, ಮತ್ತು ವಿದೇಶಿಯರ ದರ್ಬಾರಿನಿಂದ ನಲುಗುತ್ತಿರುವ ದೇಶ, ಸಮಾಜದ ವ್ಯವಸ್ಥೆಗಳ ಬಗ್ಗೆ ಪ್ರಶ್ನಿಸಲು ಎಡೆಮಾಡಿಕೊಡುತ್ತದೆ. ಹೀಗೆ ಎಲ್ಲೋ ಆರಂಭವಾದ ಕಾವ್ಯ ಇನ್ನೆಲ್ಲೊ ಜಾಗೃತಿಯ ಕಾಳಜಿವಹಿಸುವ ಕಾವ್ಯಕ್ರಿಯೆಯೇ ಮಾಲಗತ್ತಿ ಅವರ ಕಾವ್ಯ ವಿಶೇಷ. ಇದೇ ಈ ಕವಿಯ ಸೋಪಜ್ಞತೆ. ಇವರ ಈ ಕವಿತೆಗಳು ಸಮಕಾಲೀನ ಜಾಗತಿಕ, ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳಿಗೆ ಅನುಗುಣವಾಗಿ ಆಧುನಿಕ ಜನಪರ ನಿಲುವುಗಳನ್ನು ಪ್ರಕಟಪಡಿಸುತ್ತವೆ. ಇಂತಹ ಕಾವ್ಯ ಸೃಷ್ಟಿಯ ಅಪರೂಪದ ಕವಿಗಳಾದ ಎಚ್.ಎಸ್.ಶಿವಪ್ರಕಾಶ, ಎಚ್.ಎಸ್.ವೆಂಕಟೇಶ್‌ಮೂರ್ತಿ, ಅರವಿಂದ ಮಾಲಗತ್ತಿ ಅವರುಗಳಲ್ಲಿ ಭಿನ್ನರಾದವರೇ ಮಾಲಗತ್ತಿ. ಇದನ್ನು ಎಚ್.ಎಸ್. ರಾಘವೇಂದ್ರ ರಾವ್ ಅವರು ಶಿವಪ್ರಕಾಶರ ಕಾವ್ಯದೊಂದಿಗೆ ಮಾಲಗತ್ತಿ ಅವರ ಕಾವ್ಯವನ್ನು ಹೋಲಿಸಿ "ಇವರು ಶಿವಪ್ರಕಾಶರ ಹಾಗೆ ಇತಿಹಾಸ, ಪುರಾಣ ಅನುಭಾವಗಳ ಗೊಡವೆಗೆ ಹೋಗದೆ ವರ್ತಮಾನದ ಅನುಸಂಧಾನ ಮಾಡುವುದರಿಂದ ಅವರಿಗಿಂತ ಭಿನ್ನರಾಗುತ್ತಾರೆ"[3] ಎಂದು ಸ್ಪಷ್ಟವಾಗಿ ಗುರುತಿಸಿದ್ದಾರೆ. ಶಿವಪ್ರಕಾಶ ಅವರು ತಮ್ಮ ಕಾವ್ಯವನ್ನು ಭೂತದ ಎಳೆಯಿಂದ ವರ್ತಮಾನದ ಅನುಸಂಧಾನವಿಲ್ಲದೆ ಭವಿಷ್ಯಕ್ಕೆ ಎಳೆದೊಯ್ಯುತ್ತಾರೆ. ಆದರೆ ಮಾಲಗತ್ತಿ ಅವರ ಕಾವ್ಯ ತ್ರಿಕಾಲವನ್ನು ಪ್ರತಿನಿಧಿಸಿಕೊಂಡು ಬೆಳೆಯುತ್ತದೆ. ಇಲ್ಲಿಯ ಕವಿ ತಮ್ಮ ಹಿರಿಯ ಮತ್ತು ಸಮಕಾಲೀನ ಕವಿಗಳ ಕಾವ್ಯ ಸತ್ವ, ತತ್ವ, ಸ್ವರೂಪಗಳನ್ನು ಪಡೆದು, ಪರಿಶೀಲನೆಗೊಳಪಡಿಸಿ ಕಡೆದ ಕಾವ್ಯ ಎಲ್ಲರಂತೆ ಕಾವ್ಯವಾಗದೆ ಮತ್ತೊಂದಾದದ್ದೇ ಇವರ ಕಾವ್ಯ ವಿಶೇಷ. ಇವರು ತಮ್ಮ ಕಾವ್ಯಕ್ಕೆ ಹೊಸ ವಸ್ತು, ವಿಷಯಗಳನ್ನಿಟ್ಟುಕೊಂಡು; ಭಾಷೆ, ಶೈಲಿ, ನಿರೂಪಣೆಗಳಲ್ಲಿ ಭಿನ್ನರಾಗುತ್ತಾರೆ. ಕೆಲವು ಕವನಗಳಲ್ಲಿ ಘೋಷಣೆಗಳಿದ್ದರೂ ಅವು ಅಲ್ಲಿಯೇ ನಿಲ್ಲದೆ ಎದ್ದು ಹೊರಡುತ್ತವೆ.

ಅಡಿಗರ ಗದ್ಯ ಕವಿತೆಗಳಂತೆ ಮಾಲಗತ್ತಿಯವರ ಕವಿತೆಯು ಹೆಚ್ಚು ಗದ್ಯ ಕವಿತೆಗಳಾಗಿವೆ. ಅಡಿಗರ ಕವನಗಳು ವಸ್ತುನಿಷ್ಟವಾಗಿದ್ದರಿಂದ ಅವರ ಭೂತ, ಭೂಮಿಗೀತ, ಚಂಡಮದ್ದಳೆ ಕಾವ್ಯಗಳು ಹೆಚ್ಚು ಚರ್ಚೆಗೊಳಪಟ್ಟಿವೆ. ಈ ವಸ್ತು ನಿಷ್ಠತೆಯಿಂದಾಗಿ ಸಮಷ್ಠಿ ಕಾವ್ಯಗಳು ಆಗಿ ಜನಮನ್ನಣೆಗಳಿಸಿ ಕವಿಯು ಜನಪ್ರಿಯರಾಗಿದ್ದಾರೆ. ಮತ್ತೊಂದೆಡೆ ಇದೇ ಕವಿಯ ವ್ಯಷ್ಠಿ ಕಾವ್ಯ ಖಾಸಗಿ ಆದಾಗ ಆ ಕಾವ್ಯ ಸೋಲುತ್ತದೆ. ಇಂತಹ ಕಾವ್ಯಗಳೊಡನೆ ಮಾಲಗತ್ತಿಯವರ ಕಾವ್ಯಗಳನ್ನಿಟ್ಟರೆ ಅವು ವ್ಯಷ್ಠಿ-ಸಮಷ್ಠಿ ಕಾವ್ಯಗಳಿಂದ ಸಾರ್ವತ್ರೀಕರಣಗೊಳ್ಳುವ ಕಾವ್ಯವಾಗುತ್ತವೆ ಉದಾ: ಚಟ್ಟ ತೊಟ್ಟಿಲ ಭೂಮಿ, ವಿದ್ಯುತ್ ತಂತಿಗಳು, ಕಡಲುಪ್ಪು ಕಾವ್ಯ, ಸಪ್ತಮಾಸಗಳ ತೇರು, ಕುಂಕುಮ ಕಾವ್ಯ, ಸಿಲಿಕಾನ್ ವ್ಯಾಲಿ, 'ಯವ್ವ' ಮುಂತಾದವು.

ಇವುಗಳ ಬಗ್ಗೆ ಈಗಾಗಲೇ ಸಿ.ಎನ್.ರಾಮಚಂದ್ರನ್, ಎಚ್.ಎಸ್.ರಾಘವೇಂದ್ರರಾವ್, ಕೆ.ಕೇಶವಶರ್ಮಾ, ರಾಜಪ್ಪ ದಳವಾಯಿ ಮುಂತಾದ ವಿಮರ್ಶಕರು ಚರ್ಚಿಸಿರುವುದನ್ನು ಗಮನದಲ್ಲಿ

ಇರಿಸಿಕೊಳ್ಳಲಾಗಿದೆ. ಇಂತಹ ಕಾವ್ಯಗಳ ವೈಶಿಷ್ಟ್ಯದಿಂದಾಗಿಯೇ ಅರವಿಂದ ಮಾಲಗತ್ತಿ ಮತ್ತು ಅವರ ಕಾವ್ಯ ಇವತ್ತಿನ ಆಧುನಿಕೋತ್ತರ ಕನ್ನಡ ಕಾವ್ಯ ಸಂದರ್ಭದಲ್ಲಿ ವಿಶೇಷವಾಗಿ ಗುರುತಿಸಲ್ಪಡುತ್ತಿದೆ.

ಇದುವರೆವಿಗೂ ತಿರಸ್ಕೃತವಾಗಿದ್ದ ಹಳಗನ್ನಡ ಕಾವ್ಯಪರಂಪರೆಯನ್ನು ಆಯ್ಕೆಮಾಡಿಕೊಂಡು 'ಶ್ರೀ ಚಂಡಾಲ ಸ್ವರ್ಗಾರೋಹಣಂ' ಕಾವ್ಯ ಬರೆದಿರುವುದೇ ಗಮನಾರ್ಹವಾದುದು. ಈ ಕೃತಿ ಪುರಾಣ ವಸ್ತುವನ್ನು ಆಯ್ಕೆ ಮಾಡಿಕೊಂಡು ಆಧುನಿಕೋತ್ತರ ತತ್ವ-ಚಿಂತನೆಗಳಿಂದ ಸಮತಾವಾದವನ್ನು ಬುದ್ಧನ ಜೀವತತ್ವ ಚಿಂತನೆಗಳೊಡನೆ ಮೇಳೈಸಿಕೊಂಡು ಕಟ್ಟಿದ ಕಾವ್ಯವಾದ್ದರಿಂದ ಕನ್ನಡ ಓದುಗ ವಿಮರ್ಶಕರನ್ನು ತುಂಬ ಆಕರ್ಷಿಸುತ್ತಿದೆ. ಇದು ಅಪರೂಪದ ಆಧುನಿಕ ಬೌದ್ಧ ಧರ್ಮ ಕಾವ್ಯವೆನ್ನಬಹುದಾದ ಮಟ್ಟಿಗೆ ಸೃಷ್ಟಿಯಾಗಿದೆ. ಇದನ್ನೆಲ್ಲ ನೋಡಿದರೆ ಮಾಲಗತ್ತಿ ಅವರ ಕಾವ್ಯ ಎಲ್ಲಿಗೂ ಒಗ್ಗದೆ, ಎಲ್ಲಿಯೂ ನಿಲ್ಲದೆ ಹರಿದು ತಿಳಿಯಾಗಿ, ಸಹೃದಯ ಓದುಗರ ಮನಸ್ಸನ್ನು ತಿಳಿಗೊಳಿಸಿಕೊಳ್ಳುವ ಅಪರೂಪದ ಹೃದಯವಂತ ಬರವಣಿಗೆಯಾಗಿದೆ. ಇದರ ಗುಣವೇ ಸಹಾನುಭೂತಿ. ಆದ್ದರಿಂದಲೇ ಎಸ್.ಎಸ್.ಶಂಕರ್ "ಮಾಲಗತ್ತಿ ಇತರರ ಮನಸ್ಸನ್ನು ಸಹಾನುಭೂತಿಯಿಂದ ನಿರೀಕ್ಷಿಸುತ್ತಾರೆ ಎಂಬುದೇ ಅವರ ಬರಹದ ದೊಡ್ಡ ಶಕ್ತಿ"[4] ಎನ್ನುವುದು. ಕವಿಯ ಈ ಶಕ್ತಿಯಿಂದ ಈ ದೇಶ, ಸಮಾಜದ ಎಲ್ಲ ಅಸಮಾನತೆ, ಶೋಷಣೆಗಳನ್ನು ತೊಡೆವ ಬುದ್ಧನ ಜೀವಸಿರಿ ಸಮಾಜವನ್ನು ಸಹಾನುಭೂತಿಯಿಂದಲೇ ಕಾವ್ಯ ಸಹೃದಯರು ನಿರೀಕ್ಷಿಸುವಂತೆ ಮಾಡಿದ್ದಾರೆ.

ಆಧುನಿಕೋತ್ತರ ಕಾವ್ಯಗಳಲ್ಲಿ 'ದಲಿತೇತರ ಕವಿ-ಕಾವ್ಯದ' ವೈರುಧ್ಯತೆ

ಅ. ಸಿಪಿಲೆ ಸತೀಶ್‌ರ ಕಾವ್ಯ ತೌಲನಿಕತೆ:

ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ, ಶೂದ್ರರು ಮತ್ತು ಶೂದ್ರಾತಿ ಶೂದ್ರರ (ಪಂಚಮರು) ಪರಿಸ್ಥಿತಿ ಸ್ವಾತಂತ್ರ್ಯ ಪೂರ್ವದಲ್ಲಿ ಅತ್ಯಂತ ಕೆಳಮಟ್ಟದಲ್ಲೇ ಇದ್ದಿತೆಂಬುದು ಇತಿಹಾಸವೇ ಹೇಳಿದೆ. ಆದರೆ, ವ್ಯವಸ್ಥೆಯ ನಾಲ್ಕನೇ ವರ್ಗದವರಾದ ಶೂದ್ರರಿಗೆ ದಲಿತರೊಂದಿಗೆ ಜೀವಿಸುವ; ಅವರ ಜೀವನ ವೈವಿಧ್ಯತೆಯನ್ನು ಬಲ್ಲವರು ಸ್ವಾತಂತ್ರ್ಯಾ ನಂತರದಲ್ಲಿ ಮೇಲ್ವರ್ಗದ ಸಾಲಿನಲ್ಲಿ ನಿಲ್ಲಲು ಬಯಸಿದ್ದು; ಜಾತೀಯತೆಯ ಆಚರಣೆಯಲ್ಲಿ ಬ್ರಾಹ್ಮಣರನ್ನು ಮೀರಿಸುವಂತಾದ್ದು ದುರದೃಷ್ಟಕರ. ಈ ಹಿನ್ನೆಲೆಯಲ್ಲಿ ಸಿಪಿಲೆಯವರು ಎರಡನೆ ಮೂರನೇ ತಲೆಮಾರಿನ ಶಿಕ್ಷಣ ಪಡೆದ ವರ್ಗದವರಾಗಿರುವುದರಿಂದ ದಲಿತರ ಬಗೆಗೆ ಅಷ್ಟಾಗಿ ನೋಡುವ ಅರ್ಥೈಸಿಕೊಳ್ಳುವ ಗೊಡವೆಗೆ ಹೋಗಿಲ್ಲ. ಮತ್ತು ಸಾಹಿತ್ಯ ವಿದ್ಯಾರ್ಥಿಗಳಾದ ಇವರಲ್ಲಿ ಸಹಜವಾಗಿ ಕುವೆಂಪು, ಬೇಂದ್ರ, ಶೇಕ್ಸ್‌ಪಿಯರ್ ಮತ್ತು ವರ್ಡ್ಸ್‌ವರ್ತ್ ಮುಂತಾದ ಪ್ರಕೃತಿ ಕವಿಗಳ ಪ್ರಭಾವದಿಂದಾಗಿ ಸಮಾಜವನ್ನು ತಳಹಂತದಿಂದ ನೋಡುವುದರಲ್ಲಿ ಹಿಂದೆ ಉಳಿದೇಬಿಡುತ್ತಾರೆ. ಹೀಗೆ ನೋಡಿದಾಗ ತಮ್ಮ ಓದಿನ ಮೂಸೆಯಲ್ಲಿ ದಕ್ಕಿದಷ್ಟು ಹೂರಣವನ್ನು ಕಾವ್ಯವಾಗಿಸುವ ಸಹಜ ಪ್ರೇಮ; ಕಾಮ; ಪ್ರೀತಿ; ವಿನೋದ; ಪ್ರಕೃತಿ ಎಂಬಂತಹ ಧ್ಯಾನದಲ್ಲಿ ಸಾಲುಸಾಲು ಕವಿತೆಗಳನ್ನು ಮಲ್ಲಿಗೆಯ ಕವಿ ಕೆ.ಎಸ್.

ನರಸಿಂಹಸ್ವಾಮಿ ಮೈಮೇಲೆ ಆಪೋಸನವಾದಂತೆ ಕವಿತೆಗಳನ್ನು ಕವನ ಸಂಕಲನಗಳನ್ನು ಓತಪ್ರೇತವಾಗಿ ಸುರಿಸಿಬಿಡುತ್ತಾರೆ. ಜೊತೆಗೆ ಮನೋವಿಜ್ಞಾನದ ಓದು ಇಷ್ಟವೂ ಅಗತ್ಯವೂ ಆಗಿದ್ದರಿಂದ ತಮ್ಮ ಎಲ್ಲಾ ಕವಿತೆಗಳಲು ಮನೋಮಯವಾಗಿಯೇ ಸಾಗುವಾಗ ದೈನಂದಿನ ನಿಜ ಬದುಕಿನ ನೆಲೆ ಮಸಕುಮಸಕಾಗಿ ಕಾವ್ಯ ತನ್ನ ಜೀವಂತಿಕೆಯನ್ನು ಸಹಜತೆಯನ್ನು ಕಳೆದುಕೊಳ್ಳುತ್ತಾ ಜನಮಾನಸದ ನಿಟ್ಟುಸಿರಿನ ಅನಾವರಣಕ್ಕೆ ಬದಲಾಗಿ ಕಾಮದ ಹಸಿವು; ವಿರಹದುರಿಯೇ ಕಾವ್ಯದ ಮುಖ್ಯ ಬೇರಾಗಿ ಹೋಗಿರುವುದು ವಾಸ್ತವವಾಗಿದೆ.

ಮನೋನೈರ್ಮಲ್ಯ–ಇಂದಿನ ತುರ್ತು ಅಗತ್ಯವಾಗಿದೆ. ದೇಹವನ್ನು ಸ್ವಚ್ಛಗೊಳಿಸಿಕೊಳ್ಳುವಂತೆ ಮನಸ್ಸಿನ ವಿಚಾರಗಳನ್ನೂ ಶುದ್ಧ ಮಾಡಿಕೊಳ್ಳಬೇಕು. ಮನಸ್ಸಿನಲ್ಲಿ ನಡೆಯುತ್ತಿರುವುದೆಲ್ಲ ನಿಜವೆಂದೇ ಭಾವಿಸಿ ಅದರಂತೆ ನಡೆಯುವವರೇ ಬಹಳ. ಆದರೆ ಮನಸ್ಸು ಬಹಳಷ್ಟು ಬಾರಿ ನಮ್ಮನ್ನು ಪ್ರಪಾತಕ್ಕೆ ನೂಕಲು ಹವಣಿಸುತ್ತಲೇ ಇರುತ್ತದೆ. ಆಗಷ್ಟೇ ಅದಕ್ಕೆ ನಿರಾಳ. ಹೀಗಾಗಿ ಬಹು ಎಚ್ಚರಿಕೆಯಿಂದ ಹೆಜ್ಜೆಹೆಜ್ಜೆಗೂ ನಮ್ಮ ಒಳಗನ್ನು ಗಮನಿಸಿಕೊಳ್ಳುವುದು ಒಳಿತು. ಅಲ್ಲಿನ ಆಲೋಚನೆ, ಚಿಂತನೆ, ಭಾವನೆ, ನಿರ್ಧಾರ ಎಲ್ಲವನ್ನೂ ಗಮನಿಸುತ್ತಿರಬೇಕು. ಯಾವ ಸಂದರ್ಭದಲ್ಲಿ ಮನಸ್ಸು ಹೇಗೆಲ್ಲಾ ಆಡುತ್ತದೆ, ಎನ್ನುವುದು ನೋಡುವುದೇ ಒಂದು ಮೋಜು! ಕಂಡದ್ದೆಲ್ಲ ಬೇಕೆನ್ನುವ ಚಪಲಕ್ಕೆ ಬಿದ್ದ ಮನಸ್ಸು, ಅವುಗಳನ್ನು ಪಡೆದುಕೊಳ್ಳುವ ಯತ್ನದಲ್ಲಿ ಯಾವಯಾವ ಪಟ್ಟುಗಳನ್ನು ಹಾಕುತ್ತದೆ ಎಂಬುದನ್ನು ಅರಿತುಕೊಂಡರೆ ನಮ್ಮನ್ನು ನಾವೇ ಅರಿತಂತೆ. ಉಳಿದಂತೆ ಬದುಕು ನಿರಾಳ. ಮನಸಿನ ಈ ಗುಟ್ಟುಗಳನ್ನು ಅರಿಯದವರು ಅದು ಆಡಿದಂತೆಯೇ ಆಡುತ್ತಿರುತ್ತಾರೆ. ತಮ್ಮ ಮತ್ತು ತಮ್ಮ ಮನಸ್ಸಿನ ನಡುವೆ ಗೆರೆಗಳಿರುವುದಿಲ್ಲ. ಎಲ್ಲವನ್ನೂ ಒಳಗೆಳೆದುಕೊಂಡು ಆಪೋಶನ ತೆಗೆದುಕೊಳ್ಳುವಲ್ಲೇ ಬದುಕಿನ ಸಾರ್ಥಕತೆಯಿದೆ ಎನ್ನುವುದು ಒಂದು ಭ್ರಮೆ. ಮನಸು ಭ್ರಮೆಯೆಂಬ ಸಿಹಿಯನ್ನು ಒಡ್ಡಿ ವ್ಯಕ್ತಿಯನ್ನು ಮಂಗನಂತೆ ಆಡಿಸುತ್ತದೆ.

'ಪ್ರೀತಿ ಬಿಟ್ಟು ಪ್ರಕೃತಿ ಬಾಳಲಾರದು ಕ್ಷಣ' ಎನ್ನುವ ಕವಿಯ ಭಾವದಲ್ಲಿ ಪ್ರೀತಿಯ ಮಹತ್ವ ಅಡಕವಾಗಿದೆ. ದುಡಿಮೆಯಿಲ್ಲದ ಸೋಮಾರಿತನವನ್ನು ಈ ಬದುಕು ವಿರೋಧಿಸುತ್ತದೆ. ದುಡಿಮೆಯೇ ಬಾಳಿನ ಮೂಲ ನಿಯಮ. ದುಡಿಮೆಯ ಫಲವು ಕಾಲಕ್ರಮದಲ್ಲಿ ತಂತಾನೇ ಪ್ರಾಪ್ತವಾಗುತ್ತದೆ. ದುಡಿಮೆಗೆ ತಕ್ಷಣವೇ ಫಲ ದೊರಕಬೇಕೆಂಬುದು ಆತುರದ ಚಿಂತನೆ. ತಕ್ಷಣಕ್ಕೆ 'ಫಲ' ಸಿಗದಿದ್ದರೂ, ಆ ಕ್ಷಣವೇ 'ಅನುಭವ' ದೊರಕುತ್ತದೆ. ಅದು ಬದುಕನ್ನು ಮುನ್ನಡೆಸಲು ಆಧಾರವಾಗುತ್ತದೆ, ಎಂದು ನೀತಿಯನ್ನು ಸಾರುವ ಕವಿ ಸಿಪಿಲೆ ಸತೀಶ್ ಅವರ ಬಹುತೇಕ ಕವಿತೆಗಳಲ್ಲಿ 'ಪ್ರೀತಿ'ಯು ಪ್ರಧಾನ ವಸ್ತುವಾಗಿ ಅಡಕವಾಗಿದೆ. ಪ್ರೀತಿಯಿಲ್ಲದೆ ಈ ಜಗತ್ತಿನಲ್ಲಿ ಏನೂ ಘಟಿಸುವುದಿಲ್ಲ. ಪ್ರಕೃತಿಯು ಈ ಜಗತ್ತಿನೊಂದಿಗೆ 'ಪ್ರೀತಿ'ಯ ಒಪ್ಪಂದ ಮಾಡಿಕೊಂಡಿದೆ. ಹಾಗಾಗಿಯೇ, ಪ್ರಕೃತಿಯ ಪ್ರತಿಯೊಂದು ಸ್ಪಂದನದಲ್ಲೂ ಪ್ರೀತಿಯ ಸೆಲೆಯಿದೆ. ಇವರ 'ಒಪ್ಪಂದ' ಕವಿತೆಯ ಸಾಲುಗಳಲ್ಲಿ 'ನೆಲವೀಗ ಮುಡಿದು ಹೂಗಳ ಹೊಸ ಪರಿಯ ವೈಭೋಗ ಪ್ರೀತಿ ಸಂತೈಕೆಯಲ್ಲಿ ತಲೆ ನೇವರಿಸಿ ಪುಳಕ ಹಡೆದದ್ದು ಕಾಣುತಿದೆ ಮುಗಿಲಲಿ ಆಡುವ ಹೂಗಳೀಗ ಭುವಿಯ ಸ್ಪರ್ಶಕೆ ಮುಗುಳುನಗೆಯಲಿ ತೇಲುತ್ತಿವೆ' ಎನ್ನುವ ಕವಿಮನ ಸ್ವಪ್ನದ ಅರೆಪ್ರಜ್ಞಾವಸ್ಥೆಯಲ್ಲಿರುವ ಪ್ರೇಮಿಗಳಿಗೆ ಕಚಗುಳಿಯಿಡುವುದಂತೂ ಸತ್ಯ.

ಆ. ಬಂಜಗೆರೆಯವರ ಕಾವ್ಯದ ವೈರುಧ್ಯತೆ:

ಬಂಜಗೆರೆಯವರ ಕಾವ್ಯದ ಮಿತಿಗಳನ್ನು ಹೀಗೆ ಗುರುತಿಸುವಾಗ ಮರೆಯುವ ಬಹು ಮುಖ್ಯವಾದ ಅಂಶವೆಂದರೆ, ಓದುಗ ಅಥವಾ ವಿಮರ್ಶಕ ತನ್ನ ವರ್ಗನೆಲೆಯನ್ನು ಮರೆತು ಅಥವಾ ಬಚ್ಚಿಟ್ಟು ಆಳುವ ವರ್ಗದ ಮೌಲ್ಯ ಪ್ರಜ್ಞೆಯಿಂದ ಹುಟ್ಟಿದ ಕಾವ್ಯಮೀಮಾಂಸೆಗಳ ನೆಲೆಯಿಂದ ಆಕ್ಷೇಪಗಳನ್ನು ಎತ್ತುವುದು. ಶೋಷಣೆ ಮತ್ತು ಅಸಮಾನತೆಗಳನ್ನು ಸರಿ ಎಂದು ಪ್ರತಿಪಾದಿಸುವ ಕಾವ್ಯಮೀಮಾಂಸೆ ಸಾಮಾಜಿಕ ವಿಷಮತೆಗಳನ್ನು ನೈಸರ್ಗಿಕ ಮತ್ತು ಮನುಷ್ಯ ಸಹಜ ಎಂಬಂತೆ ಬಿಂಬಿಸುತ್ತವೆ. ಕವನ ಕಟ್ಟುವಿಕೆ, ಕಾವ್ಯ ಶೈಲಿ, ಪ್ರತಿಮಾ ವಿಧಾನ, ಕಲಾವಂತಿಕೆ, ಬದ್ಧತೆಯ ಪ್ರಶ್ನೆ, ನ್ಯಾಯ ಅಹಿಂಸೆಗಳ ಪರಿಕಲ್ಪನೆಗಳನ್ನು ಮತ್ತೆಮತ್ತೆ ಪ್ರತಿಪಾದಿಸುವ ಬೂರ್ಜ್ವಾ ಲೇಖಕರು ಹಾಗೂ ವಿಮರ್ಶಕರು ಆಳುವ ವರ್ಗದ ಕಾವ್ಯ ಮೀಮಾಂಸೆ ಮತ್ತು ಮೌಲ್ಯ ಬದ್ಧತೆಯ ಚೌಕಟ್ಟಿಗೊಳಪಡದ ಕಾವ್ಯದಲ್ಲಿ ಹುಳುಕುಗಳನ್ನು ಎತ್ತಿ ತೋರಿಸುವುದು ಸುಲಭ. ಬಂಜಗೆರೆಯವರ ಕಾವ್ಯದ ಮಿತಿಗಳನ್ನು ಗುರುತಿಸುವಾಗ ಈ ಎಚ್ಚರ ಅತ್ಯಗತ್ಯ. ಬಂಜಗೆರೆ ಜಯಪ್ರಕಾಶರ ಕಾವ್ಯದ ತಾತ್ವಿಕತೆಯನ್ನು ಗುರುತಿಸುವಾಗ ಪ್ಯಾಬ್ಲೊನೆರೂಡನ ಮಾತನ್ನು ಇಲ್ಲಿ ನೆನೆಯಬೇಕು.

'ಕವಿಯೊಬ್ಬ ಜೀವಿಸಿದ್ದು ಕಡಿಮೆಯೇ ಆಗಿದ್ದರೂ ಸೆರೆ ಹಿಡಿದಿದ್ದು ಅಗಾಧವಾಗಿರುತ್ತದೆ. ಅವೆಲ್ಲವನ್ನೂ ಆತ ಇರರಿಗೆ ವಿವರವಾಗಿ, ವಿಶದವಾಗಿ ವಿಶೇಷ ಎಚ್ಚರಿಕೆಯಿಂದ ಪುನರ್ ಸೃಷ್ಟಿಸುತ್ತಾನೆ. ಕವಿ ಸೃಷ್ಟಿಸುವುದು ತನ್ನ ಕಾಲದ ಉರಿಗಾವು ಮತ್ತು ತಮಂದದಿಂದ ತಲ್ಲಣಗೊಂಡ ಭೂತಕಾಲದ ಮೊಗಸಾಲೆಯನ್ನು. ಪ್ರಾಯಶಃ ನಾನು ನನ್ನೊಳಗಷ್ಟೇ ಬದುಕಲಿಲ್ಲ, ಇತರರ ಬದುಕನ್ನೂ ಬದುಕಿದೆ. ಹೀಗಾಗಿ ನನ್ನ ಬದುಕೆಂದರೆ ಅಸಂಖ್ಯ ಬದುಕುಗಳ ಒಟ್ಟು ಮೊತ್ತ. ಕವಿಯೊಬ್ಬನ ಬದುಕುಗಳು ಎನ್ನಬಹುದು'. ಪಾಬ್ಲೋ ನೆರೂಡನ ಈ ಕಾವ್ಯ ತಾತ್ವಿಕತೆಗೆ ನಿಲುಕುವಂತೆ ಇತರರ ಬದುಕನ್ನು ತನ್ನ ಕಾವ್ಯ ಮತ್ತು ಹೋರಾಟದುದ್ದಕ್ಕೂ ಬದುಕಿರುವುದರಿಂದಲೇ ಬಂಜಗೆರೆಯರ ಕಾವ್ಯ ನಮ್ಮ ಕಾಲಕ್ಕೆ ಬಹು ಮುಖ್ಯವಾಗುತ್ತದೆ.

'...ಚಂದ್ರಮನಿಗೆ ನೇಣು ಬಿದ್ದಿದೆ
ಕವಿಯೊಬ್ಬನ ಕನಸು
ತೊಟ್ಟಿಂದ ಒಂದೊಂದೇ ಬಿಡಿಸು।
ಮಿಂದುಕೋ ವಿಶ್ವಾಗ್ನಿಯ ಭಾಂಡಲೆಯಲ್ಲಿ
ಉಟ್ಟುಕೋ ಅನಾಥ ಆತ್ಮ
ಗಳ ಮಡಿಬಟ್ಟೆ'[6]

ಎನ್ನುವ 'ಪ್ರಾರ್ಥನೆ'ಯ ಈ ಪದ್ಯ, ಜಯಪ್ರಕಾಶರ ಕಾವ್ಯದ ನೆಲೆಯನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ಗೋಪಾಲಕೃಷ್ಣ ಅಡಿಗರ ಪ್ರಾತಿನಿಧಿಕ 'ಪ್ರಾರ್ಥನೆ' ಕವಿತೆಯನ್ನು ಇಲ್ಲಿ ನೆನೆಯಬೇಕು. ಇವೆರಡರ ಸಾದೃಶ್ಯ, ವೈದೃಶ್ಯಗಳನ್ನು ಗಮನಿಸಬೇಕು. ನವ್ಯದ ತಾತ್ವಿಕತೆಯನ್ನು ಹೇಳುವುದರಲ್ಲಿಯೂ, ನವೋದಯ ಕಾವ್ಯಕ್ಕೆ ಪ್ರತಿಕ್ರಿಯೆ ರೂಪವಾಗಿ ಒಂದು ಕಾಲಘಟ್ಟದ ಆಲೋಚನಾಕ್ರಮ ಅಡಿಗರ

ಪ್ರಾರ್ಥನೆ ಕವಿತೆಯಲ್ಲಿದೆ. ಜಯಪ್ರಕಾಶರ ಪ್ರಾರ್ಥನೆ ತನ್ನ ಕಾಲದ ಹಿಂಸಾತ್ಮಕ ಒತ್ತಡದಲ್ಲಿ ಹುಟ್ಟಿಕೊಂಡಿದೆ. ಹೋರಾಟ ಹಿನ್ನೆಲೆಯ ಕವಿ ಈ ಕವಿತೆಯಲ್ಲಿ ಕಾರಾಗೃಹ, ಅಧಿಕಾರ ಕೇಂದ್ರಿತ ಪರಿಭಾಷೆಯಲ್ಲಿ ಮನುಷ್ಯನ ಮೂಲಭೂತ ಅವಶ್ಯಕತೆಯಿಂದ ವಂಚಿತವಾಗಿ ತುಂಬಿ ಹೋಗಿರುವ ವರ್ತಮಾನವನ್ನು ಕಾಣಿಸುತ್ತಾರೆ.

<u>ಕೊನೆ ಟಿಪ್ಪಣಿ</u>

1. ಸೋಸಲೆ ಸಿದ್ಧರಾಜು: (ಸಂಪಾದಕರು) 'ಬಹುಜನ ಪದಗಳು' ಕ.ಸಂ. (ಪ್ರಭುದ್ಧ ಪ್ರಕಾಶನ: 2012)
   'ಭೀಮನಂತಾಗುವ ಆಸೆ' ಪು. 31.
2. ಹನಸೋಗೆ ಸೋಮಶೇಖರ್: 'ಭೀಮ ಪಲ್ಲವಿ' (ಸ್ವಯಂ ಪ್ರಕಾಶನ: 2002) ಮುನ್ನುಡಿ
3. ಕುಶಾಲ: 'ಅರವಿಂದ ಮಾಲಗತ್ತಿ ಅವರ ಕಾವ್ಯಾನು ಸಂಧಾನ' (ಈಶ್ವರಿ ಪ್ರಕಾಶನ: 2005) ಪು. 70.
4. ಅದೇ: ಪು. 72.
5. ಸಿಪಿಲೆ ಸತೀಶ್: 'ಕೊಂಬೆಕೊಂಬೆಯೂ ಚಿಗುರಿ' ಕ.ಸಂ. (ಅಂಕನಹಳ್ಳಿ ಪ್ರಕಾಶನ: 2012) (ಒಪ್ಪಂದ)
   ಪು. 153.
6. ಬಂಜಗೆರೆ ಜಯಪ್ರಕಾಶ: 'ಮಹೂವಾ' ಕ.ಸಂ. (ಚರ ಪ್ರಕಾಶನ, ಹಾರೋಹಳ್ಳಿ, 1992) (ಪ್ರಾರ್ಥನೆ)
   ಪು. 46.

ಅಧ್ಯಾಯ: 5

ಸಾರ ರೂಪ

ಆಧುನಿಕೋತ್ತರ ಕನ್ನಡ ಕವಿಗಳ ಸಮಾನತಾ ಕಾಳಜಿಯ ವೇಗಕ್ಕೆ ಕಾರಣ, ಅಂದಿನಿಂದ ನಡೆಸಿದ ಸಂಘರ್ಷ, ಸಂಘಟನೆಗಳ ತಪಸ್ಸು, ತಾಳ್ಮೆವಹಿಸಿದ ಕಾಲ, ಸಮಸ್ಯೆಯ ಅರಿವು, ಪಟ್ಟಭದ್ರರು ತಡೆಸಿದ ತಂತ್ರಗಾರಿಕೆ. ಶಿಕ್ಷಣದಿಂದ ದೂರವಿರಿಸಿದ್ದ ವ್ಯವಸ್ಥೆ, ನೀತಿ ರಹಿತ ಪೌರೋಹಿತ್ಯ–ಅಸಮಾನತೆಯನ್ನೇ ಹೊದ್ದು ಮಲಗಿದ್ದ ಧರ್ಮ. ಇವೆಲ್ಲವನ್ನೂ ಕೀರಲು ಧ್ವನಿಯಿಂದ ಸಮಾನತೆಯನ್ನು ಬೇಡುವ ಪರಿಯನ್ನು ವಿರೋಧಿಸುವ ಆಧುನಿಕೋತ್ತರ ಮನಸುಗಳು ಶತಮಾನಗಳ ಸಮಸ್ಯೆಯನ್ನು ಇನ್ನೂ ಅದೆಷ್ಟೋ ಅಮಾನವೀಯ ಗೋಸುಂಬೆತನದ ಕರ್ಮಾಚರಣೆಗಳು ಇಪ್ಪತ್ತೊಂದನೆ ಶತಮಾನದ ಯುವ ಮನಸುಗಳಲ್ಲಿ ಉಂಟಾದ ವಿಷಾಧಕ್ಕೆ ಪೂರಕವಾಗಿ ಮೂಡಿದ ಅಂಬೇಡ್ಕರ್ ವಾದದ ಪ್ರಭಲ ಅಸ್ತ್ರ ಅಕ್ಷರ ಮಾಧ್ಯಮ.

ಈ ದೃಷ್ಟಿಯಿಂದ 2000ದಿಂದ 2014ರ ಕಾಲಘಟ್ಟದಲ್ಲಿ ಇದುವರೆವಿಗೂ ಬರಹದ ಹಾದಿಯಲ್ಲಿ ಹೋರಾಟದ ಕೃಷಿ ಮಾಡುತ್ತಿರುವವರನ್ನು ಅಧ್ಯಯನದ ಅಡಿಯಲ್ಲಿ ತಂದು ದಲಿತ ಮತ್ತು ಬಂಡಾಯ ಸಾಹಿತ್ಯ ಕಾಲಘಟ್ಟದ ನಂತರದ ಹೊಸ ಆಲೋಚನೆ; ಹೊಸ ಹುಡುಕಾಟದಲ್ಲಿರುವ ಯುವ ಬರಹಗಾರರನ್ನು ಮತ್ತು ಇವರನ್ನು ಬೆಂಬಲಿಸುತ್ತಿರುವ ನಾಡಿನ ಹಿರಿಯ ದಲಿತ ಸಾಹಿತಿಗಳು ಆಧುನಿಕೋತ್ತರ ಕಾಲಘಟ್ಟದ ಪರಿವರ್ತನಾ ಸಾಹಿತ್ಯವನ್ನು ಹೊಸದಿಕ್ಕಿನೆಡೆಗೆ ಕೊಂಡೊಯ್ಯುವ ಎಲ್ಲಾ ಲಕ್ಷಣ; ಭರವಸೆ ಕಂಡುಬಂದಿದೆ.

'ಅಕ್ಷರಕ್ಷರದ ಗೆರೆಗಳ ಮೇಲೂ ಮಂಟೇಸ್ವಾಮಿ ಮಾದಪ್ಪ ಜುಂಜಪ್ಪ ದೊಡ್ಡಮ್ಮ ಸಂಕೆಣ್ಣೆ ಕಾಟಮಲ್ಲರು ಕಂಡಾಯ ಹಿಡಿದು ನಲಿಯುತ್ತಿದ್ದಾರೆ ಎನ್ನುವ ಸುರೇಶ್ ಗೌತಮ್‌ರವರ ಸಾಲು ಜಾತಿ ಮೀರಿದ ಪ್ರೇಮ: ಜಾತಿಯ ಕಾರಣದಿಂದಾಗಿ ಮುರಿದುಬಿದ್ದ ಪ್ರೀತಿ; ಊರು–ಕೇರಿಯ ಮೇಲು–ಕೀಳಿನ ನಡುವೆ ಬೆಳೆದ ಬಾಲ್ಯ; ಸಂವಿಧಾನದ ಆಶಯ, ಸಾಮಾಜಿಕ ನ್ಯಾಯ ನಾಶವಾಗುತ್ತಿರುವುದರ ಬಗೆಗಿನ ದುಗುಡಗಳನ್ನು ಕಾವ್ಯದ ಮೂಲಕ ರಕ್ತರಹಿತವಾಗಿ ಬಯಲಾಗಿಸಿದೆ. ಸಮಸಮಾಜದ ಕನಸು; ಮನುಷ್ಯ ವಿರೋಧಿ ನಿಲುವುಗಳ ಬಗೆಗೆ ನೈತಿಕ ಬಂಡಾಯ; ಮಹಿಳಾ ಸಂವೇದನೆ; ಮೌಢ್ಯ ಕಂದಾಚಾರದ ಸೋಗಲಾಡಿತನ; ಮಾನವೀಯತೆಗಾಗಿ ಪ್ರಾಮಾಣಿಕವಾದ ಹಂಬಲ ಇಲ್ಲಿನ ಬಹುತೇಕ ಕವಿತೆಗಳಲ್ಲಿ ರೂಪುಗೊಂಡಿದೆ. ಸಾಮಾಜಿಕ ಬದ್ಧತೆಯೊಟ್ಟಿಗೆ ವೈಚಾರಿಕವಾಗಿ ಚಿಂತಿಸುವ ಕವಿಗಳಾದ ಸುರೇಶ್ ಗೌತಮ್, ಲಕ್ಕೂರು ಆನಂದ, ಹನಸೋಗೆ ಸೋಮಶೇಖರ್ ಮತ್ತು ಅರವಿಂದ ಮಾಲಗತ್ತಿ ಪ್ರಸ್ತುತ ತಮ್ಮ ಎರಡನೇ ಕವನ ಸಂಕಲನ ಕೃತಿಯ ಮೂಲಕವೂ ತಮ್ಮ ಸಾಮಾಜಿಕ ಕಳಕಳಿಯ ತೀವ್ರತೆಯನ್ನು ಹೆಚ್ಚಿಸಿದಾರೆ. ಭಾರತೀಯ ಪರಂಪರೆಯನ್ನು ತಮ್ಮ ಕಾವ್ಯದ ಮೂಲಕ ನೆನಪಿಸಲು ಹೊರಟಿರುವ ಇವರಿಂದ ಅಂಬೇಡ್ಕರ್ ಪ್ರಣೀತ ಪಾರಂಪರಿಕ ಪ್ರಜ್ಞೆಯ ಮೂಲಕ ಇನ್ನಷ್ಟು ಗಂಭೀರವಾದ, ವೈಚಾರಿಕ ಪರಂಪರೆಯುಳ್ಳ ಕನ್ನಡ ಸಾಹಿತ್ಯಾಧ್ಯಯನದ ಮತ್ತಷ್ಟು ಮೌಲಿಕ ಬರಹಗಳನ್ನು ಇವರಿಂದ ನಿರೀಕ್ಷಿಸಬಹುದು ಎಂದೆನಿಸಿದ್ದಾರೆ. ಪುರಾಣದ ಶಂಭೂಕನ ಕೊಲೆಯ ಕಾರಣಗಳನ್ನು ಹುಡುಕ ಹೊರಟ ನಮ್ಮ

ಆಧುನಿಕೋತ್ತರ ಕವಿ ಸುರೇಶ್ ಗೌತಮ್ ಭಾರತೀಯ ಚರಿತ್ರೆ ಪುರಾಣಗಳನ್ನು ಪುನರ್ ವ್ಯಾಖ್ಯಾನ ಮತ್ತು ವಿಮರ್ಶೆಗೆ ಒಳಪಡಿಸಬೇಕೆಂದು ಹೇಳುತ್ತಲೇ, ಆ ಮೂಲಕ ನಿಜದ ದ್ರಾವಿಡ ಚರಿತ್ರೆಯನ್ನು ಅರಿಯಬೇಕೆಂದು ಒತ್ತಾಯಿಸುತ್ತಾರೆ. 'ಈ ಭೂಮಿಯನ್ನು ಹೆತ್ತವರು ನನ್ನ ರಕ್ತದ ಆದಿಜನ' ಎಂದೇಳುವ ಮೂಲಕ ಆದಿಮ ಸಂಸ್ಕೃತಿಯ ಪುರಾತನ ಪರಂಪರೆಯ ಹಳಮೆಯನ್ನು ಪ್ರತಿಪಾದಿಸುತ್ತಾರೆ. ಊರು-ಕೇರಿಯ ಜಾತಿ ಅನುಭವಗಳನ್ನು ದಾಖಲಿಸುತ್ತಲೇ ಓದುಗರ 'ಅಸ್ಪೃಶ್ಯರ ಆತ್ಮಕಥನ'ಗಳಂತೆ ಭಾಸವಾಗುತ್ತವೆ. ಧಾರ್ಮಿಕ ಆರ್ಥಿಕ ಅಸಮಾನತೆಯನ್ನು ತೊಲಗಿಸಿ ಸಾಮಾಜಿಕ ಸಮಾನತೆಯನ್ನು ತರುವ ಮನಸ್ಥಿತಿಯನ್ನು ಮೈಗೂಡಿಸಿಕೊಂಡಿರುವ ಸಿದ್ಧಾಂತದ ಕಡೆ ಕವಿ ಕೊಟ್ಟವನು ಸಮಾಜವನ್ನು ಮುನ್ನಡೆಸಲು ಬೇಕಾದ ಹೆದ್ದಾರಿಯನ್ನು ತೋರುವ 'ಸಾಧ್ಯತೆ' ಕವಿಗೂ ಸಾಧ್ಯವೆಂಬುದನ್ನು ಕವಿಯ ಆಶಯದಿಂದ ಖಚಿತಪಡಿಸಿಕೊಳ್ಳಬಹುದು.

"ಯಾವ ಸಮುದಾಯವು ತನ್ನ ಸಂಸ್ಕೃತಿ, ಪರಂಪರೆ, ಚರಿತ್ರೆಯನ್ನು ಮರೆಯುತ್ತದೆಯೋ ಆ ಸಮುದಾಯ ತನ್ನೆಲ್ಲಾ ಹಕ್ಕು-ಅಧಿಕಾರಗಳನ್ನು ಕಳೆದುಕೊಳ್ಳುತ್ತದೆ"ಎಂದು ಹೇಳಿದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತುಗಳನ್ನು ಈ ಕವಿತೆಯ ಸಾಲುಗಳು ನೆನಪು ಮಾಡುತ್ತವೆ. ಶೋಷಿತರು ಸ್ವಾಭಿಮಾನಿಗಳಾಗಬೇಕು. ಈ ದೇಶವನ್ನು ಆಳುವ ಸಮುದಾಯವಾಗಬೇಕೆಂಬ ಅಂಬೇಡ್ಕರ್ ಅವರ ಬಹುದೊಡ್ಡ ಕನಸನ್ನು ಶೋಷಿತರ, ಓದುಗರ ಮುಂದಿಡುವ ಕವಿತೆ, ಆ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ನಿಮ್ಮ ಪ್ರಾಮಾಣಿಕ ಪ್ರಯತ್ನವೇನು? ಎಂದು ಪ್ರಶ್ನಿಸುತ್ತದೆ. ಜೊತೆಗೆ, ಸಂವಿಧಾನದ ಆಶಯಗಳ ಪ್ರಾಮಾಣಿಕ ಅನುಷ್ಠಾನದಿಂದ ಮಾತ್ರ ಇದು ಸಾಧ್ಯ ಎಂಬ ನಿಲುವನ್ನು ಸಂವಿಧಾನ ರಚನೆಯಾಗಿ ಅರ್ಧ ಶತಮಾನ ಕಳೆದರೂ ಅದರ ಬಗೆಗೆ ದಮನಿತರಲ್ಲಿ ವಿಶ್ವಾಸ ನಂಬಿಕೆ ಕಡಿಮೆಯಾಗಿಲ್ಲ. ಫುಲೆ, ಪೆರಿಯಾರ್, ಅಂಬೇಡ್ಕರ್ ಹೋರಾಟ ಹಾಗೂ ಚಿಂತನೆಗಳನ್ನು ಏಕೀಭವಿಸಿ ನೋಡುವ ಕವಿ ಆ ಮೂಲಕ ಬುದ್ಧ ಹೇಳಿದ ಪ್ರಕೃತಿ ಧರ್ಮವಾದ 'ಪ್ರಜ್ಞೆ-ಕರುಣ-ಶೀಲ'ದ ತಾತ್ವಿಕತೆಯನ್ನು ವಿಶ್ಲೇಷಿಸಿದ್ದಾರೆ. ಅಂತಃಕರಣವಿಲ್ಲದ ಸಮಾಜವಾಗಲಿ, ವ್ಯಕ್ತಿತ್ವವಾಗಲಿ ಮಾನವೀಯವಾಗಲು ಸಾಧ್ಯವಿಲ್ಲ ಎಂಬುದನ್ನು ಪ್ರತಿಪಾಧಿಸುವ ಇಲ್ಲಿನ ಕವಿತೆಗಳು ಮನುಷ್ಯತ್ವಕ್ಕಾಗಿ ಹಪಾಹಪಿಸುತ್ತವೆ. ಸಮಾಜದ ಸಂಕಟಗಳು ಅರ್ಥವಾಗಲು ಕರುಳಿನ ಪರಿಭಾಷೆ ಅರ್ಥವಾಗಬೇಕು ಎಂದು ಹೇಳುವ ಆಧುನಿಕೋತ್ತರ ದಲಿತ ಕವಿಗಳು ಇಂದು ಪ್ರಸ್ತುತವಾಗುತ್ತಾರೆ.

ಸಂವಿಧಾನದ ಲಾಭವನ್ನು ಕಣ್ಣಾರೆ ಕಂಡು; ಮನಸಾರೆ ಅನುಭವಿಸಿದ ಹೊಸ ತಲೆಮಾರಿನ ಯುವಕರು ಕೆಲವೇ ದಶಕದಲ್ಲಿ ತಮ್ಮ ಜವಾಬ್ದಾರಿಯನ್ನು ಮರೆತರು. ಅಂಬೇಡ್ಕರ್ ಮತ್ತು ಬುದ್ಧನ ತತ್ವವನ್ನು ಹಿಂದೂ ಧರ್ಮದ ಚೌಕಟ್ಟಿನಲ್ಲಿ ವ್ಯಾಖ್ಯಾಸಿದ ಬ್ರಾಹ್ಮಣರ ವಾದವನ್ನು ಕಣ್ಣುಮುಚ್ಚಿಕೊಂಡು ಒಪ್ಪಿಕೊಂಡರು. ಅಂಬೇಡ್ಕರರನ್ನು ಭಾವನಾತ್ಮಕವಾಗಿ ಆರಾಧಿಸುವ, ಭೌತಿಕವಾಗಿ ವಿಜೃಂಭಿಸುವುದನ್ನು ಕಲಿಸಿ ಕೋಟ್ಯಾಂತರ ಭಾರತೀಯರ ಮುಗ್ಧತೆಯನ್ನು ಬಂಡವಾಳ ಮಾಡಿಕೊಂಡ ಮೂಲಭೂತವಾದಿಗಳು, ಮೊದಲ ತಲೆಮಾರಿನ ಶಿಕ್ಷಿತರನ್ನು ಮೈಮರೆಯುವಂತೆ ಮಾಡಿದರು. ಸಂವಿಧಾನದ ಪ್ರೇಮದಿಂದ ಮೊದಲ ಸಾಲಿನಲ್ಲಿ ಕುಳಿತು ಕಲಿತ ದಲಿತ ವಿದ್ಯಾರ್ಥಿಗಳು ಮುಂದೆ

ಉದ್ಯೋಗಸ್ಥರು, ಅಧಿಕಾರಿಗಳು, ಜನಪ್ರತಿನಿಧಿಗಳಾಗಿ ತಮ್ಮ ಜವಾಬ್ದಾರಿಯನ್ನು ಮರೆತು ನವಬ್ರಾಹ್ಮಣರಾದರು.

ಈ ಎಲ್ಲವನ್ನು ಗಮನಿಸಿದ ಆಧುನಿಕೋತ್ತರ ದಮನಿತ ಯುವ ಮನಸುಗಳು ಸ್ವಾತಂತ್ರ್ಯ ಬಂದು ಅರ್ಧ ಶತಮಾನವೇ ಕಳೆದರೂ ಯಥಾಸ್ಥಿತಿಯಲ್ಲಿಯೇ ಮುಂದುವರಿದು ಮತ್ತಷ್ಟು ಅಸಮಾನತೆಯ ವಾತಾವರಣ ಭದ್ರವಾಗುತ್ತಿರುವ ಮನುವಾದವನ್ನು ಬುಡಸಮೇತ ಕೀಳುವ ಮನಸುಮಾಡಿದರು. ಆ ಮೂಲಕ ಬುದ್ಧನ ಜೀವತತ್ವದ ಸಂಪ್ರೀತಿಯನ್ನು ನೆಲೆಗೊಳಿಸಲು ಅಕ್ಷರ ಸಮರದ ನೆಪದಲ್ಲಿ ಹುಟ್ಟಿದುದೇ "ಆಧುನಿಕೋತ್ತರ ಕನ್ನಡ ಕಾವ್ಯ". ಇಲ್ಲಿ ಶತಮಾನಗಳ ಶೋಷಣೆಯ ಅರಿವಿದೆ. ಆಧುನಿಕ-ಜಾಗತಿಕ ಸಮಸ್ಯೆಗಳಿಗೆ ಅಗತ್ಯ ಪರಿಹಾರವನ್ನೂ ತಮ್ಮವರಿಗೆ ತಾವೇ ದೃಢವಾಗಿ ನಿರ್ಧರಿಸಿಕೊಳ್ಳುವ ಸಾಮರ್ಥ್ಯವನ್ನು ಆಧುನಿಕೋತ್ತರ ಕನ್ನಡ ಕಾವ್ಯ ಘೋಷಿಸಿಕೊಳ್ಳುತ್ತಿರವುದು ವಿಶೇಷ. ಸಮಾನತೆಯ ಕನಸು ಕಾಣುವ, ಪ್ರಜಾಸತ್ತಾತ್ಮಕ ಚಿಂತನೆಯ ಸಾಕಾರವಾದ ಶೋಷಿತ ಸಮುದಾಯಗಳ ನಿಟ್ಟುಸಿರನ್ನು ಅಕ್ಷರವಾಗಿಸಿ ಕಾವ್ಯ ಕಟ್ಟುತ್ತಿರುವ ಕವಿಗಳು, ಕಂಬಾಲಪಲ್ಲಿಯ ಜಾತಿಯ ಬೆಂಕಿಯಲ್ಲಿ ಸುಟ್ಟು ಕರಕಲಾದವರ, ಚಂದ್ರಗುತ್ತಿಯಲ್ಲಿ ಬೆತ್ತಲಾದವರ, ಹಂಗರಹಳ್ಳಿಯಲ್ಲಿ ಸೆರೆಯಾದ ಜೀತದಾಳುಗಳ ಬಗೆಗಿನ ನೋವು ಇಲ್ಲಿ ಕಾವ್ಯವಾಗಿ ನ್ಯಾಯವನ್ನು ಕೇಳುತ್ತದೆ. ಮನುಷ್ಯತ್ವ ಕಳೆದುಕೊಂಡವರ ನಡುವೆ ಬೆಂಡಿಗೇರಿಯಲ್ಲಿ ಮಲ ತಿಂದವರ, ಬುದ್ಧನ ಅನುಯಾಯಿಗಳ ಬೆತ್ತಲಾಗಿಸಿ ಅತ್ಯಾಚಾರವೆಸಗಿ ಕೊಲೆಗೈದ ಕ್ರೂರಿ ಖೈರ್ಲಾಂಜಿಗಳ, ಆದಿವಾಸಿಗಳ, ಜಗತ್ತಿನ ಎಲ್ಲಾ ದಿಕ್ಕಿನ ದಮನಿತ ಎರಡನೇ ದರ್ಜೆಯವರಾಗಿ ಬದುಕಬೇಕಾದ ಮಹಿಳೆಯರ, ಸಾಗರದ ಅಲೆಗಳ ರಭಸದಷ್ಟಷ್ಟು ನಿಟ್ಟುಸಿರಿನ ಕುರಿತು ಯುವ ಜನರಿಗೆ ಎಚ್ಚರದ ಘಂಟೆಯನ್ನು ಮೊಳಗಿಸಿದೆ. ಹೀಗೆ ಬುದ್ಧನ ಅನಂತ ಜೀವತತ್ವದ ನೆಲೆಯಲ್ಲಿ ಆಧುನಿಕೋತ್ತರ ಕನ್ನಡ ದಲಿತ ಕವಿಗಳು ಕಾವ್ಯದ ಮೂಲಕ ಬಯಲು ಮಾಡಿದ್ದಾರೆ.

ಭಾರತೀಯ ಜಾತಿ ಪ್ರಣೀತ ಸಾಮಾಜಿಕ ಕ್ರೌರ್ಯವನ್ನು ಓದುಗರೆದುರು ತೆರೆದಿಡುತ್ತಾ. ಬ್ರಹ್ಮನ ಅಂಗಾಂಗಗಳಿಗೆ ಒಂದೊಂದು ಗುಪ್ತಾಂಗ ಕಟ್ಟಿ, ಅಲ್ಲೇ ಹುಟ್ಟಿದ ನಾವು ಎಲ್ಲರಿಗಿಂತ ದೊಡ್ಡವರು ಉಳಿದ ನೀವೆಲ್ಲ ನಮ್ಮ ಕಾಲಿನ ಧೂಳು ಎಂದು ಹೇಳುವ ಮೂಲಕ ಇಂದಿನ ಕಂಪ್ಯೂಟರ್ ಸಿಂಪ್ಯೂಟರ್ ಯುಗದಲ್ಲೂ ಜಾತಿ ಶ್ರೇಣೀಕೃತ ಚಾತುರ್ವರ್ಣ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಹೊರಟಿರುವ ಬ್ರಾಹ್ಮಣಶಾಹಿ ಮನಃಸ್ಥಿತಿಯನ್ನು, ಅವರ ಅನಾಗರಿಕ ಅಸಮಾನತೆಗೆ ಧಿಕ್ಕಾರ ಹೇಳಿದ್ದಾರೆ. ಜಾತೀಯತೆಯನ್ನು ಪಿತ್ರಾರ್ಜಿತ ಆಸ್ಥಿಯೆನ್ನುವಂತೆ ಮೈಮರೆತು ಕುರುಡಾಗಿ ಆಚರಿಸುತ್ತಿರುವವರ ಕುರಿತು ಕವಿ ವ್ಯಂಗ್ಯವಾಡಿದ್ದಾರೆ. ಹುಸಿ ಪುರಾಣವನ್ನು ಮೂಲ ಚರಿತ್ರೆಯಲ್ಲಿ ಮರೆಮಾಚಲಾಗಿರುವ ದ್ರಾವಿಡ ಪರಂಪರೆಯ ಅನೇಕ ಸತ್ಯ ಸಂಗತಿಗಳನ್ನು ದಾಖಲಿಸುವ ಪ್ರಯತ್ನವೂ ಇಲ್ಲಿ ದಟ್ಟವಾಗಿ ಕಾಣತ್ತೇವೆ. ಎಷ್ಟೆಲ್ಲ ಆಟ ಆಡಿದರೂ, ಕೊನೆಯಲ್ಲಿ ಈ ಆಟ ವ್ಯರ್ಥವೆನಿಸುವುದುಂಟು. ಇಂಥ ಆಟಗಳೊಂದಿಗೆ ಗುರುತಿಸಿಕೊಳ್ಳುವುದೇ ಒಂದು ಆಟವಾಗಿ ಸ್ವಂತ ಚಿಂತನೆಗೆ ಬೆಂಬಲವೇ ಇಲ್ಲದಂತಾಗುತ್ತದೆ. ಈ ಆಟಗಳು ಆಟಗಾರರನ್ನು ಸಂಪೂರ್ಣ ಕಬಳಿಸಿ

ಪಟ್ಟು ಹಾಕಲೆಂದೇ ಕಾಯುತ್ತವೆ. ದೀಪಕ್ಕೆ ಬಿದ್ದ ಪತಂಗಗಳಂತೆ ಎಲ್ಲ ಸವಾಲು ಸೆಣಸುವಿಕೆಯಲ್ಲೇ ಬದುಕು ಮುಗಿಸಿಬಿಟ್ಟರೆ ಆ ಬದುಕಿಗೇನು ಅರ್ಥವಿದೆ. ಹಾಗೆಯೇ, ನೊಂದ ಮನಸ ಮೂಲೆಯಲ್ಲಿ ಪ್ರಕೃತಿಯ ನಿತ್ಯನೂತನ ತಂಗಾಳಿಯ ಮೃದು ಮಿದುವಾದ ಆಲಾಪನೆ ಎಂತಹ ಜಡಜೀವದವರಲ್ಲೂ ಉಲ್ಲಾಸ, ವಿನೋದ, ಸಹಜ ಕಾಮನೆಗಳನ್ನು ಕೆರಳಿಸುತ್ತದೆ. ದಲಿತ ಲೋಕ ಅದರಿಂದ ಹೊರಗಿಲ್ಲ. 'ಅರಳುವ ಹೂವು, ಕೂಗುವ ಹಕ್ಕಿ, ಕುಣಿದಾಡುವ ಕರು, ಹುಲ್ಲ ತುದಿಯ ಮಂಜಿನ ಹನಿ, ನೇಸರೋದಯದ ಹೂ, ನವಿರು ಕಿರಣ, ತಾಯ ಹಂಬಲಿಸಿ ನಗುವ ಕಂದನ ತುಟಿ, ಮುಗಿಲ ಮರೆಯಲ್ಲಿನ ಮಿಂಚಿನ ಸಂಚು, ಮಲ್ಲಿಗೆಯ ಗಾಢ ಕಂಪು, ನವಿಲ ಹೆಜ್ಜೆ, ಗಿಣಿಯ ಮಾತು, ಬಾನಿಗಂಟಿದ ಕಾಮನಬಿಲ್ಲು, ಕತ್ತಲಾಗಸದ ಚುಕ್ಕಿ ಸಂಭ್ರಮ, ನಲ್ಲ-ನಲ್ಲೆಯರ ಚುಂಬನ, ನೋವು-ನಲಿವಿನ ಅನಂತಗಾಮಿಯಾದ ವಿಷಾಧದ ವಿನಿಮಯ, ಹಿಡಿದ ಮಳೆಯಲಿ ನೆನೆವ ಪರಿ-ಇವು ನಮ್ಮ ಒಳಗಿನ ಲೋಕವನ್ನು ಪ್ರಚೋಧಿಸಿ, ತನುವ ಹರಸದಿದ್ದರೆ ಆ ಬದುಕಿನಿಂದೇನು ಲಾಭ? ಎನ್ನುವ ನೆಲೆಯಲ್ಲಿನ ಕವಿತೆಗಳೂ ತನ್ನ ರೆಕ್ಕೆ ಬಿಚ್ಚಿ ದಮನಿತ ಲೋಕದಲ್ಲಿ ಕಾವ್ಯವಾಗಿ ನರ್ತಿಸುತ್ತವೆ. 'ಬಚ್ಚಲ ಹುಳುಗಳು ಮೂರು ದಿನವಾದರೂ ಬದುಕು ಮಾಡುತ್ತವೆ!' ಎನ್ನುವ ಕವಿಯ ಬದುಕಿನ ಸಕರ್ದೇಶ್ಚರ್ಯದ ಹಿಂದೆ ಮನೋವಿಜ್ಞಾನದ ಪ್ರಭಾವ ಹೆಚ್ಚಾಗಿದೆ. ಲೋಕದ ಜ್ಞಾನವನ್ನು ಪಡೆದ ಯುವ ಮನಸ್ಸು ಇದರಿಂದ ಹೊರತಾಗಿ ಇನ್ನೇನು ಬಯಸಲು ಸಾಧ್ಯ. ಆದರೆ ಲೋಕದ ಸುಖ ಸಮಸ್ತ ಜೀವಿಗಳಿಗೆ ಸಮನಾಗಿ ಹಂಚಿಕೆಯಾಗಿರುತ್ತದೆ. ಅದು ಪ್ರಕೃತಿ ನಿಯಮ ಎನ್ನುವ ಸಾಮಾನ್ಯ ಜ್ಞಾನ ಎಲ್ಲರಿಗೂ ಇರಬೇಕಲ್ಲವೇ? ಅದಿದ್ದರೆ ಈ ಅಸಮಾನತೆಯ ಅಳವಂಡದ ಕೂಗು ಇರುತ್ತಿರಲಿ ಅಲ್ಲವೇ ಎನಿಸುತ್ತದೆ.

ಎಲ್ಲಕ್ಕೂ ಕೊನೆ ಎನ್ನುವುದಿದೆ;

ಒಟ್ಟಾರೆ ಅಧ್ಯಯನ ವಸ್ತು 'ಆಧುನಿಕೋತ್ತರ ದಲಿತ ಕಾವ್ಯ' ಅಂದರೆ 2000ದಿಂದ 2014ರ ವರೆಗೆ ರಚಿತವಾಗಿರುವ ಕವಿತೆಗಳು, ಕೇವಲ ಸಮಾಜದಲ್ಲಿನ ಅಸಮಾನತೆಯನ್ನು, ದುರಂತ, ಜ್ವಲಂತ ಸಮಸ್ಯೆಗಳನ್ನಷ್ಟೇ ಕಾವ್ಯವನ್ನಾಗಿಸದೆ; ಪರಿಹಾರವನ್ನೂ, ಸಮಾನತಾ ವಾದವನ್ನೂ ಮಂಡಿಸುತ್ತಿದೆ ಎಂದು ಹೇಳುವುದಾಗಿದೆ. ಇಲ್ಲಿ ಸಮ ಭಾವದಿಂದ, ಹೊಸ ಮಾರ್ಗದಲ್ಲಿ ಹೊಸ ಕ್ರಮದಲ್ಲಿ ಕಾವ್ಯವನ್ನು ನೋಡಬಹುದಾಗಿದೆ, ನೋಡಬೇಕಾಗಿದೆ. ನೋಡುವ ದೃಷ್ಟಿಕೋನದ ರೀತಿಯನ್ನು ಗುರ್ತಿಸುವುದು ಆಧುನಿಕೋತ್ತರ ಕನ್ನಡ ಕಾವ್ಯಗಳಲ್ಲಿನ ದಲಿತ ಧೋರಣೆಯ ಮುಖ್ಯ ವಿಶೇಷತೆಯಾಗಿದೆ. ದಲಿತೇತರ ಕವಿಗಳ ಕೆಲವು ಕವಿತೆಗಳು, ದಲಿತರ ಬದುಕಿನ ಬಗೆಗೆ ಮಾತನಾಡಿದರೂ ಅವು ಬಹುದೂರ ನಿಂತು ಸಪ್ಪೆಯಾಗಿ ವಿವರಿಸುತ್ತವೆ ಎನಿಸುತ್ತದೆ. ಭೋರ್ಗರೆದು ದುಮ್ಮಿಕ್ಕುತ್ತಾ ಹರಿಯುವ ನದಿಯ ಸುಳಿಯಲ್ಲಿ ಸಿಕ್ಕಿಕೊಂಡಿರುವವನ ದಿಗಿಲನ್ನು ಅವನು ಹೇಳುವುದಕ್ಕಿಂತ ದೂರನಿಂತು ನೋಡಿದವರು ಅರ್ಥೈಸಲು ಸಾಧ್ಯವೇ ಇಲ್ಲ. ಇದನ್ನು ಸಿಪಿಲೆಯವರ ಕಾವ್ಯದಲ್ಲಿ ಗುರುತಿಸಬಹುದು. 'ಬದುಕು ಸುಂದರ ಅದನ್ನು ಹಾಗೇ ನೋಡುವ ಬದಲು ಅಂದಗೆಡಿಸಿಕೊಳ್ಳುವ ಖಾಯಿಲೆಯಿಂದ ಹೊರಬರಬೇಕು' ಎನ್ನುವ ಕವಿಯ ಕಳಕಳಿ ಸರಿ ಆದರೆ ವಾಸ್ತವದಲ್ಲಿ ಈ ವಾತಾವರಣ ಇದೆಯೇ? ವಿಭಿನ್ನತೆಯ ಮಹಾಪೂರವೇ ಹರಿದಾಡುವ

ಭಾರತದಂತಹ ಬಹುಸಂಸ್ಕೃತಿಯ ಮಣ್ಣಿನಲ್ಲಿ ಸಮಾನತೆಯ ವಾತಾವರಣವಿದೆಯೇ? ಸುಖಾಸುಮ್ಮನೆ ಬದುಕು ಸುಂದರವಾಗಲು ವ್ಯವಸ್ಥೆ ಬಿಟ್ಟಿದೆಯೇ, 'ಬದುಕು ಸುಂದರವಾದುದು!' ಯಾವ ಮಗ್ಗುಲಿನಿಂದ ನೋಡುವ ಕ್ರಮ ಇದಾಗಿದೆ. ಬಹುಶಃ ಮನೋವೈಜ್ಞಾನಿಕವಾದ ಈ ಸಿದ್ಧಾಂತ ಶೋಷಕ ಸಮಾಜಕ್ಕೆ ತಿಳಿದಿದೆಯೇ? ಯಾಥಾಸ್ಥಿತಿ ಸಮಾಜದ ಗದ್ದುಗೆಯಲ್ಲಿ ಶತಮಾನದಿಂದ ಗೂಟ ಹೊಡೆಸಿಕೊಂಡು ಧರ್ಮ–ರಾಜಕಾರಣದ ಶಾಶ್ವತ ಪೀಠಾಧ್ಯಕ್ಷರಾಗಿರುವವರಿಗೆ ಈ ಸಂಪ್ರೀತಿಪೂರ್ಣ ಮನೋವೈಜ್ಞಾನಿಕವಾದ ಜೀವತತ್ವದ ಪಾಠದ ಅರಿವು ಇದೆಯೇ? ಅಥವಾ ತನ್ನಂತಾನೇ ಅದು ಅವರಿಗೆ ಅರ್ಥವಾಗುವವರೆಗೂ ಶೋಷಿತರು ಸುಂದರವಾದ ಬದುಕಿಗೆ ಆಹ್ವಾನಿಸುತ್ತಾ ರಗ್ಗುಹೊದ್ದು ಮಲಗಬೇಕೆ? ನವರಂಧ್ರಗಳಿಗೂ ಬೀಗ ಜಡಿದುಕೊಳ್ಳಬೇಕೇ? ಕಾಲಚಕ್ರದಲ್ಲಿನ ಎಲ್ಲವನ್ನೂ ಮುಗ್ಧವಾಗಿ ಸ್ವೀಕರಿಸಬೇಕೇ? ಎಂಬ ಆಕ್ರೋಶದ ಪ್ರಶ್ನೆ ದಮನಿತರಿಗೆ ಅನಿಸುವುದರಲ್ಲಿ ತಪ್ಪಿಲ್ಲ ಅಲ್ಲವೇ? ಹಳದಿ ಕಣ್ಣಿನಿಂದ ಲೋಕವನ್ನು ನಿಂದಿಸುವುದೇ ಇವರ ಬದುಕಲ್ಲ ಅಲ್ಲವೇ? ಇದು ನಿಜ ಎನ್ನುವುದಾದರೆ 'ಬದುಕನ್ನು ರೋಗಗ್ರಸ್ಥವಾಗಿ ನೋಡದೆ ಅದನ್ನು ಸವಿಯಬೇಕು' ಎನ್ನುವುದೇ ಒಂದು ಸಪ್ಪೆಯಾದ ಆಧಾರವಿಲ್ಲದ ಕಾವ್ಯ ವ್ಯಾಧಿ. ಇಂತಹ ಕಪೋಲ ಕಲ್ಪಿತ ವ್ಯಾಧಿಗಳ ಮಹಾಪೂರವನ್ನು ಆಧುನಿಕೋತ್ತರ ಕನ್ನಡ ಕಾವ್ಯ ವಿರೋಧಿಸುತ್ತದೆ.

'ದಲಿತ ಕಾವ್ಯ ಸ್ಥಾವರವಲ್ಲ; ಅದು ಜಂಗಮರೂಪಿಯಾದುದು'.

"ಹಾದೀಲಿ ಹೋಗ್ವೋರೆ ಹಾಡೆಂದು ಕಾಡ್ಬೇಡಿ।
ಹಾಡಲ್ಲ ನನ್ನ ಒಡಲುರಿ, ದೇವರೆ
ಬೆವರಲ್ಲ; ಅದು ನನ್ನ ಕಣ್ಣೀರು"
ಜನಪದ

ಗ್ರಂಥ ಸೂಚಿ

<u>ಮೂಲ ಪಠ್ಯಗಳು:</u>

1. ಅರವಿಂದ ಮಾಲಗತ್ತಿ: ನಾದ–ನಿನಾದ: ಪ್ರ. ಮುದ್ರಣ: 1999
2. ಅರವಿಂದ ಮಾಲಗತ್ತಿ: ಸಿಲಿಕಾನ್ ಸಿಟಿ ಮತ್ತು ಕೋಗಿಲೆ: ಪ್ರ. ಮುದ್ರಣ: 2003
3. ಅರವಿಂದ ಮಾಲಗತ್ತಿ: ಶ್ರೀ ಚಂಡಾಲ ಸ್ವರ್ಗಾರೋಹಣಂ: ಪ್ರ. ಮುದ್ರಣ: 2004
4. ಆನಂದ ಲಕ್ಕೂರು 'ಇತಿ ನಿನ್ನ ವಿಧೇಯನು' ಕ.ಸಂ. ಪ್ರ. ಮುದ್ರಣ: 2010 ನಂ.11/26,10ನೇ 'ಡಿ'ತಿರುವು 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರೋಡ್ ಮಹಾಲಕ್ಷ್ಮಿಪುರ, ಬೆಂಗಳೂರು.
5. ಬಂಜಗೆರೆ ಜಯಪ್ರಕಾಶ: 'ಮಹೂವಾ' ಪ್ರ. ಮುದ್ರಣ: 1992 ಚರ ಪ್ರಕಾಶನ: ಸಿಬ್ಬಂದಿ ಕ್ವಾಟ್ರಸ್, ಗ್ರಾಮೀಣ ಮಹಿಳಾ ಸ್ವ–ಉದ್ಯೋಗ ತರಬೇತಿ ಕೇಂದ್ರ, ಹಾರೋಹಳ್ಳಿ,
6. ಸಿಪಿಲೆ ಸತೀಶ್: 'ಒಂದು ಹಕ್ಕಿಯ ಕೂಗು' ಕ.ಸಂ. ಸಾಗವಾನಿ ಪ್ರಕಾಶನ, ನಂ.2962, "ಸುಮ" 13ನೇ 'ಬಿ' ಮುಖ್ಯ ರಸ್ತೆ, ವಿಜಯ ನಗರ, ಅತ್ತಿಗುಪ್ಪೆ, ಬೆಂಗಳೂರು ಪ್ರ. ಮುದ್ರಣ: 1998
7. ಸಿಪಿಲೆ ಸತೀಶ್: ಬಿರಿದ ಹೂಗಳ ನಡುವೆ ರವಿ ಪ್ರಕಾಶನ ನಂ.169, 5ನೇ ಮುಖ್ಯ ರಸ್ತೆ, ಬಿ.ಸಿ.ಸಿ. ಬಡಾವಣೆ, ವಿಜಯನಗರ, 2ನೇ ಹಂತ, ಬೆಂಗಳೂರು ಪ್ರ. ಮುದ್ರಣ: 2011
8. ಸಿಪಿಲೆ ಸತೀಶ್: ಕೊಂಬೆ ಕೊಂಬೆಯೂ ಚಿಗುರಿ ಅಂಕನಹಳ್ಳಿ ಪ್ರಕಾಶನ ಕೈಲಾಂಚ ಹೋಬಳಿ ಬನ್ನಿಕುಪ್ಪೆ ಅಂಚೆ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ. ಪ್ರ. ಮುದ್ರಣ: 2012
9. ಸುರೇಶ್ ಗೌತಮ್: ಬೆಳ್ಳಿಗೆರೆಯ ದೀವಿಗೆ ವಿಧೀಶಾ ಪ್ರಕಾಶನ, ದೇವರ ಹೊಸಹಳ್ಳಿ ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ. ಪ್ರ. ಮುದ್ರಣ: 2007
10. ಸುರೇಶ್ ಗೌತಮ್: ಮಾತು ಕೊಂದ ಭಾರತ ವಿಧೀಶಾ ಪ್ರಕಾಶನ, ದೇವರ ಹೊಸಹಳ್ಳಿ ಚನ್ನಪಟ್ಟಣ ತಾಲ್ಲೂಕು,

ರಾಮನಗರ.
ಪ್ರ. ಮುದ್ರಣ: 2010

11. ಹನಸೋಗೆ ಸೋಮಶೇಖರ್: ಭೀಮ ಪಲ್ಲವಿ
ಸ್ವಯಂ ಪ್ರಕಾಶನ: ಹನಸೋಗೆ,
ನಂ. ಎಂ–1220, ದ್ರಾವಿಡ,
3ನೇ ಮುಖ್ಯ ರಸ್ತೆ, 7ನೇ ತಿರುವು,
ವಿವೇಕಾನಂದ ನಗರ, ಮೈಸೂರು.
ಪ್ರ. ಮುದ್ರಣ: 2002

ಆಕರ ಗ್ರಂಥಗಳು

1. ಅರವಿಂದ ಮಾಲಗತ್ತಿ: ವಿಶ್ವತೋಮುಖ ಹೂ ಬಲುಭಾರ:
ಸಿರಾ ಪಬ್ಲಿಷಿಂಗ್ ಹೌಸ್,
ನಂ.83/1, ಕೆ.ಎಸ್.ಆರ್.ಟಿ.ಸಿ. ಬಡಾವಣೆ,
ಹನುಮಂತನಗರ, ಬನ್ನಿಮಂಟಪ,
ಪ್ರ. ಮುದ್ರಣ: 2010

2. ಕುಶಾಲ ಬರಗೂರು: ಅರವಿಂದ ಮಾಲಗತ್ತಿ ಅವರ ಕಾವ್ಯಾನುಸಂಧಾನ
ಈಶ್ವರಿ ಪ್ರಕಾಶನ 285/ಎಫ್6,
ಮೊದಲನೆ ಮಹಡಿ, 5ನೇ ವೆಸ್ಟ್ ಕ್ರಾಸ್,
ಉತ್ತರಾದಿ ಮಠದ ರಸ್ತೆ,
ಮೈಸೂರು–570004
ಪ್ರ. ಮುದ್ರಣ: 2005

3. ಕುಶಾಲ ಬರಗೂರು: ಧರೆಯೊಳಗಿನ ಬೇರು
ಜ್ಯೋತಿ ಪ್ರಕಾಶನ ಎಂ.45,
ಕರ್ನಾಟಕ ಬ್ಯಾಂಕ್ ರಸ್ತೆ,
ವಿವೇಕಾನಂದ ಸರ್ಕಲ್ ಹತ್ತಿರ,
ಮೈಸೂರು–570 023
ಪ್ರ. ಮುದ್ರಣ: 2011

4. ಸುಧೀಂದ್ರ. ಆರ್ ಬಂಜಗೆರೆ ಜಯಪ್ರಕಾಶರ ಕಾವ್ಯದ ನೆಲೆ

'ಅಕಾವ್ಯಕ್ಕೆ ಅರ್ಥ ಗೊತ್ತಿಲ್ಲ ನನಗೆ'
ಪ್ರಕೀರ್ಣ ಪ್ರಕಾಶನ, ನಂ: 59, 3ನೇ ಅಡ್ಡರಸ್ತೆ,
5ನೇ ಮುಖ್ಯ ರಸ್ತೆ, ಸರಸ್ವತಿ ಪುರಂ,
ಮೈಸೂರು.
ಪ್ರ. ಮುದ್ರಣ: 2009

5. ಸೋಸಲೆ ಸಿದ್ಧರಾಜು (ಸಂ): ಬಹುಜನ ಪದಗಳು ಬಹುಜನ ಪದಗಳು

ಪ್ರಬುದ್ಧ ಪ್ರಕಾಶನ:
ನಂ.9, 1ನೇ ಮೈನ್,
ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ,
ಎ ಬ್ಲಾಕ್, ಜೆ.ಪಿ.ನಗರ,
ಮೈಸೂರು.
ಪ್ರ. ಮುದ್ರಣ: 2012